# 2:8-15

# ಕ್ರಿಸ್ತನ ಸರ್ವಸಂಪೂರ್ಣತೆಯ ಕುರಿತ ಪೌಲನ ಚಿತ್ರಣ

ತನ್ನ ಪತ್ರಿಕೆಯ ಆರಂಭದಲ್ಲಿ ಕೊಲೊಸ್ಸೆಯವರಿಗೆ ವಂದನೆಗಳನ್ನು ಹೇಳಿದ ಬಳಿಕ, ಪೌಲನು ಅವರಿಗೆ ಯೇಸುವಿನ ಶ್ರೇಷ್ಠತೆಯ ಬಗ್ಗೆ ಮತ್ತು ಆತನ ಮೂಲಕವಾಗಿ ಅವರು ಪಡೆದುಕೊಂಡಿದ್ದ ಆತ್ಮೀಕ ಶುದ್ಧಗೊಳಿಸಲ್ಪಡುವಿಕೆಯ ಬಗ್ಗೆ ಹೇಳುತ್ತಾನೆ. ಅವರ ಪ್ರಯೋಜನಾರ್ಥವಾಗಿ ತಾನು ಯೇಸುವಿಗೆ ಮಾಡಿದ ವೈಯಕ್ತಿಕ ಸೇವೆಯ ಬಗ್ಗೆ ಹೇಳುವ ಮೂಲಕ ಪೌಲನು ಅವರನ್ನು ಪ್ರೋತ್ಸಾಹಗೊಳಿಸಲು ಅಪೇಕ್ಷಿಸಿದನು. ಕ್ರಿಸ್ತನಲ್ಲಿಯೇ ಸಕಲ ಜ್ಞಾನ ಮತ್ತು ತಿಳುವಳಿಕೆಯ ನಿಕ್ಷೇಪಗಳಿರುತ್ತವಾದ್ದರಿಂದ, ಬೇರೆ ಬೋಧಕರನ್ನು ಹಿಂಬಾಲಿಸುವ ವಿಷಯವಾಗಿ ಆತನು ಅವರನ್ನು ಎಚ್ಚರಿಸಿದನು.

ಹೀಗೆ ತನ್ನ ಪತ್ರಿಕೆಯ ಉಳಿದ ಭಾಗವನ್ನು ಬರೆಯಲು ಈ ಹಿನ್ನಲೆಯ ವಿಷಯವನ್ನು ಒದಗಿಸಿದವನಾಗಿ, ಪೌಲನು ಯೇಸುವಿನ ಪ್ರಾಮುಖ್ಯತೆಯ ಬಗ್ಗೆ ಒತ್ತಿ ಹೇಳಲು ಮುಂದಕ್ಕೆ ಸಾಗುತ್ತಾನೆ. ಕೊಲೊಸ್ಸೆಯವರು ಆತನಲ್ಲಿ ಪರಿಪೂರ್ಣರಾಗಿದ್ದರು, ಯಾಕೆಂದರೆ ಆತನ ಮೂಲಕವೇ ಅವರ ಹಿಂದಿನ ಪಾಪ ಜೀವಿತವು ನಿವಾರಿಸಲ್ಪಟ್ಟಿತ್ತು. ಅವರು ಆತ್ಮೀಕವಾಗಿ ಸತ್ತವರಾಗಿದ್ದರು ಆದರೆ ಈಗ ಅವರು ದೀಕ್ಷಾಸ್ನಾನದ ಮೂಲಕ ಯೇಸುವಿನ ಹೂಣಲ್ಪಡುವಿಕೆ ಮತ್ತು ಪುನರುತ್ಥಾನಗಳಲ್ಲಿ ಪಾಲುಗಾರರಾಗಿದ್ದರಿಂದ ಜೀವಿತರಾಗಿದ್ದರು ಮತ್ತು ಕ್ಷಮಿಸಲ್ಪಟ್ಟವರಾಗಿದ್ದರು. ಅವರ ಹೊಸ ಜೀವಿತಗಳ ಮೇಲೆ ಯೇಸುವು ಆಳ್ವಿಕೆ ಮಾಡುವವನಾಗಿದ್ದನು; ಅವರು ಆತನಿಗೆ ಅಧೀನರಾಗಬೇಕಿತ್ತು, ಯಾಕೆಂದರೆ ಆತನು ಅವರ ಅಪರಾಧಗಳನ್ನು ಕ್ಷಮಿಸಿ ಅವರೆಡೆಗೆ ದ್ವೇಷದಿಂದಿದ್ದ ಧರ್ಮಶಾಸ್ತ್ರವನ್ನು ಅಳಿಸಿ ಹಾಕಿದ್ದನು. ಅವರು ಈಗಾಗಲೆ ದಾರಿಯಿಂದ ತೊಲಗಿಸಲ್ಪಟ್ಟಿದ್ದ ಧರ್ಮಶಾಸ್ತ್ರದ ವಿಧಿಗಳನ್ನು ಅನುಸರಿಸಬೇಕಾಗಿರಲಿಲ್ಲ; ಅಲ್ಲದೆ ಆತ್ಮೀಕತೆಯ ಬೆಳವಣಿಗೆಗಾಗಿ ಯಾವ ಪ್ರಯೋಜನಕ್ಕೂ ಬಾರದಂಥ ಪ್ರಾಪಂಚಿಕ ಮೂಲತತ್ವಗಳಿಗೆ ತನ್ನಮ್ಮ ಅಧೀನಪಡಿಸಿಕೊಳ್ಳಲೂ ಬಾರದಿತ್ತು.

## ಮನುಷ್ಯರ ಬೋಧನೆಗಳಿಗೆ ವಶವಾಗದಂತಿರಲು ಒಂದು ಎಚ್ಚರಿಕೆ (2:8)

8ಕ್ರಿಸ್ತನನ್ನು ಅನುಸರಿಸದೆ ಮನುಷ್ಯರ ಸಂಪ್ರದಾಯಗಳನ್ನೂ ಪ್ರಾಪಂಚಿಕ

ಬಾಲಬೋಧೆಯನ್ನೂ ಅನುಸರಿಸುವವರು ನಿಮ್ಮಲ್ಲಿ ಬಂದು ಮೋಸವಾದ ನಿರರ್ಥಕ ತತ್ವಜ್ಞಾನಬೋಧನೆಯಿಂದ ನಿಮ್ಮ ಮನಸ್ಸನ್ನು ಕೆಡಿಸಿ ನಿಮ್ಮನ್ನು ವಶಮಾಡಿಕೊಂಡಾರು, ಎಚ್ಚರಿಕೆಯಾಗಿರ್ರಿ.

## "ತತ್ವಜ್ಞಾನಬೋಧನೆಯಿಂದ ನಿಮ್ಮ ಮನಸ್ಸನ್ನು ಕೆಡಿಸಿ ನಿಮ್ಮನ್ನು ವಶಮಾಡಿಕೊಂಡಾರು, ಎಚ್ಚರಿಕೆಯಾಗಿರ್ರಿ"

ಕೊಲೊಸ್ಸೆಯವರು ತಮ್ಮ ಜೀವಿತಗಳನ್ನು ಕಟ್ಟಿಕೊಂಡಿದ್ದ ದೃಢವಾದ ಅಸ್ತಿವಾರವು ಯೇಸುವೇ ಆಗಿದ್ದಾನೆಂಬುದನ್ನು 7ನೇ ವಚನದಲ್ಲಿ ಒತ್ತಿ ಹೇಳಿದ ಮೇಲೆ, ಪೌಲನು ಮುಂದುವರೆದು ತಮ್ಮನ್ನು ಬೇರೊಂದು ಬೋಧನೆಯೊಳಗೆ ನಡೆಸುವಂತೆ ಯಾರಿಗೂ ಅವಕಾಶವನ್ನು ಕೊಡಬಾರದೆಂದು ಅವರನ್ನು ಎಚ್ಚರಿಸುತ್ತಾನೆ. . . . **ಎಚ್ಚರಿಕೆಯಾಗಿರಿ** (βλέπετε, *blepete*, ಅಕ್ಷರಶಃ "ನೋಡಿರಿ")[1] ಎಂದು ಬರೆಯುವ ಮೂಲಕ, ಪೌಲನು ಒಂದು ಎಚ್ಚರಿಕೆಯ ಬಾವುಟವನ್ನು ಹಾರಿಸುವವನಾಗಿದ್ದನು. ಮನಸ್ಸನ್ನು ಕೆಡಿಸುವ ಮತ್ತು ವಶಮಾಡಿಕೊಳ್ಳಬಹುದಾದ ಅಪಾಯವು ವಾಸ್ತವಿಕವಾಗಿತ್ತು.

**ಯಾವನೂ** ಎಂಬುದು ಗ್ರೀಕ್‌ನ μή τις (*mē tis*) ಎಂಬ ಪದದ ಭಾವಾನುವಾದವಾಗಿರುತ್ತದೆ, ಅದು ಸಾಮಾನ್ಯವಾಗಿ ಕೆಲ ಹೆಸರಿಸಲ್ಪಡ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ಸೂಚಿಸುತ್ತದೆ. KJVಯೊಳಗೆ ಅನೇಕ ಸಂದರ್ಭಗಳಲ್ಲಿ, ಅದು "ಕೆಲವರು" ಎಂದು ಅನುವಾದಿಸಲ್ಪಟ್ಟಿದೆ (ಉದಾಹರಣೆಗೆ, ಮತ್ತಾಯ 9:3). ಕೊಲೊಸ್ಸೆಯ ಸಮುದಾಯದಲ್ಲಿನ ಕೆಲವು ಬೋಧಕರು ಸತ್ಯವನ್ನು ಬಿಟ್ಟು ಹೋಗುವಂತೆ ಸಭೆಯ ಸದಸ್ಯರನ್ನು ತಮ್ಮ ಪ್ರಾಪಂಚಿಕ ಜ್ಞಾನದ ಮೂಲಕವಾಗಿ ದಾರಿ ತಪ್ಪಿಸುವದಕ್ಕೆ ಪ್ರಯತ್ನಿಸುತ್ತಿದ್ದಾರೆಂಬುದು ಬಹುಶಃ ಪೌಲನಿಗೆ ಗೊತ್ತಿತ್ತು, ಅಥವಾ ಅದು ಆತನಿಗೆ ಪವಿತ್ರಾತ್ಮನಿಂದ ಪ್ರಕಟಗೊಳಿಸಲ್ಪಟ್ಟಿತ್ತೆಂದು ತೋರುತ್ತದೆ.

**ವಶಮಾಡಿಕೊಂಡಾರು** (συλαγωγέω, *sulagōgeō*) ಎಂದರೆ ಒಬ್ಬ ಸೆರೆಯಾಳಾಗಿ ಕರೆದೊಯ್ಯಲ್ಪಡುವದು ಎಂಬರ್ಥವಾಗಿದೆ. ಈ ಗ್ರೀಕ್ ಪದವು ಹೊಸ ಒಡಂಬಡಿಕೆಯಲ್ಲಿ ಈ ಸ್ಥಳದಲ್ಲಿ ಮಾತ್ರವೇ ದೊರಕುತ್ತದೆ. ಅದರ ಪ್ರಾಥಮಿಕ ಅರ್ಥವು "ಕೊಳ್ಳೆಯಾಗಿ ತೆಗೆದುಕೊಂಡು ಹೋಗಿ ನಿಯಂತ್ರಣ ಸಾಧಿಸಿಕೊಳ್ಳುವದು, ಸೆರೆಯಾಳಾಗಿ ಮಾಡು, ಲೂಟಿ ಮಾಡು . . . ಒಬ್ಬನನ್ನು ಸತ್ಯ [ದಿಂದ] ದೂರವಾಗಿ ತಪ್ಪಾದದ್ದರ ದಾಸನಾಗಿ ಕೊಂಡೊಯ್ಯುವ ಸಾದೃಶ್ಯದಲ್ಲಿ."[2] A. T. Robertson ಈ ಪದದ ಬಗ್ಗೆ ಹೀಗೆ ಹೇಳುತ್ತಾನೆ, "ಕ್ರಿಯಾಪದವು ವಿರಳವಾದದ್ದು, ಅದು ಇಲ್ಲಿ ಮತ್ತು ಅನಂತರದ ಬರಹಗಾರರಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ. Heliodorusನು ಈ ಪದವನ್ನು ಒಬ್ಬನ ಮಗಳನ್ನು ಹೊತ್ತೊಯ್ಯುವದನ್ನು (ಅಪಹರಣ) ಸೂಚಿಸಲು ಬಳಸುತ್ತಾನೆ; Aristaenetusನು, ಒಂದುಜ ಮನೆಯನ್ನು ಲೂಟಿ ಹೊಡೆಯುವದನ್ನು ಸೂಚಿಸಲು ಬಳಸುತ್ತಾನೆ; Nicetasನು, ಒಬ್ಬ ಮನೆಯ ದಾಸಿಯನ್ನು ಮೋಹಗೊಳಿಸಿ ವಶಮಾಡಿಕೊಳ್ಳುವದನ್ನು ಸೂಚಿಸಲು ಬಳಸುತ್ತಾನೆ."[3]

ಕೊಲೊಸ್ಸೆಯವರು ಅಂಧಕಾರದ ಅಧಿಕಾರ ಮತ್ತು ದಾಸತ್ವದೊಳಗಿಂದ ಬಿಡಿಸಲ್ಪಟ್ಟವರಾಗಿದ್ದರು (1:13), ಅದು ಪಾಪದ ಅಂಧಕಾರದಿಂದಾದ ಬಿಡುಗಡೆಯಾಗಿತ್ತು. ಪುನಃ ದಾಸತ್ವದೊಳಗೆ ಕೊಂಡೊಯ್ಯಲ್ಪಡುವ ಮೂಲಕ ದೋಚಿಕೊಳ್ಳಲ್ಪಡದಂತೆ

ಎಚ್ಚರವಾಗಿರಬೇಕೆಂದು ಪೌಲನು ಅವರಿಗೆ ಹೇಳುತ್ತಿದ್ದಾನೆ. ಅವರು ಪುನಃ ತಮ್ಮ ಹಳೆಯ ಜೀವನಗಳಿಗೆ ಹಿಂದಿರುಗುವಂತೆ ವಂಚಿಸಲ್ಪಡುವದನ್ನಾಗಲಿ ಅಥವಾ ಹೊಸ ದೋಷಪೂರಿತ ಉಪದೇಶಗಳ ಮೂಲದಿಂದ ವಶಮಾಡಿಕೊಳ್ಳಲ್ಪಡಕೂಡದೆಂದು ಬಯಸಿದನು. ಸುಳ್ಳು ಬೋಧಕರು ಅವರನ್ನು ಯೇಸುವಿನಿಂದ ದೂರವಾಗಿ ಹೋಗುವಂತೆ ಮೋಸದಿಂದ ಮನಸ್ಸು ಕೆಡಿಸದಂತೆ ಎಚ್ಚರಿಕೆಯಾಗಿರತಕ್ಕದ್ದು.

ಪೌಲನು ಅವರನ್ನು **ತತ್ವಜ್ಞಾನಬೋಧನೆಯಿಂದ** (φιλοσοφία, *philosophia*), "ಜ್ಞಾನದ ಮೇಲಿನ ಪ್ರೀತಿ"ಯಿಂದ ದೂರವಿರಬೇಕೆಂದು ಎಚ್ಚರಿಸಿದನು. ಈ ಗ್ರೀಕ್ ಪದವು ಹೊಸ ಒಡಂಬಡಿಕೆಯಲ್ಲಿ ಇಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ. ತತ್ವಜ್ಞಾನವು ಯಾವಾಗಲೂ ಕೆಟ್ಟದ್ದೆಂದು ಪೌಲನು ಹೇಳಲಿಲ್ಲ. ಗ್ರೀಕ್.ರೊಳಗೆ, ಈ ಪದವು ಜ್ಞಾನದ ಮೇಲಿನ ಪ್ರೀತಿಯ ನಿಮಿತ್ತದಿಂದ ಸತ್ಯವನ್ನು ತಿಳಿದುಕೊಳ್ಳುವದಕ್ಕೆ ಅಥವಾ ಜ್ಞಾನ ಸಂಪಾದಿಸಿಕೊಳ್ಳುವದಕ್ಕೆ ಒಬ್ಬ ಮನುಷ್ಯನು ಮಾಡುವ ಶ್ರೇಷ್ಠವಾದ ಬುದ್ಧಿಯ ಪ್ರಯಾಸವನ್ನು ಸೂಚಿಸುವದಾಗಿತ್ತು. ಅದು ಮೊದಲು ಒಂದು ಉದಾತ್ತವಾದ ಅರ್ಥದಲ್ಲಿ ಬಳಸಲ್ಪಡುತ್ತಿತ್ತು. ತಮ್ಮನ್ನು ಜ್ಞಾನಿಗಳೆಂದು ಬಡಾಯಿ ಕೊಚ್ಚಿಕೊಳ್ಳುವ ಮತ್ತು ಜ್ಞಾನಿಗಳೆಂದು ಕರೆದುಕೊಳ್ಳುವ ಬದಲಾಗಿ, ಈಗಾಗಲೇ ಪರಿಪೂರ್ಣವಾದ ಜ್ಞಾನವನ್ನು ಗಳಿಸಿಕೊಂಡಿದ್ದಾರೋ ಎಂಬಂತೆ, ತಮ್ಮನ್ನು ಕೇವಲ ಜ್ಞಾನವನ್ನು ಪ್ರೀತಿಸುವವರು ಎಂಬದಾಗಿ ಕರೆದುಕೊಳ್ಳುತ್ತಿದ್ದರು.

ಅಲೆಗ್ಸಾಂಡ್ರಿಯಾದ Clementನಂತಹ ಪ್ರಾಚೀನ ಬರಹಗಾರರು ತಕ್ಷಣವೇ ಪೌಲನು ಎಲ್ಲಾ ತತ್ವಜ್ಞಾನವನ್ನೂ ಖಂಡಿಸುತ್ತಿಲ್ಲ ಎಂದು ವಾದ ಮಾಡಿದ್ದರು.[4] Philoನು ನಿಜವಾದ ತತ್ವಜ್ಞಾನವನ್ನು ಪ್ರಶಂಸಿಸಿದನು, ಆದರೆ ತಮ್ಮ ವಾಕ್ಚಾತುರ್ಯದಿಂದ ಸತ್ಯವನ್ನು ವಿರೂಪಗೊಳಿಸಿದವರನ್ನು ಖಂಡಿಸಿದನು.[5]

ತಿಮೊಥೆಯನಿಗೆ ಬರೆಯುವ ವೇಳೆ, ಪೌಲನು "ಜ್ಞಾನೋಪದೇಶವೆಂದು ಸುಳ್ಳಾಗಿ ಹೇಳಿಕೊಳ್ಳುವ ಬೋಧನೆಗೆ ಸಂಬಂಧಪಟ್ಟ ಪ್ರಾಪಂಚಿಕವಾದ ಹರಟೆ ಮಾತುಗಳಿಗೂ ವಿವಾದಗಳಿಗೂ ನೀನು ದೂರವಾಗಿರು" ಎಂದು ಎಚ್ಚರಿಸಿದನು (1 ತಿಮೊಥೆ 6:20). ಆತನು ಕೊಲೊಸ್ಸೆಯವರನ್ನು ಮನುಷ್ಯ ಜ್ಞಾನದ ಮೇಲೆ ಆಧಾರವಾಗಿರುವ ಉಪದೇಶವನ್ನು ಹಿಂಬಾಲಿಸುವ ಬದಲಾಗಿ ಕ್ರಿಸ್ತನ ಜ್ಞಾನಕ್ಕೆ ಕಿವಿಗೊಡಿರಿ ಎಂದು ಪ್ರೋತ್ಸಾಹಿಸಿದನು. ಆತನು ಒಟ್ಟಾರೆಯಾಗಿ ತತ್ವಜ್ಞಾನವನ್ನು ಖಂಡಿಸುತ್ತಿಲ್ಲ, ಆದರೆ ಕ್ರಿಸ್ತನ ಬೋಧನೆಗೆ ವಿರುದ್ಧವಾಗಿರುವ ತತ್ವಜ್ಞಾನವನ್ನಷ್ಟೇ ಖಂಡಿಸುತ್ತಿದ್ದಾನೆ. ಆ ದಿನಗಳಲ್ಲಿ, ವಿಗ್ರಹಾರಾಧಕ ಜನಾಂಗಗಳು ಮತ್ತು ಯೆಹೂದ್ಯ ತತ್ವ ಸಿದ್ಧಾಂತಗಳು ಎರಡರಲ್ಲಿಯೂ, ಇದ್ದ ತತ್ವಜ್ಞಾನವು ದೇವರ ಕುರಿತ ಸಿದ್ಧಾಂತಗಳು ಮತ್ತು ಪ್ರಪಂಚದ ಕುರಿತ ದೃಷ್ಟಿಕೋನಗಳ ಬಗ್ಗೆಯಾಗಿದ್ದವು, ಅವುಗಳಲ್ಲಿ ಅನೇಕ ತತ್ವಜ್ಞಾನಗಳು ಕ್ರೈಸ್ತ ಬೋಧನೆಗೆ ವಿರುದ್ಧವಾಗಿದ್ದವು. ತತ್ವಜ್ಞಾನಗಳು ನಂಬಿಕೆಯನ್ನು ನಾಶಗೊಳಿಸುವಂತಹ ಸಿದ್ಧಾಂತಗಳನ್ನು ಮುಂದಿಡುತ್ತಿದ್ದವು.

ಎಪಿಕೂರೊಯ ಮತ್ತು ಸ್ತೋಯಿಕ "ತತ್ವಜ್ಞಾನಿಗಳು" ಪೌಲನೊಂದಿಗೆ ಪೇಟೆಯಲ್ಲಿ ಮತ್ತು ಅರಿಯೊಪಾಗದಲ್ಲಿ ವಾದಿಸಿದರು (ಅಪೊಸ್ತಲರ ಕೃತ್ಯಗಳು 17:18, 19). ಈ ಮನುಷ್ಯರು ತಮ್ಮ ಯೋಚನೆಯನ್ನು ದೇವರ ಪ್ರಕಟನೆಗೆ ಬದಲಾಗಿ ಮನುಷ ಜ್ಞಾನದ ಮೇಲೆ ಆಧಾರ ಮಾಡಿಕೊಂಡಿದ್ದರು.

**“ಮೋಸವಾದ ನಿರರ್ಥಕ”**

ಇಲ್ಲಿ “ತತ್ವಜ್ಞಾನ”ವು ಮೋಸವಾದ ನಿರರ್ಥಕ[6] (κενὴ ἀπάτη, *kenē apatē*) ದೊಂದಿಗೆ ನಿಕಟವಾದ ಸಂಬಂಧ ಹೊಂದಿರುತ್ತದೆ. ಗ್ರೀಕ್.ನಲ್ಲಿ, *philosophia* ಮತ್ತು *apatē* ಗಳ ಮುಂದೆ ಒಂದೇ ಗುಣವಾಚಿಯಿರುತ್ತದೆ. ಅವೆರಡರಲ್ಲಿ ಯಾವದರ ಮುಂಚೆಯೂ ಉಪಸರ್ಗವಿರುವದಿಲ್ಲ. ಈ ಪದಗುಚ್ಛವನ್ನು “ನಿಷ್ಪ್ರಯೋಜಕರವಾದ ಮನುಷ ಕಲ್ಪಿತ ತತ್ವಜ್ಞಾನ” ಅಥವಾ “ನಿರರ್ಥಕ ಮೋಸತನವಾದ, ತತ್ವಜ್ಞಾನ” ಎಂದು ಅನುವಾದಿಸಬಹುದು.

ಪೌಲನು ಮೋಸಕರವಾದ ನಿರರ್ಥಕತೆಯಿಂದ ಕೂಡಿದ ಮತ್ತು ಸುಳ್ಳಾದ, ಆದರೆ ಆಕರ್ಷಕ ಮನುಷ ತರ್ಕದಿಂದ ಕೂಡಿದ್ದ ದಾರಿ ತಪ್ಪಿಸುವಂತಹ ಬುದ್ಧಿವಂತಿಕೆಯ ಊಹಾಕಲ್ಪನೆಗಳನ್ನು ಖಂಡಿಸುತ್ತಿದ್ದಾನೆ. ಅಂಥ ತತ್ವಜ್ಞಾನವು ಸತ್ಯ, ಆಂತರಿಕ ಶಕ್ತಿ, ನಿರೀಕ್ಷೆ, ಮತ್ತು ಆತ್ಮೀಕ ಜೀವ ಇಲ್ಲದ್ದಾಗಿತ್ತು. ಅದು ಮೋಸಕರವಾಗಿತ್ತು ಯಾಕೆಂದರೆ ಅದಕ್ಕಿದ್ದ ರಂಜನಾತ್ಮಕತೆಯು ಅದರ ಶೂನ್ಯತೆಯನ್ನು, ನಾಶನದ ಸ್ವಭಾವವನ್ನು ಮರೆ ಮಾಡುವದಾಗಿತ್ತು. ಪೌಲನು ಸಹೋದರರನ್ನು ಕ್ರಿಸ್ತನಲ್ಲಿನ ಜ್ಞಾನ ಮತ್ತು ಜೀವದಿಂದ ದೂರಕ್ಕೆ ನಡಿಸಲ್ಪಡದಂತೆ ಎಚ್ಚರಿಕೆಯಾಗಿರಬೇಕೆಂದು ಹೇಳುತ್ತಿದ್ದಾನೆ.

ತತ್ವಜ್ಞಾನಿಗಳು, ಜ್ಞಾನವನ್ನು ಹುಡುಕುವವರಾಗಿ ಕೇವಲ ಮನುಷ್ಯ ತರ್ಕದ ಮೇಲೆ ಅವಲಂಭಿತರಾಗಿದ್ದರು, ಹೊರತು ದೈವಿಕ ಪ್ರಕಟನೆಯ ಮೇಲೆ ಅಲ್ಲ. ಪೌಲನು ಸಮಸ್ಯೆಯನ್ನು ಅಂತಹ ಒಂದು ದಾರಿಯಲ್ಲಿಯೇ ವಿವರಿಸುತ್ತಾನೆ: “ಹೇಗಂದರೆ ಲೋಕವು ಜ್ಞಾನವೆನಿಸುವ ಮಾರ್ಗದಿಂದ ದೇವರನ್ನು ತಿಳುಕೊಳ್ಳದೆ ಹೋದದ್ದು ದೇವರ ಜ್ಞಾನದ ಸಂಕಲ್ಪವೆ; ಹೀಗಾದ ಮೇಲೆ ಹುಚ್ಚು ಮಾತು ಎಣಿಸಿಕೊಂಡಿರುವ ನಮ್ಮ ಪ್ರಸಂಗದಿಂದಲೇ ನಂಬುವವರನ್ನು ರಕ್ಷಿಸುವದು ದೇವರಿಗೆ ಒಳ್ಳೇದೆಂದು ತೋಚಿತು” (1 ಕೊರಿಂಥ 1:21). ಸುಳ್ಳು ಬೋಧಕರು ಸತ್ಯವನ್ನು ಕಲುಷಿತಗೊಳಿಸುವ ಮೂಲಕ ಜನರನ್ನು ಅದರಿಂದ ದೂರಕ್ಕೆ ನಡಿಸುತ್ತಾರೆ. ಸುಳ್ಳು ಬೋಧನೆಯು ಸಾಮಾನ್ಯವಾಗಿ ತನ್ನನ್ನು ಆಕರ್ಷಕಗೊಳಿಸಲು ಮತ್ತು ಅದರ ಸುಳ್ಳುತನವನ್ನು ಮರೆ ಮಾಡಿಕೊಳ್ಳುವದಕ್ಕೆ ಸಾಕಷ್ಟು ಸತ್ಯವನ್ನು ಒಳಗೊಂಡಿರುತ್ತದೆ. ಕೆಲವು ಸುಳ್ಳು ಸಿದ್ಧಾಂತಗಳು ತಮ್ಮನ್ನು ಅಪಾಯಕರ ಮತ್ತು ಶಾಪಗ್ರಸ್ತ ಮಾಡಿಕೊಳ್ಳಲು ಸಾಕಾಗುವಷ್ಟೇ ತಪ್ಪುಗಳನ್ನು ಒಳಗೊಂಡಿರುತ್ತವೆ.

ಯೇಸು ಅಪೊಸ್ತಲರಿಗೆ ಸತ್ಯವನ್ನು ಕೊಟ್ಟನು (ಯೋಹಾನ 1:17), ಅವರು ಅನಂತರ ಪವಿತ್ರಾತ್ಮನಿಂದ ಸಕಲ ಸತ್ಯದೊಳಗೆ ನಡಿಸಲ್ಪಟ್ಟರು (ಯೋಹಾನ 16:13). ಯೇಸುವಿನ ಬೋಧನೆಯನ್ನು ಕೆಲವು ಊಹಾಕಲ್ಪಿತ ತತ್ವಜ್ಞಾನದ ಮೂಲಕವಾಗಿ ವಿಚಾರಿಸುವ ಬದಲಾಗಿ, ಕ್ರೈಸ್ತರು ವಾಕ್ಯವನ್ನು ದೀನತೆಯುಳ್ಳವರಾಗಿ ಅತ್ಯಂಥ ಗೌರವದಿಂದ ವಿಚಾರಿಸತಕ್ಕದ್ದು. ದೇವರ ಸಂದೇಶವನ್ನು ಅರ್ಥಮಾಡಿಕೊಳ್ಳಲು ನಾವು ಪಡುವ ಅತ್ಯಾಸಕ್ತಿಯ ಪ್ರಯಾಸದಲ್ಲಿ, ನಾವು ಪೂರ್ವಕಲ್ಪಿತ ಅಭಿಪ್ರಾಯವಿಲ್ಲದೆ ಇರತಕ್ಕದ್ದು. ವಾಕ್ಯದಲ್ಲಿ ಮನುಷ್ಯ ಯೋಚನೆಯನ್ನು ಹುಡುಕುವದಕ್ಕಾಗಿ ಓದುವ ಬದಲಾಗಿ, ನಾವು ದೇವರ ಜ್ಞಾನವನ್ನು ಹುಡುಕತಕ್ಕದ್ದು.

**“ಮನುಷ್ಯರ ಸಂಪ್ರದಾಯಗಳನ್ನೂ”**

ಸಂಪ್ರದಾಯ (παράδοσις, *paradosis*) ಎಂದರೆ “ಪರಂಪರೆಯಾಗಿ ಬಂದದ್ದು,”

ಉದಾಹರಣೆಗೆ, ಬೋಧನೆಗಳು ಮತ್ತು ಆಚಾರಗಳು ಎಂದರ್ಥವಾಗಿದೆ. ಒಂದು ಸಂಪ್ರದಾಯವು, ಅದರ ಪರಂಪರೆಯ ಮೂಲದ ಆಧಾರದಲ್ಲಿ ಒಳ್ಳೆಯದು ಅಥವಾ ಕೆಟ್ಟದ್ದು ಆಗಿರಬಲ್ಲದು. ಒಂದು ಬೋಧನೆಯು ಒಬ್ಬ ಪ್ರೇರಿತ ಬೋಧಕನ ಮೂಲಕ ದೇವರಿಂದ ಕೊಡಲ್ಪಟ್ಟಿದ್ದರೆ, ಅದು ಒಳ್ಳೇದು; ಹೇಗೂ, ಅದಕ್ಕೆ ಒಬ್ಬ ಮನುಷ್ಯನು ಮೂಲನಾಗಿದ್ದರೆ, ಅದು ಕೆಟ್ಟದ್ದು. ದೇವರ ಬೋಧನೆಗೆ ವಿರುದ್ಧವಾಗಿರುವ ಯಾವದನ್ನೇ ಆಗಲಿ ತಿರಸ್ಕರಿಸತಕ್ಕದ್ದು.

1 ಕೊರಿಂಥ 11:2ರಲ್ಲಿ, ತಾನು ಅವರಿಗೆ ತಿಳಿಸಿ ಕೊಟ್ಟ ಸಂಪ್ರದಾಯಗಳನ್ನು ಅನುಸರಿಸಿ ನಡೆಯುವದಕ್ಕಾಗಿ ಪೌಲನು ಕೊರಿಂಥದವರನ್ನು ಪ್ರಶಂಸಿಸುತ್ತಾನೆ. ಆತನು ಥೆಸಲೋನಿಕದವರಿಗೆ ಹೊಂದಿದ ಬೋಧನೆಯನ್ನು ಅನುಸರಿಸದೆ ಅಕ್ರಮವಾಗಿ ನಡೆಯುವ ಪ್ರತಿ ಸಹೋದರನಿಂದ ದೂರವಿರಬೇಕೆಂದು ಆಜ್ಞಾಪಿಸುತ್ತಾನೆ (2 ಥೆಸಲೋನಿಕ 3:6) ಮತ್ತು ತಾನು ಅವರಿಗೆ ಕಲಿಸಿದ್ದ ಸಂಪ್ರದಾಯಗಳನ್ನು ಜಾಗ್ರತೆಯಿಂದ ಅನುಸರಿಸಬೇಕೆಂದು ಹೇಳುತ್ತಾನೆ (1 ಥೆಸಲೋನಿಕ 2:15). ಇವುಗಳು ಒಳ್ಳೆಯ ಸಂಪ್ರದಾಯಗಳಾಗಿದ್ದವು ಯಾಕೆಂದರೆ ಅವು ದೇವರಿಂದ ಕೊಡಲ್ಪಟ್ಟಿದ್ದವು.

ತಿರಸ್ಕರಿಸಬೇಕಾದ ಸಂಪ್ರದಾಯಗಳಲ್ಲಿ ಯೆಹೂದಿ, ವಿಗ್ರಹಾರಾಧಕ ಜನಾಂಗದ, ಮತ್ತು ದೇವರ ಸಂಪ್ರದಾಯಗಳಿಗೆ ವಿರುದ್ಧವಾಗಿರುವ ಯಾವದೇ ಮನುಷ್ಯ ಸಂಪ್ರದಾಯಗಳು ಸೇರಿದ್ದವು. ಹಿರಿಯರಿಂದ ಕಲಿಸಲ್ಪಟ್ಟ ಸಂಪ್ರದಾಯಗಳನ್ನು ಮೀರಿದ್ದಕ್ಕಾಗಿ ಯೆಹೂದ್ಯರು ಯೇಸುವನ್ನು ಖಂಡಿಸಿದರು. ಅವರ ಸಂಪ್ರದಾಯಗಳು ದೇವರ ಆಜ್ಞೆಗಳನ್ನು ಉಲ್ಲಂಘನೆ ಮಾಡಿರುತ್ತವೆ ಮತ್ತು ಅವುಗಳನ್ನು ವ್ಯರ್ಥಮಾಡಿರುತ್ತವೆಂದು ಹೇಳುವ ಮೂಲಕ ಅವರಿಗೆ ಪ್ರತ್ಯುತ್ತರ ನೀಡಿದನು (ಮತ್ತಾಯ 15:2-6; ಮಾರ್ಕ 7:3-13). ದೇವರ ಆರಾಧನೆಯಲ್ಲಿ ಮನುಷ್ಯ ಆಜ್ಞೆಗಳು ನಿಷ್ಪ್ರಯೋಜಕವಾಗಿದ್ದವು (ಮಾರ್ಕ 7:7). ಯೆಹೂದಿ ಸಂಪ್ರದಾಯಗಳನ್ನು ಅನುಸರಿಸುವದರಲ್ಲಿ ಪೌಲನು ವೈರಾಗ್ಯವುಳ್ಳವನಾಗಿದ್ದನು (ಗಲಾತ್ಯ 1:14). ರೋಮನ್ ಸಾಮ್ರಾಜ್ಯದ ಪೂರ್ವ ದಿಕ್ಕಿನ ಕ್ಷೇತ್ರದಲ್ಲೆಲ್ಲಾ ಚದುರಿಸಲ್ಪಟ್ಟಿರುವ ಮೂಲಪಿತೃಗಳನ್ನು ಸೂಚಿಸುವ ವೇಳೆ ಪೇತ್ರನು ಸಂಪ್ರದಾಯಗಳನ್ನು ಉಲ್ಲೇಖಿಸಿದನು (1 ಪೇತ್ರ 1:1, 18). ಈ ಸಂಪ್ರದಾಯಗಳು ದೇವರೊಂದಿಗೆ ಜನರ ಸಂಬಂಧವನ್ನು ಸರಿಪಡಿಸಲಿಲ್ಲ.

ಪೌಲನು ಕೊಲೊಸ್ಸೆಯವರಿಗೆ ಎಚ್ಚರಿಕೆ ಕೊಟ್ಟಿದ್ದೇನೆಂದರೆ ಅವರು ಮನುಷ್ಯ ಸಂಪ್ರದಾಯಗಳ ಮೂಲಕ ಕ್ರಿಸ್ತನಿಂದ ದೂರಕ್ಕೆ ಒಯ್ಯಲ್ಪಡದಂತೆ ಇರಬೇಕು ಎಂಬದೆ. ಯೇಸು ತನ್ನ ಶಿಷ್ಯರಿಗೆ ತಾವು ದೀಕ್ಷಾಸ್ನಾನ ಮಾಡಿಸುವವರಿಗೆ ತಾನು ಬೋಧಿಸಿದ್ದನ್ನೆಲ್ಲಾ ಅವರಿಗೆ ಉಪದೇಶಿಸಬೇಕೆಂದು ಹೇಳಿದನು (ಮತ್ತಾಯ 28:20). ಬೇರೆ ಇನ್ನಾವದೇ ಬೋಧನೆಗಳು ಮತ್ತು ಆಜ್ಞೆಗಳು — ಮನುಷ್ಯನಿಂದ ಬಂದವುಗಳೇ ಹೊರತು ಕ್ರಿಸ್ತನಿಂದಲ್ಲ. ಅಂಥ ಆಜ್ಞೆಗಳನ್ನು ತಿರಸ್ಕರಿಸತಕ್ಕದ್ದು (ತೀತನಿಗೆ 1:14).

ಮಹಾಯಾಜಕರು ಮತ್ತು ಶಾಸ್ತ್ರಿಗಳು ಯೇಸುವಿಗೆ ಒಂದು ಪ್ರಾಮುಖ್ಯವಾದ ಪ್ರಶ್ನೆಯನ್ನು ಕೇಳಿದರು: "ನೀನು ಯಾವ ಅಧಿಕಾರದಿಂದ ಇದನ್ನೆಲ್ಲಾ ಮಾಡುತ್ತೀ? ಈ ಅಧಿಕಾರವನ್ನು ನಿನಗೆ ಯಾರು ಕೊಟ್ಟರು" (ಮತ್ತಾಯ 21:23). ಅದಕ್ಕೆ ಪ್ರತ್ಯುತ್ತರವಾಗಿ, ಯೇಸು ಅವರಿಗೆ ದೀಕ್ಷಾಸ್ನಾನ ಮಾಡಿಸುವ ಅಧಿಕಾರವು "ಯೋಹಾನನಿಗೆ ಎಲ್ಲಿಂದ ಬಂತು?

ಪರಲೋಕದಿಂದಲೋ? ಮನುಷ್ಯರಿಂದಲೋ" (ಮತ್ತಾಯ 21:25). ಯೇಸುವಿನ ಚಿತ್ತವೇನೆಂದು ನಿಷ್ಕರ್ಷೆ ಮಾಡಿಕೊಳ್ಳಬೇಕೆಂದರೆ, ನಾವು ಒಂದು ಆಚಾರದ ಕುರಿತಾಗಿ ಮೂರು ಪ್ರಶ್ನೆಗಳನ್ನು ಕೇಳಿಕೊಳ್ಳತಕ್ಕದ್ದು: "ನಾವು ಇದನ್ನು ಯಾವ ಅಧಿಕಾರದಿಂದ ಮಾಡುತ್ತಿದ್ದೇವೆ?"; ಈ ಆಚಾರವನ್ನು ಮಾಡುವದಕ್ಕೆ ಯಾರು ಅಧಿಕಾರವನ್ನು ಕೊಟ್ಟರು?"; ಮತ್ತು ಅದು ಪರಲೋಕದಿಂದಲೋ ಅಥವಾ ಮನುಷ್ಯರಿಂದಲೋ?"

ಯೇಸುವಿನ ಬೋಧನೆಯು ನಿರ್ಬಂಧತೆಯುಳ್ಳದ್ದು; ಧಾರ್ಮಿಕ ಆಚಾರಗಳು ಆತನ ಆಜ್ಞೆಗಳ ಮೀತಿಯೊಳಗೆ ಇರಬೇಕು. ಮನುಷ್ಯರಿಂದ ಆರಂಭಗೊಂಡ ಸಂಪ್ರದಾಯಗಳಿಗೆ ಬದಲಾಗಿ, ಯೇಸುವು ಏನು ಕಲಿಸಿದನೋ ಅದನ್ನು ಮಾತ್ರವೇ ಕ್ರೈಸ್ತರು ಆಚರಿಸತಕ್ಕದ್ದು ಮತ್ತು ಬೇರೆ ಯಾವ ಸಿದ್ಧಾಂತವನ್ನೂ ಅನುಸರಿಸಬಾರದು (1 ತಿಮೊಥೆ 1:3; 6:3, 4). ಬೇರೊಂದು ಸುವಾರ್ತೆಯನ್ನು ಸಾರುವವರು ಶಾಪಗ್ರಸ್ತರು (ಗಲಾತ್ಯ 1:7, 8). ಯೇಸು ಒಂದು ಆಯ್ಕೆಯನ್ನು ಮಾಡಿದ್ದಾನೆಂದರೆ, ಕ್ರೈಸ್ತರು ಅದನ್ನು ಗೌರವಿಸತಕ್ಕದ್ದು. ಯೇಸು ನಿರ್ದಿಷ್ಟವಾಗಿ ಯಾವದೇ ಆಯ್ಕೆಯನ್ನು ನೀಡದಿರುವ ಕ್ಷೇತ್ರಗಳಲ್ಲಿ ಮಾತ್ರವೇ ನಮಗೆ ಆದುಕೊಳ್ಳುವ ಸ್ವಾತಂತ್ರ್ಯವಿರುತ್ತದೆ.

## "ಪ್ರಾಪಂಚಿಕ ಬಾಲಬೋಧೆಯನ್ನೂ ಅನುಸರಿಸುವವರು"

ಪೌಲನು **ಪ್ರಾಪಂಚಿಕ ಬಾಲಬೋಧೆ** (στοιχεῖα τοῦ κόσμου, *stoicheia tou kosmou*) ವಿಷಯದಲ್ಲಿ ಸಹ ಎಚ್ಚರಿಕೆಯನ್ನು ಕೊಟ್ಟನು, ಅಂದರೆ, ಲೋಕದ ಜನರಿಂದ ಸೂತ್ರೀಕರಿಸಲ್ಪಟ್ಟಂಥ ಕ್ರೈಸ್ತೇತರ ಮೂಲತತ್ವಗಳು. ಈ ಪದಗುಚ್ಛದ ವಿಷಯದಲ್ಲಿ ವಿವಾದವೊಂದು ಉದ್ಭವವಾಗಿರುತ್ತದೆ, ಅದು 20ನೇ ವಚನ ಮತ್ತು ಗಲಾತ್ಯ 4:3, ೯ರಲ್ಲಿರುವ ಪರಿಭಾಷೆಯ ರೀತಿಯಲ್ಲಿಯೇ ಇರುತ್ತದೆ. "ಬಾಲಬೋಧೆ" ಎಂಬುದು ಗ್ರೀಕ್.ನಲ್ಲಿ ಏಕ ಪದವಾಗಿರುತ್ತದೆ, ಅದು *stoicheia* ಎಂಬ ನಾಮಪದವಾಗಿದೆ. ಹೊಸ ಒಡಂಬಡಿಕೆಯ ಇತರ ವಾಕ್ಯಭಾಗಗಳಲ್ಲಿ ಈ ಪದವು ಎರಡು ವಿಧಗಳಲ್ಲಿ ಬಳಸಲ್ಪಟ್ಟಿದೆ: ಕ್ರೈಸ್ತತ್ವದ ಮೂಲಪಾಠಗಳು (ಇಬ್ರಿಯ 5:12) ಮತ್ತು ಭೌತವಸ್ತುವಾದ ಅಂಶಗಳು (2 ಪೇತ್ರ 3:10, 12). ಈ ಪದಗಳ ಅರ್ಥವು ಯಾವದೇ ಸಂಗತಿಯ ಮೂಲ ಅಥವಾ ಪ್ರಾಥಮಿಕ ಅಂಶಗಳು ಎಂಬ ಅರ್ಥವನ್ನು ಕೊಡಬಹುದು, ಉದಾಹರಣೆಗೆ, ಅಕ್ಷರಮಾಲೆಯ ಶಬ್ದಗಳು.

"ಪ್ರಾಪಂಚಿಕ ಬಾಲಬೋಧೆ" ಎಂಬದರ ವಿಷಯವಾಗಿ ನಾಲ್ಕು ಸಲಹೆಗಳು ವ್ಯಕ್ತಪಡಿಸಲ್ಪಡುತ್ತವೆ. (1) ಪೌಲನು ವಿಶ್ವದಲ್ಲಿನ ಧಾತುರೂಪದ ದುಷ್ಟ ಶಕ್ತಿಗಳು ಎಂಬರ್ಥದಲ್ಲಿ ಹೇಳಿರುತ್ತಾನೆ, ಉದಾಹರಣೆಗೆ ದೆವ್ವಗಳು ಮತ್ತು ದುರಾತ್ಮಗಳು, ಅಥವಾ ವಿಶ್ವವನ್ನು ನಿಯಂತ್ರಿಸುವ ದೇವದೂತರು.[7] (2) ಆತನು ಮನುಷ್ಯ ವ್ಯವಹಾರಗಳ ಮೇಲೆ ಪ್ರಭಾವ ಬೀರುವ ಆಕಾಶಕಾಯಗಳು ಎಂಬರ್ಥದಲ್ಲಿ ಹೇಳಿದನು. ಗ್ರೀಕ್‌ರು ನಿಯಂತ್ರಿಸುವ ಆತ್ಮಗಳನ್ನು ಅಗ್ನಿ, ವಾಯು, ಭೂಮಿ, ಮತ್ತು ಜಲದೊಂದಿಗೆ ಸಂಬಂಧಗೊಳಿಸುವವರಾಗಿದ್ದರು. ಅವರು ಆಕಾಶಕಾಯಗಳ ಜೊತೆಯಾಗಿ, ವಿಶ್ವದ ಈ ನಾಲ್ಕು ಮೂಲಧಾತುಗಳನ್ನು ಪೂಜಿಸುತ್ತಿದ್ದರು. (3) ವಿಶ್ವದ ಆದಿ ಮತ್ತು ರಚನೆಯ ಕುರಿತಾಗಿ, ಮಾತ್ರವಲ್ಲದೆ ಜೀವನದ ಅರ್ಥದ ವಿಷಯವಾಗಿ ಕ್ರೈಸ್ತೇತರ ವಿಚಾರವಾದಿಗಳ ಅಭಿಪ್ರಾಯಗಳನ್ನು ಸೂಚಿಸಿ ಪೌಲನು ಹೇಳಿದನು. (4) ಅತ್ಮೀಕ ಅಂತರ್ದೃಷ್ಟಿಯಿಲ್ಲದವರಿಂದ ಅಭಿವೃದ್ಧಿಗೊಳಿಸಲ್ಪಟ್ಟ ಪ್ರಾಥಮಿಕ ಮತ್ತು ನಿರ್ಬಂಧಕವಾದ

ನಿಯಮಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಪೌಲನು ಹೇಳಿದನು. ಯೆಹೂದ್ಯರು ಹಾಗೂ ಅನ್ಯಜನರಿಂದ ರಚಿಸಲ್ಪಟ್ಟಿರುವ ನಿಯಮಗಳು ಮತ್ತು ವಿಧಿಗಳಿಗೆ ವಿಧೇಯರಾಗುದವರಿಂದ ಆಶೀರ್ವಾದಗಳು ಸಿಕ್ಕುತ್ತವೆಂದು ನಂಬಲಾಗುತ್ತಿತ್ತು.

ಸಲಹೆ ಮಾಡಲ್ಪಟ್ಟ ನಾಲ್ಕು ಅರ್ಥಗಳಲ್ಲಿ, ನಾಲ್ಕನೆಯದು ಹೆಚ್ಚು ಪ್ರಶಂಸನೀಯವಾಗಿರುತ್ತದೆ. "ಪ್ರಾಪಂಚಿಕ ಬೋಧೆ" ಎಂದು ಹೇಳುವ ಮೂಲಕ, ಬಹುಶಃ ಪೌಲನ ತಾತ್ಪರ್ಯವು ದೇವರ ಪ್ರಕಟನೆ ಬದಲಾಗಿ ಲೋಕದ ಜ್ಞಾನದ ಮೇಲೆ ರಚಿತವಾಗಿದ್ದ ಮೂಲ ಬೋಧನೆ ಎಂದಾಗಿರಬಹುದು (1 ಕೊರಿಂಥ 1:20, 21). ತಕ್ಷಣದ ಸನ್ನಿವೇಶವು ಪದಗುಚ್ಛದ ಬಗ್ಗೆ ಸ್ಪಷ್ಟತೆಯನ್ನು ನೀಡುವದಿಲ್ಲವಾದ್ದರಿಂದ, ಅರ್ಥವನ್ನು ಕೊಲೊಸ್ಸೆಯವರಿಗೆ ಪತ್ರಿಕೆಯ ನಂತರದಲ್ಲಿನ 2:14, 16, 18, 21–23ರಲ್ಲಿ ಕಂಡುಕೊಳ್ಳಬಹುದಾಗಿದೆ. ಈ ವಚನಗಳಲ್ಲಿ ಪೌಲನ ಕಳಕಳಿಯು ಧರ್ಮಶಾಸ್ತ್ರದ ಜೊತೆಗೆ ಯೆಹೂದಿ ಹಾಗೂ ವಿಗ್ರಹಾರಾಧಕ ಜನಾಂಗದ ಸಂಪ್ರದಾಯಗಳ ಬಗ್ಗೆಯಾಗಿತ್ತು. ಧರ್ಮಶಾಸ್ತ್ರವು ಕೇವಲ ಹೊಸ ಒಡಂಬಡಿಕೆಗೆ ಪೀಠಿಕೆಯಾಗಿತ್ತಷ್ಟೆ (ಗಲಾತ್ಯ 3:24, 25), ಅದು ಜೀವನದ ಅತ್ಯುನ್ನತ ಆತ್ಮೀಕ ಅರ್ಥವನ್ನು ತಿಳಿಯಪಡಿಸಿತು. ಕ್ರಿಸ್ತನ ಬೋಧನೆಗೆ ಹೋಲಿಸಿದರೆ ಅನ್ಯಜನರ ಅಂತರ್ದೃಷ್ಟಿಗಳು ಸರಳವಾಗಿದ್ದವು. ಆತನು ಜೀವನದ ಕುರಿತು ಒಂದು ಉನ್ನತಿಯುಳ್ಳ ಅರ್ಥವನ್ನು ಮುಂದಿಟ್ಟನು ಮತ್ತು ದೇವರ ಸಂಗಡ ಒಂದು ವೈಯಕ್ತಿಕವಾದ ಸಂಬಂಧವನ್ನು ಹೇಗೆ ಇಟ್ಟುಕೊಳ್ಳಬೇಕೆಂದು ಕಲಿಸಿದನು. ಒಬ್ಬ ಕ್ರೈಸ್ತನು ಯೆಹೂದಿ ಅಥವಾ ವಿಗ್ರಹಾರಾಧಕ ಜನಾಂಗದ ದಾರಿಗಳನ್ನು ಅನುಸರಿಸಿ ಜೀವಿಸುವದಕ್ಕೆ ಪ್ರಯತ್ನಿಸುವದು ವಿಶ್ವವಿದ್ಯಾಲಯವನ್ನು ತೊರೆದು ಒಂದು ಪ್ರಾಥಮಿಕ ಮಟ್ಟದ ಶಾಲೆಗೆ ಹಿಂದಿರುಗಿದ ಹಾಗಿರುವದು. ಯೇಸುವಿನ ಉನ್ನತವಾದ ಬೋಧನೆಯ ಬದಲಾಗಿ ಅಜ್ಞಾನದ, ಬಾಲಬೋಧೆಯ ಮತ್ತು ತಪ್ಪು ಮಾಹಿತಿ ಕೊಡುವ ಬೋಧನೆಯನ್ನು ಅನುಸರಿಸುವದರ ವಿರುದ್ಧವಾಗಿ ಪೌಲನು ಎಚ್ಚರಿಸುತ್ತಿದ್ದಾನೆ.

## "ಕ್ರಿಸ್ತನನ್ನು ಅನುಸರಿಸದೆ"

ಕ್ರಿಸ್ತನಲ್ಲಿ "ಜ್ಞಾನವಿದ್ಯಾಸಂಬಂಧವಾದ ನಿಕ್ಷೇಪಗಳೆಲ್ಲಾ" ಅಡಗಿರುತ್ತವೆಂದು ಬರೆಯುವ ಮೂಲಕ, ಪೌಲನು ಯೇಸುವೊಬ್ಬನನ್ನೇ ಹಿಂಬಾಲಿಸುವ ಅಗತ್ಯವಿರುತ್ತದೆಂಬದನ್ನು ತಿಳಿಸುವದಕ್ಕೆ ತಳಪಾಯ ಹಾಕಿಕೊಂಡನು (2:3). 8ನೇ ವಚನದಲ್ಲಿ ಆತನು ನಕಾರಾತ್ಮಕವಾದದ್ದನ್ನು, ನಂತರ ಸಕಾರಾತ್ಮಕವಾದದ್ದನ್ನು ಮುಂದಿಟ್ಟನು. ಆತನು ಕೊಲೊಸ್ಸೆಯವರನ್ನು ಮನುಷ್ಯ ಜ್ಞಾನ ಮತ್ತು ಆಚಾರಗಳಿಗೆ ಬದಲಾಗಿ ಯೇಸುವಿಗೆ ವಿಧೇಯರಾಗಬೇಕೆಂದು ಪ್ರೋತ್ಸಾಹಿಸಿದನು. ಆವರಿಗೊಂದು ಆಯ್ಕೆಯಿತ್ತು. ಅವರು ಯೇಸುವನ್ನಾದರೂ ಹಿಂಬಾಲಿಸಬಹುದಿತ್ತು ಅಥವಾ ಕ್ರಿಸ್ತನಿಂದ ಬಂದವುಗಳಾಗಿರದ ಮೋಸಕರವಾದ ತತ್ವಜ್ಞಾನ, ಮನುಷ್ಯ ಸಂಪ್ರದಾಯಗಳು, ಮತ್ತು ಅಪಕ್ವವುಳ್ಳ ಕಲ್ಪನೆಗಳನ್ನು ಅನುಸರಿಸಬಹುದಿತ್ತು. ಅವರು ಇವುಗಳನ್ನು ಅನುಸರಿಸಿ ಜೀವಿಸುವದಾಗಿದ್ದಲ್ಲಿ, ಅವರು ಕ್ರಿಸ್ತನೆಡೆಗಿದ್ದ ನಿಷ್ಠೆಯನ್ನು ಬಿಟ್ಟವರಾಗುತ್ತಿದ್ದರು ಮತ್ತು ವಶಮಾಡಿಕೊಳ್ಳಲ್ಪಟ್ಟವರಗಿ ಆತನಿಂದ ಬರುವಂತಹ ಆಶೀರ್ವಾದಗಳಿಂದ ವಂಚಿತರಾಗುತ್ತಿದ್ದರು. ಸರಿಯಾದ ಆಯ್ಕೆಯು ಒಂದೇ ಒಂದು ಇರುತ್ತದೆ – ಮನುಷ್ಯರಿಂದ ರಚಿಸಲ್ಪಟ್ಟಿರುವ ಯಾವದೇ ಆಚಾರಗಳಿಗೆ ಬದಲಾಗಿ ಕ್ರಿಸ್ತನನ್ನು ಅನುಸರಿಸತಕ್ಕದ್ದು –

ಎಂಬದಾಗಿ ಪೌಲನು ಒತ್ತಿ ಹೇಳುತ್ತಾನೆ. ಕ್ರಿಸ್ತನಿಂದ ಕೊಡಲ್ಪಡದಂತಹ ಮೂಲತತ್ವಗಳನ್ನು, ಬೋಧನೆಗಳನ್ನು, ಮತ್ತು ಆಚಾರಗಳನ್ನು ಅನುಸರಿಸುವ ಅಧಿಕಾರವು ದೇವರಿಂದ ಯಾರಿಗೂ ಕೊಡಲ್ಪಟ್ಟಿರುವದಿಲ್ಲ.

## ಕ್ರಿಸ್ತನಲ್ಲಿ ಅವತರಿಸಿ ವಾಸ ಮಾಡುವ ದೇವತ್ವ (2:9)

**9ಕ್ರಿಸ್ತನಲ್ಲಿಯೇ ದೇವರ ಸರ್ವಸಂಪೂರ್ಣತೆಯು ಅವತರಿಸಿ ವಾಸಮಾಡುತ್ತದೆ.**

### "ಕ್ರಿಸ್ತನಲ್ಲಿಯೇ ದೇವರ ಸರ್ವಸಂಪೂರ್ಣತೆಯು ಅವತರಿಸಿ ವಾಸಮಾಡುತ್ತದೆ"

8 ಮತ್ತು 9 ವಚನಗಳು 1:15–19 ಮತ್ತು 2:3ರಲ್ಲಿ ಹೇಳಲಾಗಿರುವಂಥ ಮಾತುಗಳಿಗೆ ಹೆಚ್ಚಿನದನ್ನು ಕೂಡಿಸುತ್ತವೆ. ಕೊಲೊಸ್ಸೆಯವರು ತಮ್ಮ ಯೋಚನೆಯನ್ನು ಯೇಸುವಿನ ಬೋಧನೆಗೆ ಸೀಮಿತಗೊಳಿಸಿಕೊಳ್ಳುವದರ ಪ್ರಾಮುಖ್ಯತೆಯನ್ನು ಗ್ರಹಿಸಿಕೊಳ್ಳಬೇಕೆಂದು ಪೌಲನ ಬಯಕೆಯಾಗಿತ್ತು.

**ಆದ್ದರಿಂದ** ಎಂದು ಬಳಸುವ ಮೂಲಕ, ಪೌಲನು "ಕ್ರಿಸ್ತನನ್ನು ಅನುಸರಿಸದೆ" ಎಂಬ ಮುಂಚಿನ ಪದಗುಚ್ಛದೊಂದಿಗೆ 9ನೇ ವಚನದಲ್ಲಿನ **ದೇವರ ಸರ್ವಸಂಪೂರ್ಣತೆ** ಎಂಬುದನ್ನು ಜೋಡಣೆ ಮಾಡುತ್ತಿದ್ದಾನೆ. ಮನುಷ್ಯ ಜ್ಞಾನದ ಬದಲಾಗಿ, ಯೇಸುವನ್ನು ಅನುಸರಿಸುವದಕ್ಕೆ ಕಾರಣವು ಯೇಸು ಯಾರಾಗಿದ್ದಾನೆಂಬುದರ ಮೇಲೆ ಆಧಾರವಾಗಿರುತ್ತದೆ. ಆತನು ದೇವರಾಗಿದ್ದು ದೇವರ ಸಕಲ ಗುಣಗಳನ್ನು ಹೊಂದಿರುವವನಾಗಿದ್ದರೆ, ಆತನು ಬೋಧಿಸಿದ ಎಲ್ಲವೂ ಸತ್ಯ ಹಾಗೂ ಅಧಿಕಾರಯುಕ್ತವಾದದ್ದು ಎಂದಾಗಿರುತ್ತದೆ. ಆತನು ಸುಳ್ಳಾಡಲಾರನು (ಇಬ್ರಿಯ 6:18), ಆದ್ದರಿಂದ ಆತನ ಬೋಧನೆಯು ಸತ್ಯವಾಗಿದೆ. ಯೇಸುವಿನಿಂದ ಪ್ರಕಟಗೊಂಡಿರುವ ಸತ್ಯಕ್ಕೆ ವಿರುದ್ಧವಾದ ಯಾವದೇ ಬೋಧನೆಯು ಅಸತ್ಯವಾದದ್ದು (1 ಯೋಹಾನ 2:21) ಮತ್ತು ಅದಕ್ಕೆ ಯೇಸುವಿನ ಅಧಿಕಾರದ ಬೆಂಬಲವಿರುವದಿಲ್ಲ.

1:19ರಲ್ಲಿ ಉಲ್ಲೇಖಿಸಲಾದ "ಸರ್ವಸಂಪೂರ್ಣತೆ" ಎಂಬುದು ಈ ವಚನದಲ್ಲಿರುವಂತೆಯೇ ಇಲ್ಲದಿರಬಹುದಾಗಿದೆ. ದೇವರು ಕ್ರಿಸ್ತನಲ್ಲಿ "ಸರ್ವಸಂಪೂರ್ಣತೆಯು" (κατοικέω, *katoikeō*) ವಾಸವಾಗಿರಬೇಕೆಂದು ನಿಷ್ಕರ್ಷೆಮಾಡಿದನು ಎಂದು ಅಲ್ಲಿ ಪೌಲನು ಹೇಳುತ್ತಾನೆ. 1:19ರಲ್ಲಿನ "ವಾಸಬಾಗಿರಬೇಕೆಂತಲೂ" ಎಂಬ ಈ ಅನಿಶ್ಚಿತ ಭೂತಕಾಲ ಧಾತ್ವರ್ಥವಾಚಿಯು ಚರ್ಚೆಸಾಗಿರುವ ಸರ್ವಸಂಪೂರ್ಣತೆಯು ಯೇಸುವಿನಲ್ಲಿ ಸದಾ ನೆಲೆಸಿರಲಿಲ್ಲ, ಆದರೆ ಕಾಲದ ಒಂದು ಹಂತದಲ್ಲಿ ವಾಸ ಮಾಡುವಿಕೆಯು ಸಂಭವಿಸಿತು ಎಂಬದಾಗಿ ಸೂಚಿಸುತ್ತದೆ. ಆತನು ನರಾವತಾರವೆತ್ತುವ ಮುಂಚೆ, ಆತನು ಮಾನವರ ರಕ್ಷಕನಾಗಿ ಅಪೂರ್ಣನಾಗಿದ್ದನು. ಶಿಲುಬೆಯ ಮೇಲಿನ ತನ್ನ ಮರಣದ ಮೂಲಕ, ಪಾಪಕ್ಕಾಗಿ ಬೇಕಾದ ಯಜ್ಞದ ಎಲ್ಲಾ ಬೇಡಿಕೆಗಳನ್ನು ಪೂರ್ಣವಾಗಿ ಸಂಧಿಸಿದನು (ಇಬ್ರಿಯ 5:8, 9). ಆತನು ತನ್ನ ಜೀವನ, ಬೋಧನೆ ಮತ್ತು ಮರಣದ ಮೂಲಕ ನಮ್ಮ ಆತ್ಮೀಕ ಅಗತ್ಯತೆಗಳನ್ನು ಸಂಧಿಸುವ ಮೂಲಕ ರಕ್ಷಕನಾಗಿ ಸಂಪೂರ್ಣನಾದನು. ಇದರಿಂದ ಆತನಲ್ಲಿ ಸರ್ವಸಂಪೂರ್ಣತೆಯು ವಾಸ ಮಾಡುವದಕ್ಕೆ ಸಾಧ್ಯವಾಯಿತು.

2:9ರಲ್ಲಿ ಪೌಲನು ಯೇಸುವಿನಲ್ಲಿ ವಾಸಮಾಡುವ "ದೇವರ ಸರ್ವಸಂಪೂರ್ಣತೆ" ಬಗ್ಗೆ ಚರ್ಚಿಸುತ್ತಿದ್ದಾನೆ. ಆತನು ಲೋಕದೊಳಗೆ ಬಂದಾಗ, ಆತನು ಒಂದು ಶಾರೀರಿಕ ದೇಹವನ್ನು ಧರಿಸಿಕೊಳ್ಳುವದಕ್ಕೋಸ್ಕರ ತನ್ನ ಪರಲೋಕದ ದೇಹವನ್ನು ತ್ಯಜಿಸಿದನು; ಆದರೆ ಆತನ ಅಸ್ತಿತ್ವ, ಆತನು ಯಾರೆಂಬುದು, ಮಾರ್ಪಡದ ದೇವರಾಗಿ ಉಳಿಯಿತು. ಪೌಲನು ಹೀಗೆ ಹೇಳಿದನು, "ಆತನು ದೇವಸ್ವರೂಪನಾಗಿದ್ದರೂ ದೇವರಿಗೆ ಸರಿಸಮಾನನಾಗಿರುವದೆಂಬ ಅಮೂಲ್ಯ ಪದವಿಯನ್ನು ಬಿಡಲೊಲ್ಲೆನು ಎಂದೆಣಿಸದೆ ತನ್ನನ್ನು ಬರಿದು ಮಾಡಿಕೊಂಡು ದಾಸನ ರೂಪವನ್ನು ಧರಿಸಿಕೊಂಡು ಮನುಷ್ಯರಿಗೆ ಸಾದೃಶ್ಯನಾದನು" (ಫಿಲಿಪ್ಪಿ 2:6, 7). ಆತನು ಭೂಮಿಯ ಮೇಲೆ ವಾಸವಾಗಿರುವ ವೇಳೆ ಮಾನವ ಶರೀರವನ್ನು ಧರಿಸಿಕೊಳ್ಳುವ ಮೂಲಕ, ಶರೀರಧಾರಿಯಾದ ದೇವರಾದನು. ಆತನು ಇನ್ನು ಮೇಲೆ ಪರಲೋಕದ ಶರೀರದಲ್ಲಿರುವ ದೇವರಾಗಿರಲಿಲ್ಲ, ಆದರೆ ಭೂಲೋಕದ ಶರೀರದಲ್ಲಿದ್ದ ದೇವರಾಗಿದ್ದನು. ಅದು ಪರಲೋಕದ ಶರೀರದಲ್ಲಿಯಾಗಲಿ ಅಥವಾ ಭೂಲೋಕದ ಶರೀರದಲ್ಲಿಯಾಗಲಿ, ಯಾವ ಗಳಿಗೆಯಲ್ಲಿಯೂ ಆತನು ದೇವರಿಗಿಂತ ಕಡಿಮೆಯಾಗಿರಲಿಲ್ಲ.

"ದೇವತ್ವ" (θεότητος, *theotētos*, ಇದು θεότης, *theotēs* ಎಂಬದರಿಂದ ಬಂದದ್ದು) ಎಂಬುದು ಹೊಸ ಒಡಂಬಡಿಕೆಯೊಳಗೆ ಇಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ. ಕೆಲವು ಆವೃತ್ತಿಗಳು "ದೇವತ್ವ" ಎಂಬುದಾಗಿ ಅನುವಾದಗೊಳಿಸುವ ಮೂಲಕ ಆ ಪದದಲ್ಲಿ ಸ್ವಭಾವತಃ ಇರುವದೇನೆಂಬುದನ್ನು ತಿಳಿಯಪಡಿಸಬಹುದಾಗಿದೆ (KJV; NKJV). ದೇವತ್ವ ಏನೆಲ್ಲಾ ಆಗಿದ್ದಾನೋ – ದೈವಿಕ ರಚನೆ ಮತ್ತು ಗುಣಸ್ವಭಾವಗಳು – ಯೇಸುವಿನಲ್ಲಿ ಸಿಕ್ಕುತ್ತದೆ. ಆತನು ತಂದೆ ಮತ್ತು ಪವಿತ್ರಾತ್ಮನಿಗಿಂಥ ಕಡಿಮೆಯಾದವನೂ ಅಲ್ಲ, ಶ್ರೇಷ್ಠವಾದವನೂ ಅಲ್ಲ; ಬದಲಾಗಿ, "ದೇವರ" ಎಂಬ ಪದವು ಒಳಗೊಂಡಿರುವ ಮತ್ತು ವ್ಯಕ್ತಪಡಿಸಿರುವ ಎಲ್ಲದರ ನಿಖರ ಸಾರೂಪ್ಯವನ್ನು ಆತನು ಹೊಂದಿರುತ್ತಾನೆ. ಈ ಆಲೋಚನೆಯು ಇಬ್ರಿಯ 1:3ರಲ್ಲಿ ಸಹ ವ್ಯಕ್ತಪಡಿಸಲ್ಪಟ್ಟಿರುತ್ತದೆ: "ಈತನು ದೇವರ ಪ್ರಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ" ಆಗಿದ್ದಾನೆ.

ಇಲ್ಲಿ ಬಳಸಿರುವಂತಹ *theotēs* ಮತ್ತು ರೋಮಾ 1:20ರಲ್ಲಿ ಬಳಸಲಾಗಿರುವ *theotēs* ನಡುವೆ ಒಂದು ಪ್ರಾಮುಖ್ಯವಾದ ವ್ಯತ್ಯಾಸವು ಇರುವಂತೆ ತೋರುತ್ತದೆ. Herbert M. Carson ಹೀಗೆ ವಿವರಿಸುತ್ತಾನೆ,

> ಆದ್ದರಿಂದ, ರೋಮಾ [1:20] ರಲ್ಲಿ ಪೌಲನು ಹೇಳುತ್ತಿರುವದೇನೆಂದರೆ ಸೃಷ್ಟಿಯು ದೇವರ ಪ್ರಭಾವವನ್ನೂ ಶಕ್ತಿಯನ್ನೂ ಸಾರುಸುತ್ತವೆಂಬದೆ. ಆದಾಗ್ಯೂ ಆತನು ಕ್ರಿಸ್ತನಲ್ಲಿ ದೇವರ ಪ್ರಕಟನೆಯಾಗಿರುವಂತಹ ರೀತಿಯಲ್ಲಿ ಸೃಷ್ಟಿಯು ದೇವರನ್ನು ಪ್ರಕಟಗೊಳಿಸುತ್ತದೆಂದು ಹೇಳಲಿಲ್ಲ. ಆದರೆ ಇಲ್ಲಿ [ಕೊಲೊಸ್ಸೆ 2:9] ಆತನು ಕೇವಲ ಕ್ರಿಸ್ತನಲ್ಲಿ ದೈವಿಕ ಗುಣಗಳು ಪ್ರಕಟಗೊಂಡಿವೆ ಎಂದಷ್ಟೆ ಹೇಳಲು ಇಚ್ಛಿಸಲಿಲ್ಲ. ಬದಲಾಗಿ ಆತನು ಕ್ರಿಸ್ತನಲ್ಲಿ ದೇವರ ಜೀವಾಳವೇ ವಾಸಮಾಡುತ್ತದೆಂದು ಒತ್ತಿ ಹೇಳುತ್ತಾನೆ, ಮತ್ತು ಈ ಕಾರಣದಿಂದ ಆತನು ದೇವತ್ವದ ಈ ಜೀವಾಳದ ಆಲೋಚನೆಯನ್ನು ತಿಳಿಯಪಡಿಸುವದಕ್ಕೆ theotes ಎಂಬ ಪದವನ್ನು ಬಳಸುತ್ತಾನೆ.[8]

ಕ್ರಿಸ್ತನಲ್ಲಿ ದೇವರ ಸರ್ವಸಂಪೂರ್ಣತೆಯು **ವಾಸಮಾಡುತ್ತದೆ** (κατοικέω,

*katoikeō*) ಎಂದು ಹೇಳುವ ಮೂಲಕ, ಅದು ಒಂದು ನಿರಂತರವಾಗಿ ಸಾಗುವ ವಶ್ತವಿಕತೆಯಾಗಿ ಯೇಸುವಿನಲ್ಲಿ ವಾಸಮಾಡಿತ್ತು, ಈಗ ವಾಸಮಾಡುತ್ತದೆ, ಮತ್ತು ನಿರಂತರವಾಗಿ ವಾಸಮಾಡುವದು ಎಂಬದನ್ನು ಸೂಚಿಸುವದಕ್ಕೆ ವರ್ತಮಾನಕಾಲ ರೂಪವನ್ನು ಬಳಸಿದನು. ಭೂಮಿಯ ಮೇಲೆ ನಡೆದಾಡಿದ ಅದೇ ಯೇಸು ಈಗ ಪರಲೋಕದಲ್ಲಿದ್ದಾನೆ, ದೇವರ ಪೂರ್ಣ ಜೀವಾಳವುಳ್ಳವನಾಗಿ ಮತ್ತು ದೇವತ್ವದಿಂದ ವಾಸಮಾಡಲ್ಪಟ್ಟವನಾಗಿ ಇರುತ್ತಾನೆ. ಪೌಲನ ಹೇಳಿಕೆಯು ಮಾನವನಾದ ಯೇಸುವಿನ ಮೇಲೆ ಆತ್ಮ/aeon ಆದ ಕ್ರಿಸ್ತನು ದೀಕ್ಷಾಸ್ನಾನದ ವೇಳೆ ಬಂದನು ಮತ್ತು ಶಿಲುಬೆಯಲ್ಲಿರುವಾಗ ಬಿಟ್ಟು ಹೋದನೆಂಬದಾಗಿ ಕಲಿಸುತ್ತಿದ್ದ ಅನಂತರದಲ್ಲಿ ಬಂದ ಗ್ನಾಸ್ಟಿಕ್ ಅಭಿಪ್ರಾಯಕ್ಕೆ ಒಂದು ಉತ್ತರವಾಗಿರುತ್ತದೆ.

ಯೇಸುವಿನಲ್ಲಿ ಸರ್ವಸಂಪೂರ್ಣತೆಯೆಂಬುದರ ಅರ್ಥವು ಆತನು ದೇವರ ಮನಸ್ಸಿನಲ್ಲಿರುವದನ್ನು ಮಾತಾಡಿದನು ಮತ್ತು ಬೋಧಿಸಿದನು, ವ್ಯಕ್ತಪಡಿಸಿದನು ಎಂದಾಗಿರುತ್ತದೆ, ಆತನು ಹೀಗೆ ಹೇಳಿದನು,

> ಯಾಕೆಂದರೆ ನನ್ನಷ್ಟಕ್ಕೆ ನಾನೇ ಮಾತಾಡಿದವನಲ್ಲ; ನನ್ನನ್ನು ಕಳುಹಿಸಿ ಕೊಟ್ಟ ತಂದೆಯೇ —ನೀನು ಇಂಥಿಂಥದನ್ನು ಹೇಳಬೇಕು, ಹೀಗೆ ಮಾತಾಡಬೇಕು ಎಂಬದಾಗಿ ನನಗೆ ಆಜ್ಞೆ ಕೊಟ್ಟಿದ್ದಾನೆ. ಆತನ ಆಜ್ಞೆ ನಿತ್ಯಜೀವವಾಗಿದೆ ಎಂದು ಬಲ್ಲೆನು. ಆದದರಿಂದ ನಾನು ಮಾತಾಡುವದನ್ನೆಲ್ಲಾ ತಂದೆ ನನಗೆ ಹೇಳಿದ ಮೇರೆಗೆ ಮಾತಾಡುತ್ತೇನೆ (ಯೋಹಾನ 12:49, 50).

ತಂದೆಯು ಏನೆಲ್ಲವನ್ನು ತಿಳಿಯಪಡಿಸಬೇಕೆಂದು ಬಯಸಿದ್ದನೋ ಅದನ್ನೆಲ್ಲಾ ಯೇಸುವಿನ ಮೂಲಕ ಪ್ರಕಟಗೊಳಿಸಿದನು, ಆತನನ್ನು ಮಾನವ ಜನಾಂಗಕ್ಕೆ ಪೂರ್ಣ ಪ್ರಕಟಣೆಯ ಮಾಧ್ಯಮವನ್ನಾಗಿ ಮಾಡಿದನು (ಇಬ್ರಿಯ 1:1, 2).

ಸೃಷ್ಟಿಸಲ್ಪಟ್ಟ ಜಗತ್ತು — ಬೃಹತ್ ಗಾತ್ರ ಹೊಂದಿದ್ದು ಮತ್ತು ಆಕಾಶಕಾಯಗಳ, ಜೊತೆಗೆ ಭೂಮಿಯ ಮೇಲಿನ ವಿವಿಧ ರೂಪದ ಜೀವಿಗಳನ್ನೊಳಗೊಂಡಿರುವಂಥದ್ದು— ದೇವರ ಮನಸ್ಸು ಮತ್ತು ಶಕ್ತಿಯ ಶ್ರೇಷ್ಠತೆಯನ್ನು ತೋರ್ಪಡಿಸುತ್ತದೆ (ಕೀರ್ತನೆ 19:1; ರೋಮಾ 1:20). ಹೇಗೂ, ಸೃಷ್ಟಿಯು ತಿಳಿಯಪಡಿಸುವದಕ್ಕೆ ಅಶಕ್ತವಾಗಿದ್ದ ರೀತಿಯಲ್ಲಿ ಯೇಸುವು ದೇವರನ್ನು ಪ್ರಕಟಗೊಳಿಸಿದನು (ಯೋಹಾನ 1:18; 14:9) ಯಾಕೆಂದರೆ ಆತನು ಸ್ವಭಾವತಃ ತಂದೆಯ ಅದೇ ಸ್ವಭಾವವನ್ನೇ ಹೊಂದಿರುವವನಾಗಿದ್ದಾನೆ.

ಪೌಲನು **ಅವತರಿಸಿ** ಎಂದು ಹೇಳಿದ ಕಾರಣದಿಂದಾಗಿ, ಆತನು ಸಭೆ ಎಂಬ ಅರ್ಥದಲ್ಲಿ ಹೇಳಿದನೆಂಬ ಅಭಿಪ್ರಾಯಕ್ಕೆ ಕೆಲವರು ಬಂದಿರುತ್ತಾರೆ, ಅದು ಕ್ರಿಸ್ತನ "ದೇಹ" (σῶμα, *sōma*) ಕರೆಯಲ್ಪಟ್ಟಿದೆ (1:18). ಇಲ್ಲಿ ಈ ಅರ್ಥವು ಇರುವದಕ್ಕಂತೂ ಸಾಧ್ಯವೇ ಇಲ್ಲ. ಸಭೆಯು ಕ್ರಿಸ್ತನಿಂದ "ಪರಿಪೂರ್ಣತೆಯುಳ್ಳದ್ದಾಗಿದೆ" ಎಂಬದಾಗಿ ಹೇಳಲ್ಪಟ್ಟಿದ್ದಾಗ್ಯೂ (ಎಫೆಸ 1:23), ದೇವರ ಸರ್ವಸಂಪೂರ್ಣತೆಯು ಸಭೆಯೊಳಗೆ ವಾಸಮಾಡುವದಿಲ್ಲ. ಪೌಲನ ಸಭೆ ಎಂಬರ್ಥದಲ್ಲಿ ಹೇಳಿದ್ದರೆ, ಶರೀರದಲ್ಲಿ "ಅವತರಿಸಿ" ಎಂಬುದರ ಬದಲಾಗಿ "ದೇಹದಲ್ಲಿ" ಎಂದು ಹೇಳಿರುತ್ತಿದ್ದನು.

ಇನ್ನು ಕೆಲವರು ವಾದಿಸುವದೇನೆಂದರೆ ಪೌಲನು *sōma* ಎಂಬುದು2:17ರಲ್ಲಿ ಅನುವಾದಿಸಲ್ಪಟ್ಟಿರುವ ಪ್ರಕಾರವಾಗಿಯೇ, "ಮೂಲ ಸ್ವರೂಪ" ಅಥವಾ "ನಿಜಸ್ವರೂಪ"

ಎಂಬರ್ಥದಲ್ಲಿ ಹೇಳಿದನು ಎಂಬದೆ. ಇಲ್ಲಿ ತೋರುವ ಪ್ರಕಾರ, ಆತನು ಯೇಸುವನ್ನು ದೇವತ್ವದ ಮೂರ್ತರೂಪ ಎಂಬದಾಗಿ ಮುಂದಿಡುತ್ತಿದ್ದಾನೆ. ಇದು ಶಾರೀರಿಕ ಅರ್ಥದಲ್ಲಿ ಸತ್ಯವಾಗಿರಲಾರದು ಯಾಕೆಂದರೆ ದೇವರು ಯಾವದೇ ಭೌತಿಕ ತಿರುಳು ಇಲ್ಲದೆ ಆತ್ಮಸ್ವರೂಪನಾಗಿದ್ದಾನೆ (ಯೋಹಾನ 4:24). ಯೇಸುವಿನಲ್ಲಿ, ಸ್ವತಃ ಆತನ ಸ್ವಭಾವದಲ್ಲಿಯೇ ದೇವರ ಸಮಸ್ತವೂ ವಾಸಮಾಡುವದಾಗಿತ್ತು ಎಂಬ ಅರ್ಥದಲ್ಲಿ ಪೌಲನು ಹೇಳಿರಬೇಕು. ಆತನಲ್ಲಿಯೇ ದೇವತ್ವದ ಸಂಪೂರ್ಣತೆ ಮತ್ತು ಇಡೀ ನಿಜಸ್ವರೂಪವು ಇರುತ್ತದೆ (ಇಬ್ರಿಯ 1:3).

## ಕ್ರಿಸ್ತನಲ್ಲಿ ಪರಿಪೂರ್ಣತೆ (2:10, 11)

**10ಮತ್ತು ನೀವು ಆತನಲ್ಲಿದ್ದುಕೊಂಡೇ ಪರಿಪೂರ್ಣತೆಯನ್ನು ಹೊಂದಿದವರಾಗಿದ್ದೀರಿ. 11ಆತನು ಎಲ್ಲಾ ಧೊರೆತನಗಳಿಗೂ ಅಧಿಕಾರಗಳಿಗೂ ಶಿರಸ್ಸು. ನೀವು ಆತನಲ್ಲಿ ಸುನ್ನತಿಯನ್ನೂ ಹೊಂದಿದಿರಿ; ಈ ಸುನ್ನತಿಯು ಕೈಯಿಂದ ಮಾಡಿದ್ದಲ್ಲ, ಇದು ಪಾಪಾಧೀನಸ್ವಭಾವವನ್ನು ವಿಸರ್ಜಿಸುವದೇ; ಇದೇ ಕ್ರಿಸ್ತೀಯ ಸುನ್ನತಿ.**

### "ಮತ್ತು ನೀವು ಆತನಲ್ಲಿದ್ದುಕೊಂಡೇ ಪರಿಪೂರ್ಣತೆಯನ್ನು ಹೊಂದಿದವರಾಗಿದ್ದೀರಿ" (2:10)

ಪರಿಪೂರ್ಣತೆ ಎಂಬುದು πεπληρωμένοι (*peplērōmenoi*) ಎಂಬ ಪದದ ಅನುವಾದವಾಗಿರುತ್ತದೆ. ಇದೊಂದು ಪರಿಪೂರ್ಣ ನಿಷ್ಕ್ರಿಯ ಕೃದಂತ ಆಗರುವದರಿಂದ, ಇದರರ್ಥವು ಕ್ರೈಸ್ತರು ಯೇಸುವಿನಲ್ಲಿ ಪರಿಪೂರ್ಣಗೊಳಿಸಲ್ಪಟ್ಟಿದ್ದರು ಮತ್ತು ನಿರಂತರವಾಗಿ ಪರಿಪೂರ್ಣಗೊಳಿಸಲ್ಪಡುವರು ಎಂದಾಗಿರುತ್ತದೆ. ೯ನೇ ವಚನದಲ್ಲಿ "ಸರ್ವಸಂಪೂರ್ಣತೆ" ಎಂಬುದು ಪ್ರವಾದನೆಯನ್ನು "ನೆರವೇರಿಸು" ಎಂಬದಕ್ಕಾಗಿರುವ ಅದೇ ಪದದಿಂದ ಬಂದದ್ದಾಗಿರುತ್ತದೆ, ಆದರೆ ಇಲ್ಲಿ ಅದರರ್ಥವು ಕೊಲೊಸ್ಸೆಯಲ್ಲಿರುವ ಕ್ರೈಸ್ತರು ಅವರ ಅನೇಕ ಅಗತ್ಯತೆಗಳಲ್ಲಿ ಕೊರತೆಯಿಲ್ಲದವರಾಗಿದ್ದರು. ಯೇಸುವಿನಲ್ಲಿ ದೇವರ ದೈವಿಕ ಸ್ವಭಾವದ "ಸರ್ವಸಂಪೂರ್ಣತೆ" — ಸಮಗ್ರತೆ—ವಾಸಮಾಡುವದರಿಂದ, ಆತನು ತನ್ನ ಹಿಂಬಾಲಕರನ್ನು ಪೂರ್ಣ, ಅಥವಾ "ಪರಿಪೂರ್ಣ"ಗೊಳಿಸಲು ಶಕ್ತನಾಗಿರುತ್ತಾನೆ. "ನಾವೆಲ್ಲರು ಆತನ ಪರಿಪೂರ್ಣತೆಯೊಳಗಿಂದ ಕೃಪೆಯ ಮೇಲೆ ಕೃಪೆಯನ್ನು ಹೊಂದಿದೆವು" (ಯೋಹಾಣ 1:16).

**ಆತನಲ್ಲಿದ್ದುಕೊಂಡು** ಎಂಬ ಪದವು ಪರಿಪೂರ್ಣಗೊಳಿಸಲ್ಪಡುವದಕ್ಕೆ ಕ್ರೈಸ್ತರಿಗೆ ಅವಶ್ಯಕವಾಗಿರುವ ಆತ್ಮೀಕ ಸಂಬಂಧವನ್ನ ಸೂಚಿಸುತ್ತದೆ. ದೇವರ ಸಂಗಡದ ಸಂಬಂಧಕ್ಕೆ ಅವಶ್ಯಕವಾಗಿರುವಂಥದ್ದೆಲ್ಲವೂ ಕ್ರಿಸ್ತನಲ್ಲಿರುವವರಿಗೆ ಮಾತ್ರವೇ ಲಭ್ಯವಿರುತ್ತದೆ. ಸಕಲ ಆತ್ಮೀಕ ಆಶೀರ್ವಾದವು ಆತನಲ್ಲಿರುತ್ತದೆ (ಎಫೆಸ 1:3). ಈ ಆಶೀರ್ವಾದಗಳಲ್ಲಿ ವಿಮೋಚನೆ, ಅಪರಾಧ ನಿರ್ಣಯವಿಲ್ಲದಿರುವಿಕೆ, ದೇವರ ಪ್ರೀತಿ, ಪರಿಶುದ್ಧಗೊಳಿಸಲ್ಪಡುವಿಕೆ, ಕೃಪೆ, ಹೊಸ ಸೃಷ್ಟಿಯಾಗಿರುವದು, ಸಂಧಾನಗೊಳಿಸಲ್ಪಡುವಿಕೆ, ದೇವರ ನೀತಿ, ಆತನ ರಕ್ತದ ಪ್ರಯೋಜನ, ಪಾಪಗಳ ಕ್ಷಮಾಪಣೆ, ರಕ್ಷಣೆ, ಮತ್ತು ನಿತ್ಯಜೀವ ಇವುಗಳು ಸೇರಿರುತ್ತವೆ![9] ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರು ಮಾತ್ರವೇ

ಆತನಲ್ಲಿರುವವರಾಗಿದ್ದಾರೆ (ರೋಮಾ 6:3; ಗಲಾತ್ಯ 3:27).

ಕ್ರಿಸ್ತನಿಂದ ಹೊರಗೆ ಇರುವವರು "ಕ್ರಿಸ್ತನನ್ನು ಸೇರದವರಾಗಿದ್ದು ಇಸ್ರಾಯೇಲ್ಯ ಹಕ್ಕಿನಲ್ಲಿ ಪಾಲಿಲ್ಲದವರೂ [ಅಬ್ರಹಾಮನಿಗೆ ಉಂಟಾದ] ವಾಗ್ದಾನಕ್ಕೆ ಸಂಬಂಧವಾದ ಒಡಂಬಡಿಕೆಗಳಲ್ಲಿ ಸೇರದವರೂ ಈ ಲೋಕದಲ್ಲಿ ಯಾವ ನಿರೀಕ್ಷೆಯಿಲ್ಲದವರೂ ದೇವರನ್ನರಿಯದವರೂ" ಆಗಿರುತ್ತಾರೆ (ಎಫೆಸ 1:12). ಯೇಸುವಿನ ಹೊರಗೆ ಜನರು ಅಪರಿಪೂರ್ಣರಾದವರು ಮತ್ತು "ದೂರವಾಗಿರುವವರು" ಆಗಿದ್ದಾರೆ; "ಆತನಲ್ಲಿದ್ದುಕೊಂಡು" ಇರುವಾಗ ಸ್ಥಿತಿಯು ಬದಲಾಗುತ್ತದೆ. "ಈಗಲಾದರೋ ಮೊದಲು ದೂರವಾಗಿದ್ದ ನೀವು ಕ್ರಿಸ್ತ ಯೇಸುವನ್ನು ಸೇರಿದವರಾಗಿದ್ದು ಆತನ ರಕ್ತದ ಮೂಲಕ ಸಮೀಪಸ್ಥರಾದಿರಿ" (ಎಫೆಸ 2:13).

"ಕ್ರಿಸ್ತನಲ್ಲಿ" ಇರುವವರು ಫಲವನ್ನು ಕೊಡದಿದ್ದರೆ ಮತ್ತು ಯೇಸುವಿನಲ್ಲಿ ನೆಲೆಗೊಂಡಿರದಿದ್ದರೆ ಅವರು ತೆಗೆದು ಹಾಕಲ್ಪಡವರು, ಕಡಿದು ಹಾಕಲ್ಪಡುವರು, ಮತ್ತು ಸುಡಲ್ಪಡುವರು (ಯೋಹಾನ 15:2, 6). ಒಬ್ಬ ಕ್ರೈಸ್ತನು ಯೇಸುವಿನ ಸಂಗಡದ ತನ್ನ ಸಂಬಂಧವನ್ನು ಕಡಿದುಕೊಂಡರೆ, ಆತನು ದೇವರ ನಿತ್ಯಜೀವದ ವರವನ್ನು ಕಳೆದುಕೊಳ್ಳುವನು. ಕ್ರಿಸ್ತನಲ್ಲಿರುವ ಪ್ರತಿಯೊಬ್ಬರು ಪರಿಪೂರ್ಣಗೊಳಿಸಲ್ಪಡುವರು, ಆದರೆ ಆತನಿಲ್ಲದೆ ಒಬ್ಬನು ಏನೂ ಮಾಡಲಾರನು (ಯೋಹಾನ 14:5). ಕ್ರಿಸ್ತನಲ್ಲಿ ನೆಲೆಗೊಳ್ಳಬೇಕೆಂದರೆ, ಒಬ್ಬನು ಆತನ ಆಜ್ಞೆಗಳನ್ನು ಕೈಕೊಂಡು ನಡೆಯಬೇಕು (1 ಯೋಹಾನ 2:3–5).

ಒಬ್ಬ ವ್ಯಕ್ತಿಗೆ ಆತ್ಮೀಕ ಜೀವನವನ್ನು ನಡಿಸಲು ಮತ್ತು ದೇವರಿಗೆ ಅಂಗೀಕಾರವಾದ ರೀತಿಯಲ್ಲಿ ಸೇವೆ ಮಾಡುವದಕ್ಕಾಗಿ ಅಗತ್ಯವಾಗಿರುವದನ್ನೆಲ್ಲಾ ಯೇಸುವು ಒದಗಿಸುತ್ತಾನೆ. ಒಬ್ಬ ಬೇರೆ ಬೋಧಕನ ಮೇಲೆ ಅಥವಾ ಬೋಧನೆಯ ಮೇಲೆ ಕಟ್ಟಲ್ಪಡುವ ಯಾವದೇ ಧರ್ಮವು ತಪ್ಪಾದ ಅಸ್ತಿವಾರದ ಮೇಲೆ ಕಟ್ಟಲ್ಪಡುತ್ತಿರುವದಾಗಿದೆ. ಯೇಸುವೇ ನಿಜವಾದ ಅಸ್ತಿವಾರವಾಗಿದ್ದಾನೆ (1 ಕೊರಿಂಥ 3:11). ಆತನೇ ಮಾರ್ಗವು ಸತ್ಯವು, ಮತ್ತು ಜೀವವು, ತಂದೆಯ ಬಳಿಗೆ ಹೋಗುವದಕ್ಕೆ ಏಕೈಕ ದಾರಿಯು ಆಗಿದ್ದಾನೆ (ಯೋಹಾನ 14:6). ರಕ್ಷಣೆಯು ಬೇರೆ ಇನ್ನಾವದೇ ಹೆಸರಿನಲ್ಲಿ ಸಿಕ್ಕುವದಿಲ್ಲ (ಅಪೊಸ್ತಲರ ಕೃತ್ಯಗಳು 4:12).

ಯೇಸುವು ಪವಿತ್ರಾತ್ಮನ ಮೂಲಕವಾಗಿ ಅಪೊಸ್ತಲರಿಗೂ ಪ್ರವಾದಿಗಳಿಗೂ ಪ್ರಕಟಗೊಳಿಸಿದ ಹೊಸ ಒಡಂಬಡಿಕೆಯ ಎಲ್ಲಾ ಸತ್ಯವನ್ನು ಹೊಸ ಒಡಂಬಡಿಕೆಯು ಒಳಗೊಂಡಿರುತ್ತದೆ (ಯೋಹಾನ 16:13; ಎಫೆಸ 3:5). ಯೇಸುವು ತನ್ನ ಮಾತುಗಳು ಅಳಿದು ಹೋಗುವದಿಲ್ಲವೆಂದು ಹೇಲಿದನು (ಮತ್ತಾಯ 24:35). ದೇವರ ವಾಕ್ಯಗಳು ಶಾಶ್ವತವಾಗಿ ನಿಲ್ಲುವದು ಎಂದು ಪೇತ್ರನು ಬರೆಯುತ್ತಾನೆ (1 ಪೇತ್ರ 1:23, 25). ಅದು ಇದ್ದ ಹಾಗೆಯೇ ಉಳಿಯುತ್ತದೆ – ಮಾರ್ಪಡದ್ದಾಗಿ, ಯಾವದೇ ಅಳಿಸಿ ಹಾಕುವಿಕೆ ಅಥವಾ ಹೆಚ್ಚಾಗಿ ಕೂಡಿಸುವಿಕೆಗಳಿಲ್ಲದೆ ಇರುವದು. ದೇವರ ಪ್ರಕಟಣೆಯು ಸಂಪೂರ್ಣವಾಗಿರುತ್ತದೆ ಮತ್ತು ಅದು ತನಗೆ ವಿಧೇಯವಾಗುವವರನ್ನು ಪರಿಪೂರ್ಣಗೊಳಿಸುತ್ತದೆ. ಮೊದಲ ಶತಮಾನದಲ್ಲಿ ಪೂರ್ಣಗೊಳಿಸಲ್ಪಟ್ಟ ಶಾಸ್ತ್ರಗಳು ದೇವರ ಸೇವೆ ಮಾಡುವದಕ್ಕೆ ನಮಗೆ ಅಗತ್ಯವಾಗಿರುವದನ್ನೆಕ್ಕಾ ಒದಗಿಸುತ್ತವೆ (2 ತಿಮೊಥೆ 3:16, 17).

Church of Jesus Christ of the Latter Day Saints (ಮೊರ್ಮೋನ್ಸ್) ರ ಬರಹಗಳು ಬೈಬಲ್‌ನ ಸಂಪೂರ್ಣತೆಯನ್ನು ಅಲ್ಲಗಳೆಯುತ್ತವೆ. ಹೀಗೆ ಅವುಗಳು

ಯೇಸುವಿನ ಬೋಧನೆಯ ಪರಿಪೂರ್ಣತೆಯನ್ನು ತಿರಸ್ಕರಿಸುತ್ತಾರೆ. ಉದಾಹರಣೆಗೆ, ಮೊರ್ಮೊನ್ ಪುಸ್ತಕವು ಹೇಳುವದೇನೆಂದರೆ, "ಆದುದರಿಂದ, ನಿಮ್ಮ ಬಳಿಯಲ್ಲಿ ಬೈಬಲ್ ಇದೆಯೆಂಬ ಮಾತ್ರಕ್ಕೆ ಅದು ನನ್ನೆಲ್ಲಾ ಮಾತುಗಳನ್ನೂ ಒಳಗೊಂಡಿದೆಯೆಂದು ಭಾವಿಸದಿರಿ; ಇನ್ನಷ್ಟು ಬರೆಯುವಂತೆ ನಾನು ಮಾಡಿಲ್ಲವೆಂದು ಸಹ ಭಾವಿಸದಿರಿ" (2 Nephi 29:10). ಇದು ಯೇಸುವಿನ ಬೋಧನೆಗೆ ವಿರುದ್ಧವಾದದ್ದಾಗಿದೆ.

ಮಹಮ್ಮದನಾಗಲಿ ಸಹ ಹೆಚ್ಚುವರಿ ಸತ್ಯವನ್ನು ಪಡೆದುಕೊಂಡಿರುವದಕ್ಕೆ ಸಾಧ್ಯವಿಲ್ಲ. ತಾನು ಅವರ ಬಳಿಗೆ ಸಹಾಯಕನಾದ, ಪವಿತ್ರಾತ್ಮನನ್ನು ಕಳುಹಿಸಿ ಕೊಡುವೆನೆಂದು ಯೇಸು ಅಪೊಸ್ತಲರಿಗೆ ಹೇಳಿದನು. ಮಹಮ್ಮದನು ಬರುವದಕ್ಕೆ ಆರು ನೂರು ವರ್ಷಗಳ ಹಿಂದೆಯೇ ಅವರು ಮರಣಿಸಿದ್ದರು. ಕುರಾನ್ ಮೂಲಕವಾದ ಮಹಮ್ಮದನ ಬೋಧನೆಯಲ್ಲಿ ಈ ಹಿಂದೆ ಪ್ರಕಟಿಸಲ್ಪಡದ ಯಾವ ಸತ್ಯವನ್ನೂ ಒಳಗೊಂಡಿರುವದಿಲ್ಲ. ಮಾನವರಿಗಾಗಿ ಅವಶ್ಯವಾಗಿರುವ ದೇವರ ಸಕಲ ಸತ್ಯವು ಬೈಬಲ್‌ನಲ್ಲಿ ಅಡಕವಾಗಿರುತ್ತದೆ.

ಕ್ರೈಸ್ತರು ಕ್ರಿಸ್ತನಲ್ಲಿ ಪರಿಪೂರ್ಣರಾಗಿರುತ್ತಾರೆ ಮತ್ತು ಬೇರೆ ಯಾವದೇ ವಿಶ್ವಾಸ ಪ್ರಮಾಣಗಳಿಗೆ, ಕೈಪಿಡಿಗಳಿಗೆ, ಶಿಸ್ತುಕ್ರಮಗಳಿಗೆ, ಕಡೇ ದಿನದ ಪ್ರಕಟನೆಗಳೆಂದು ಕರೆಸಿಕೊಳ್ಳುವಂಥವುಗಳಿಗೆ, ಅಥವಾ ದೇವರು ಇಸ್ರಾಯೇಲ್ಯರಿಗೆ ಕೊಟ್ಟ ಧರ್ಮಶಾಸ್ತ್ರಕ್ಕೆ ಸಹ ವಿಧೇಯರಾಗುವ ಅಗತ್ಯವಿಲ್ಲ. ಅಪೊಸ್ತಲರಿಗೆ ಪ್ರಕಟಗೊಳಿಸಲ್ಪಟ್ಟ ಯೇಸುವಿನ ಸತ್ಯದ ವಾಕ್ಯಗಳು ಅಳಿದು ಹೋಗಿರುವದಿಲ್ಲ. ಈ ಕಡೇ ದಿನಗಳಲ್ಲಿ ಜೀವಿಸುವವರಿಗಾಗಿ ದೇವರು ಯೇಸುವಿನ ಮುಖಾಂತರ ಕೊಟ್ಟ ಎಲ್ಲಾ ಪ್ರಕಟನೆಯನ್ನು ಹೊಸ ಒಡಂಬಡಿಕೆಯು ಒಳಗೊಂಡಿರುತ್ತದೆ (ಇಬ್ರಿಯ 1:1, 2). ಯಾವದೇ ನಂತರದಲ್ಲಿ ಬಂದ ಗ್ರಂಥದ ಮಾತುಗಳಿಂದಲ್ಲ, ಹೊಸ ಒಡಂಬಡಿಕೆಯಲ್ಲಿ ಸಿಕ್ಕುವ ಮಾತುಗಳೇ, ಕ್ರೈಸ್ತ ಯುಗದಲ್ಲಿ ಜೀವಿಸುವವರಿಗಾಗು ನ್ಯಾಯತೀರ್ಪಿಗೆ ಆಧಾರವಾಗಲಿವೆ (ಯೋಹಾನ 12:48).

### "ಆತನು ಎಲ್ಲಾ ದೊರೆತನಗಳಿಗೂ ಅಧಿಕಾರಗಳಿಗೂ ಶಿರಸ್ಸು" (2:10)

ದೇವತ್ವದ ಸರ್ವಸಂಪೂರ್ಣತೆಯು ಯೇಸುವಿನಲ್ಲಿ ವಾಸಮಾಡುತ್ತದೆ ಎಂಬ ವಾಸ್ತವಾಂಸದ ಆಧಾರದಲ್ಲಿ, ಆತನಿಗೆ ದೇವತ್ವದ ಅಧಿಕಾರವಿರುತ್ತದೆ. ಅಧಿಕಾರವು ಒಂದು ಭವಿಷ್ಯದಲ್ಲಾಗುವ ವಾಸ್ತವಿಕತೆಯಲ್ಲ, ಈಗ ಇರುವ ವಾಸ್ತವಿಕತೆಯಾಗಿದೆ. ಆತನಿಗೆ ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರ ಇರುತ್ತದೆ (ಮತ್ತಾಯ 28:18), ಅದನ್ನು ಆತನು ಪರಲೋಕಕ್ಕೆ ಏರಿ ಹೋಗಿ ದೇವರ ಬಲಗಡೆಯಲ್ಲಿ ಕುಳಿತುಕೊಂಡ ವೇಳೆ ಪಡೆದುಕೊಂಡನು (ಎಫೆಸ 1:20–23; 1 ಪೇತ್ರ 3:22). ತಂದೆಯನ್ನು ಹೊರತು ಪಡಿಸಿ, ಬೇರೆ ಎಲ್ಲಾ ಸಂಗತಿಗಳು ಮತ್ತು ಜೀವಿಗಳು ಆತನಿಗೆ ಅಧೀನಗೊಳಿಸಲ್ಪಟ್ಟಿವೆ (1 ಕೊರಿಂಥ 15:27: 1 ಪೇತ್ರ 3:22).

"ಶಿರಸ್ಸು" (κεφαλή, *kephalē*)[10] ನಿಯಂತ್ರಣ ಮತ್ತು ಸರ್ವೋಚ್ಛತನವನ್ನು ಸೂಚಿಸುತ್ತದೆ. ಕ್ರಿಸ್ತನು **ಎಲ್ಲಾ ದೊರೆತನಗಳಿಗೂ ಅಧಿಕಾರಗಳಿಗೂ ಶಿರಸ್ಸು** ಆಗಿರುವವನಾಗಿರುವದೆಂದರೆ ಪರಲೋಕದಲ್ಲಾಗಲಿ ಮತ್ತು ಭೂಮಿಯಲ್ಲಾಗಲಿ, ವಿಶ್ವದಲ್ಲಿನ ಪ್ರತಿಯೊಂದು ಅಧಿಕಾರವು ಈಗ ಆತನ ಅಧಿಕಾರಕ್ಕೆ ಅಧೀನವಾಗಿರುತ್ತದೆ. ಈ ಕಾರಣಕ್ಕಾಗಿ, ಕೊಲೊಸ್ಸೆಯವರು ಇತರ ಜನರಿಗೆ ಹೆದರಬೇಕಿರಲಿಲ್ಲ ಅಥವಾ ಯೇಸುವಿಗೆ ಮತ್ತು ಆತನ ಬೋಧನೆಗೆ ವಿರುದ್ಧವಾಗಿರುವ ಅಧಿಕಾರಗಳಿಗೆ ಅಧೀನಪಡಿಸಿಕೊಳ್ಳುವ

ಅಗತ್ಯವಿರಲಿಲ್ಲ.

ಈಗ ಸದ್ಯಕ್ಕೆ ಯೇಸುವೇ ವಿಶ್ವದ ಏಕೈಕ ದೊರೆಯಾಗಿದ್ದಾನೆ (ಮತ್ತಾಯ 28:18). ಆತನು ಭೂಮಿಗೆ ಬರುವ ಮುಂಚೆ, ಆತನು ಆಳ್ವಿಕೆಯನ್ನು ತಂದೆಯ ಸಂಗಡ ಹಂಚಿಕೊಂಡಿದ್ದನು (ಯೋಹಾನ 17:5). ಆತನು ಹಿಂದಿರುಗಿ ಬಂದಾಗ, ಆತನ ಏಕೈಕ ದೊರೆತನವು ಅಂತ್ಯಗೊಳ್ಳುವದು (1 ಕೊರಿಂಥ 15:24). ರಾಜ್ಯವು ತಂದೆಗೆ ಹಿಂದಿರುಗಿಸಲ್ಪಡುವದು, ಆತನೊಂದಿಗೆ ಯೇಸುವು ಅಧೀನನಾಗಿ ಆಳ್ವಿಕೆಯನ್ನು ಮಾಡುವನು (1 ಕೊರಿಂಥ 15:28). ಯೇಸುವು ಮುಂದಿನ ಕಾಲದಲ್ಲಿ ಭೂಲೋಕ ರಾಜ್ಯವನ್ನು ಆಳ್ವಿಕೆ ಮಾಡುವನು ಎಂಬುವ ಸಿದ್ಧಾಂತವು 1 ಕೊರಿಂಥ 15:24-28 ಮತ್ತು ಬೈಬಲಿನ ಇತರ ವಾಕ್ಯಭಾಗಗಳಿಗೆ ವಿರುದ್ಧವಾಗಿರುತ್ತದೆ.

ಯೇಸು ಈಗ ಸಕಲ ದೊರೆತನ ಮತ್ತು ಅಧಿಕಾರದ ಮೇಲೆ ಆಳ್ವಿಕೆ ಮಾಡುತ್ತಿದ್ದಾನೆ. ಆತನ ರಾಜ್ಯವು ಈ ದಿನದಲ್ಲಿ ಅಸ್ತಿತ್ವದಲ್ಲಿರುತ್ತದೆ, ಮತ್ತು ಕ್ರೈಸ್ತರು ಅದರ ನಾಗರಿಕರಾಗಿದ್ದಾರೆ (ಎಫೆಸ 2:19; ಕೊಲೊಸ್ಸೆ 1:13). ಆತನ ಆಳ್ವಿಕೆಗೆ ಅಧೀನರಾಗುವವರು ಪರಿಪೂರ್ಣಗೊಳಿಸಲ್ಪಡುವರು.

## "ನೀವು ಆತನಲ್ಲಿ ಸುನ್ನತಿಯನ್ನೂ ಹೊಂದಿದಿರಿ; ಆ ಸುನ್ನತಿ ಕೈಯಿಂದ ಮಾಡಿದದಲ್ಲ" (2:11)

10ನೇ ವಚನದಲ್ಲಿ ಕ್ರೈಸ್ತರು ಕ್ರಿಸ್ತನಲ್ಲಿ ಪರಿಪೂರ್ಣರು ಎಂಬುದನ್ನು ತೋರಿಸಿ ಕೊಟ್ಟ ಬಳಿಕ, ಪೌಲನು ಕ್ರಿಸ್ತನಲ್ಲಿ ನಮಗಿರುವ ಆಶೀರ್ವಾದಗಳನ್ನು ಹೆಸರಿಸುತ್ತಾನೆ. ಈ ವಿಭಾಗದಲ್ಲಿ ಉಲ್ಲೇಖಿಸಲ್ಪಟ್ಟ ಮೊದಲ ಆಶೀರ್ವಾದವೆಂದರೆ ಸುನ್ನತಿ, **ಈ ಸುನ್ನತಿಯು ಕೈಯಿಂದ ಮಾಡಿದ್ದಲ್ಲ.**

ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನದ ಜೊತೆಯಲ್ಲಿ ಸುನ್ನತಿಯು ವಿಶೇಷ ಮಹತ್ವದೊಂದಿಗೆ ಕೊಡಲ್ಪಟ್ಟಿತ್ತು. ಯಾರು ಸುನ್ನತಿ ಮಾಡಿಸಿಕೊಳ್ಳುತ್ತಾರೋ ತಾನು ಅವರಿಗೆ ದೇವರಾಗಿರುವನು ಎಂಬದಾಗಿ ದೇವರು ಆತನಿಗೆ ಹೇಳಿದನು (ಆದಿಕಾಂಡ 17:7-13). ಈ ವಾಗ್ದಾನವು ಸುನ್ನತಿ ಮಾಡಿಸಿಕೊಳ್ಳದ ಇಬ್ರಿಯ ಮಕ್ಕಳಿಗಾಗಲಿ ಅಥವಾ ಸುನ್ನತಿ ಮಾಡಿಸಿಕೊಳ್ಳದ ಅನ್ಯಜನರಿಗಾಗಲಿ ವಿಸ್ತರಿಸಲ್ಪಟ್ಟಿರಲಿಲ್ಲ; ಅವರು ವಾಗ್ದಾನದ ಒಡಂಬಡಿಕೆಗಳಿಂದ ಹೊರಗಿಡಲ್ಪಟ್ಟಿದ್ದರು (ಎಫೆಸ 2:11-13). ಸುನ್ನತಿ ಮಾಡಿಸಿಕೊಳ್ಳದ ಇಬ್ರಿಯ ಜನರೆಲ್ಲರೂ ಇಸ್ರಾಯೇಲ್ ಕುಲದಿಂದ ಕಿತ್ತುಹಾಕಲ್ಪಡಬೇಕಾಗಿತ್ತು (ಆದಿಕಾಂಡ 17:14). ಹೊಸ ಒಡಂಬಡಿಕೆಯ ಅಡಿಯಲ್ಲಿ, ದೇವರು ದೀಕ್ಷಾಸ್ನಾನವೆಂಬ ಆತ್ಮೀಕ ಸುನ್ನತಿಯನ್ನು ಮಾಡಿಸಿಕೊಂಡವರಿಗೆ ದೇವರಾಗಿರುತ್ತಾನೆ. ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ, ನಾವು ಆತನ ಮಕ್ಕಳಾಗುತ್ತೇವೆ ಮತ್ತು ಆತನು ಅಬ್ರಹಾಮನಿಗೆ ಕೊಟ್ಟ ವಾಗ್ದಾನಕ್ಕೆ ಬಾಧ್ಯಸ್ಥರಾಗಿ ಮಾಡಲ್ಪಡುತ್ತೇವೆ (ಗಲಾತ್ಯ 3:26-29).

11 ರಿಂದ 13 ವಚನಗಳು ಆತ್ಮೀಕವಾದದ್ದರೊಂದಿಗೆ ಶಾರೀರಿಕವಾದದ್ದರ ಎರಡು ಹೋಲಿಕೆಗಳನ್ನೊಳಗೊಂಡಿವೆ. ಮೊದಲನೆಯದಾಗಿ, ಪೌಲನು ಶಾರೀರಿಕ ಮತ್ತು ಆತ್ಮೀಕ ಸುನ್ನತಿಗಳ ಹೋಲಿಕೆಯನ್ನು ಮಾಡುತ್ತಾನೆ.

ಕ್ರಿಸ್ತನಲ್ಲಿದ್ದ ಕೊಲೊಸ್ಸೆಯವರು ಕ್ರಿಸ್ತನಲ್ಲಿ ಸುನ್ನತಿ ಹೊಂದಿದ್ದರು, ಅದು "ಕೈಯಿಂದ ಮಾಡಿದ್ದಲ್ಲ." ಇದು ಮಾನವ ಕೈಗಳಿಂದ ಮಾಡಲ್ಪಡುತ್ತಿದ್ದ ಯೆಹೂದಿ ಸುನ್ನತಿಗೆ

ತದ್ವಿರುದ್ಧವಾಗಿತ್ತು. ಕೊಲೊಸ್ಸೆಯಲ್ಲಿ ಕ್ರೈಸ್ತರಾದವರಿಗೆ ಮಾನವ ಕೈಗಳು ದೀಕ್ಷಾಸ್ನಾನ ಮಾಡಿಸಲಿಲ್ಲ ಎಂಬುದು ಪೌಲನ ತಾತ್ಪರ್ಯವಾಗಿರಲಿಲ್ಲ; ಬದಲಾಗಿ, ಅವರಿಂದ "ಶಾರೀರಿಕವಾದ ದೇಹವು" ಮಾನವ ಕೈಗಳಿಲ್ಲದೆಯೇ ತೆಗೆದುಹಾಕಲ್ಪಟ್ಟಿತು ಎಂಬುದು ಆತನ ತಾತ್ಪರ್ಯವಾಗಿತ್ತು. ಕೊಲೊಸ್ಸೆಯವರು ದೀಕ್ಷಾಸ್ನಾನದಲ್ಲಿ ಕ್ರಿಸ್ತನೊಂದಿಗೆ ಹೂಣಲ್ಪಟ್ಟು ಪುನರುತ್ಥಾನಗೊಳ್ಳುವ ಮೂಲಕ ತಮ್ಮ ಪಾತ್ರವನ್ನು ನೆರವೇರಿಸಿದ ವೇಳೆ, ದೇವರು ಅವರಿಂದ ಶಾರೀರಿಕ ದೇಹವನ್ನು ತೆಗೆದುಹಾಕುವ ಮೂಲಕ ತನ್ನ ಪಾತ್ರವನ್ನು ನೆರವೇರಿಸಿದನು (ನೋಡಿರಿ "ಹೆಚ್ಚಿನ ಅಧ್ಯಯನಕ್ಕಾಗಿ: 2:11-13ರಲ್ಲಿ ದೀಕ್ಷಾಸ್ನಾನವು ಸುನ್ನತಿಯೊಂದಿಗೆ ಸಂಪೂರ್ಣ ಸಮಾನವಾಗಿರುತ್ತದೋ?" ಪುಟ 269-271).

ಈ ಸಮಯದಲ್ಲಿ ಯೆಹೂದಿ ಸುನ್ನತಿಯು ಅನಾವಶ್ಯಕವಾಗಿತ್ತು, ಯಾಕೆಂದರೆ ಕೊಲೊಸ್ಸೆಯವರು ಕ್ರಿಸ್ತನಲ್ಲಿ ಪರಿಪೂರ್ಣಗೊಳಿಸಲ್ಪಟ್ಟಿದ್ದರು. ದೇವರು ಇಸ್ರಾಯೇಲ್ಯರಿಗೆ ಕೊಟ್ಟಿದ್ದ ಧರ್ಮಶಾಸ್ತ್ರವು ಅವರಿಗೆ ಹೆಚ್ಚುವರಿಯಾಗಿ ಇನ್ನೇನನ್ನೂ ಕೊಡುವದಕ್ಕೆ ಸಾಧ್ಯವಿರಲಿಲ್ಲ. ಪೌಲನು ತನ್ನ ಪತ್ರಿಕೆಯಲ್ಲಿ ಈ ಮುಂಚೆ ಹೇಳಿದ ಹಾಗೆ, ಯೇಸು ತನ್ನ ಜೀವನ ಮತ್ತು ಬೋಧನೆಯ ಮೂಲಕವಾಗಿ, ಆವರ ಎಲ್ಲಾ ಅಗತ್ಯೆತಗಳನ್ನು ಪೂರೈಸಿದ್ದನು (1:14; 2:10a).

ಯೆಹೂದಿ ಸುನ್ನತಿಯಲ್ಲಿ ಮುಂದೊಗಲನ್ನು ಕತ್ತರಿಸಿ ಹಾಕುವ ಮೂಲಕ ಶಾರೀರಿಕ ಮಾಂಸವನ್ನು ತೆಗೆದು ಹಾಕುವದು ಅಗತ್ಯವಿತ್ತು, ಕ್ರಿಸ್ತನ ಸುನ್ನತಿಯಾದ ದೀಕ್ಷಾಸ್ನಾನವು ಪಾಪದ ಅಪರಾಧವನ್ನು ತೆಗೆದು ಹಾಕುತ್ತದೆ. "ಇದು [ಆತ್ಮಿಕ ಸುನ್ನತಿ] ದೀಕ್ಷಾಸ್ನಾನದಲ್ಲಿ ಅನುಭವಿಸಲಾಗುವಂಥ, ದೇವರ ಕಾರ್ಯ ಎಂಬದಾಗಿ ಪೌಲನು ಒತ್ತಿ ಹೇಳುತ್ತಿದ್ದಾನೆ."[11]

ಪೌಲನು ಕೊಲೊಸ್ಸೆಯವರು ಹಿಂದಿನ ಮೂರು ಸ್ಥಿತಿಗಳನ್ನು ಮತ್ತು ಅವರು ಹೇಗೆ ದೇವರಿಂದ ತಿದ್ದುಪಡಿ ಮಾಡಲ್ಪಟ್ಟಿದ್ದರೆಂಬದನ್ನು ತಿಳಿಯಪಡಿಸುತ್ತಾನೆ:

ಸ್ಥಿತಿ 1 – ಕೊಲೊಸ್ಸೆಯವರು ತಮ್ಮ ಶರೀರಭಾವದ ಅಭಿಲಾಷೆಗಳ ಕಾರಣದಿಂದಾಗಿ ಪಾಪಾಧೀನಸ್ವಭಾವದಲ್ಲಿ ಆತ್ಮೀಕ ಸುನ್ನತಿಯಿಲ್ಲದವರೂ ಪಾಪದಿಂದ ಕಲುಷಿತಗೊಂಡವರೂ ಆಗಿದ್ದರು.

ತಿದ್ದುಪಡಿ – ದೀಕ್ಷಾಸ್ನಾನದಲ್ಲಿ ಅವರು ಸುನ್ನತಿ ಮಾಡಲ್ಪಟ್ಟಿದ್ದರು ಮತ್ತು ಅವರ ಶರೀರಭಾವದ ಅಭಿಲಾಷೆಗಳು ತೆಗೆದು ಹಾಕಲ್ಪಟ್ಟಿದ್ದವು.

ಸ್ಥಿತಿ 2 – ಅವರು ಆತ್ಮೀಕವಾಗಿ ಸತ್ತವರಾಗಿದ್ದರು.

ತಿದ್ದುಪಡಿ – ಅವರು ದೇವರ ಕಾರ್ಯದಲ್ಲಿ ನಂಬಿಕೆಯಿಟ್ಟ ಕಾರಣದಿಂದಾಗಿ ದೀಕ್ಷಾಸ್ನಾನದಲ್ಲಿ ಯೇಸುವಿನ ಹೂಣಲ್ಪಡುವಿಕೆ ಮತ್ತು ಪುನರುತ್ಥಾನಗಳಲ್ಲಿ ಪಾಲುಗಾರರಾಗುವ ಮೂಲಕ ಯೇಸುವಿನೊಂದಿಗೆ ಹೊಸ ಜೀವನ ನಡಿಸಲು ಎಬ್ಬಿಸಲ್ಪಟ್ಟಿದ್ದರು.

ಸ್ಥಿತಿ 3 – ಅವರು ಪಾಪದಲ್ಲಿ ಸತ್ತವರಾಗಿದ್ದರು.

ತಿದ್ದುಪಡಿ – ಅವರು ದೀಕ್ಷಾಸ್ನಾನ ಮಾಡಿಸಿಕೊಂಡ ವೇಳೆ ಬದುಕಿಸಲ್ಪಟ್ಟಿದ್ದರು ಮತ್ತು ಅವರ ಎಲ್ಲಾ ಪಾಪಗಳು ಕ್ಷಮಿಸಲ್ಪಟ್ಟಿದ್ದವು.

| ಕೊಲೊಸ್ಸೆಯಲ್ಲಿನ ಕ್ರೈಸ್ತರ ಸ್ಥಿತಿ (2:11-13) | | |
|---|---|---|
| **ಹಿಂದಿನ ಸ್ಥಿತಿ** | **ಬದಲಾವಣೆಗೆ ಕಾರಣ** | **ಫಲಿತ** |
| ಶರೀರಭಾವದಲ್ಲಿ (ಪಾಪಾಧೀನಸ್ವಭಾವ) ಆತ್ಮೀಕ ಸುನ್ನತಿಯಿಲ್ಲದವರಾಗಿದ್ದರು (ವ. 13). | ಪಾಪಾಧೀನಸ್ವಭಾವವನ್ನು ವಿಸರ್ಜಿಸಿದ್ದು; ದೀಕ್ಷಾಸ್ನಾನದಲ್ಲಿ ಕ್ರಿಸ್ತನ ಸಂಗಡ ಹೂಣಲ್ಪಟ್ಟು ಪುನರುತ್ಥಾನಗೊಂಡದ್ದು (ವಚನಗಳು 11, 12). | ದೀಕ್ಷಾಸ್ನಾನದ ವೇಳೆ ಆತ್ಮೀಕವಾಗಿ ಸುನ್ನತಿ ಹೊಂದಿದ್ದು ಮತ್ತು ಪಾಪಾಧೀನಸ್ವಭಾವವು ತೆಗೆದುಹಾಕಲ್ಪಟ್ಟಿತು (ವ. 11). |
| ಆತ್ಮೀಕವಾಗಿ ಸತ್ತವರು (ವ. 13). | ದೀಕ್ಷಾಸ್ನಾನದಲ್ಲಿ ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟರು (ವ. 12). | ದೇವರ ಕಾರ್ಯದಲ್ಲಿ ನಂಬಿಕೆಯಿಟ್ಟದ್ದರ ಮೂಲಕ ಕ್ರಿಸ್ತನೊಂದಿಗೆ ಬದುಕಿಸಲ್ಪಟ್ಟರು (ವಚನಗಳು 12, 13). |
| ಅಪರಾಧಗಳಲ್ಲಿ ಸತ್ತವರಾಗಿದ್ದರು (ವ. 13). | ದೀಕ್ಷಾಸ್ನಾನ (ವ. 11). | ಅಪರಾಧಗಳೆಲ್ಲಾ ಕ್ಷಮಿಸಲ್ಪಟ್ಟವು (ವ. 13). |

### "ಇದು ಪಾಪಾಧೀನಸ್ವಭಾವವನ್ನು ವಿಸರ್ಜಿಸುವದೇ; ಇದೇ ಕ್ರಿಸ್ತೀಯ ಸುನ್ನತಿ" (2:11)

ಗ್ರೀಕ್ ನಾಮಪದ ἀπέκδυσις (*apekdusis*, **ವಿಸರ್ಜಿಸುವದೇ** ಎಂದು ಅನುವಾದಿಸಲ್ಪಟ್ಟಿರುವದು) ಎಂಬುದು ಇಲ್ಲಿ ಮಾತ್ರವೇ ಕಾಣಿಸಿಕೊಂಡಿರುತ್ತದೆ. ಈ ಪದದ ಕ್ರಿಯಾಪದ ರೂಪದ ಪದವನ್ನು ಪೌಲನು ಮಾತ್ರವೇ ಬೇರೊಂದು ಕಡೆಯಲ್ಲಿ ಬಳಸಿರುತ್ತಾನೆ, ಅದು "ನಿರಾಯುಧ" (2:15) ಮತ್ತು "ತೆಗೆದಿಟ್ಟು" (3:9) ಎಂದು ಅನುವಾದಿಸಲ್ಪಟ್ಟಿದೆ. ಇದು "ಇಷ್ಟವಾಗದ ಉಡುಪುಗಳನ್ನು ಕಳಚುವದು ಮತ್ತು ಬೆತ್ತಲೆಗೊಳಿಸುವದು ಎಂಬ ರೂಪಕಾರ್ಥದ ಮೂಲಕ, ಹಿಂದಿನ ಜೀವತದಿಂದ ಒಂದು ಚೊಕ್ಕವಾದ ಸಂಬಂಧ ಕಳಚಿಕೊಳ್ಳುವಿಕೆಯನ್ನು ಸೂಚಿಸುತ್ತದೆ."[12] ಕ್ರಿಸ್ತೀಯ ಸುನ್ನತಿಯಲ್ಲಿ ಜನರನ್ನು ನಿಯಂತ್ರಿಸುವಂಥ ಮತ್ತು ಅವರನ್ನು ಪಾಪ ಮಾಡುವಂತೆ ಶೋಧನೆಗಳಲ್ಲಿ ನಡಿಸುವಂಥ "ಪಾಪಾಧೀನಸ್ವಭಾವವನ್ನು," ಶರೀರಭಾವದ ಅಭಿಲಾಷೆಗಳನ್ನು ವಿಸರ್ಜಿಸುವದು, ತೆಗೆದಿಡುವದು ಸೇರಿರುತ್ತದೆ.

KJV ಮತ್ತು NKJVಗಳಲ್ಲಿ ಮಾತ್ರವೇ "ಶರೀರಭಾವದ ಪಾಪಗಳು" ಎಂಬದಾಗಿ ಹೊಂದಿದ್ದು ಬೇರೆ ಇನ್ನಾವ ತರ್ಜುಮೆಗಳಲ್ಲಿಯೂ ಹಾಗಿರುವದಿಲ್ಲ. NKJVಯ ಕೆಲವು ಮುದ್ರಣಗಳಲ್ಲಿನ ಅಡಿಟಿಪ್ಪಣಿಯಲ್ಲಿ ಹೇಳುವದೇನೆಂದರೆ ಕೆಲವು ಹಳೆಯ ಹಸ್ತ ಪ್ರತಿಗಳಲ್ಲಿ "ಪಾಪಗಳು" ಎಂಬ ಪದವನ್ನು ಒಳಗೊಂಡಿಲ್ಲ ಎಂಬದೆ.

**ದೇಹ** (σῶμα, *sōma*) ಎಂಬುದು ಶಾರೀರಿಕ ದೇಹವನ್ನು ಸೂಚಿಸುವದಿಲ್ಲ,

ಯಾಕೆಂದರೆ ದೀಕ್ಷಾಸ್ನಾನದಲ್ಲಿ ಶಾರೀರಿಕ ದೇಹವು ತೆಗೆದು ಹಾಕಲ್ಪಡುವದಿಲ್ಲವಷ್ಟೆ. ಈ ಸನ್ನಿವೇಶದಲ್ಲಿ "ದೇಹ" ಎಂಬುದು ರೋಮಾ 6:6ರಲ್ಲಿರುವ ಪ್ರಕಾರ "ಮೂಲಸ್ವರೂಪ" ("ಪಾಪಾಧೀನಸ್ವಭಾವ") ಮತ್ತು 7:24ರಲ್ಲಿ ("ಮರಣಕ್ಕೆ ಒಳಗಾದ ದೇಹ," ಅಂದರೆ ಅವತರಿಸಿ ವಾಸವಾಗಿದ್ದ) ಇರುವ ಪ್ರಕಾರವಾಗಿಯೇ, "ಮೂಲಸ್ವರೂಪ" ಎಂಬರ್ಥವನ್ನು ಕೊಡುತ್ತದೆ. ಅದೇ ಅರ್ಥವು ಕೊಲೊಸ್ಸೆ 2:17ರಲ್ಲಿ ಸಿಕ್ಕುತ್ತದೆ. ಶಾರೀರಿಕ ಅಭಿಲಾಷೆಗಳನ್ನೊಳಗೊಂಡು ಇರುವ ಸ್ವಭಾವವು ಸುನ್ನತಿ ಹೊಂದತಕ್ಕದ್ದು ಎಂದು ಪೌಲನು ನಮಗೆ ಇಲ್ಲಿ ಕಲಿಸುತ್ತಿದ್ದಾನೆ. ಅಂದರೆ, **ಕ್ರಿಸ್ತೀಯ ಸುನ್ನತಿಯ** ಮೂಲಕ ಕೊಲೊಸ್ಸೆಯವರು ಪ್ರಾಪಂಚಿಕ ಅಭಿಲಾಷೆಗಳು ತೆಗೆದು ಹಾಕಲ್ಪಟ್ಟವು.

ಹೊಸ ಒಡಂಬಡಿಕೆಯಲ್ಲಿ **ಶರೀರ** (σάρξ *sarx*) ವಿವಿಧ ರೀತಿಗಳಲ್ಲಿ ಬಳಸಲ್ಪಟ್ಟಿದೆ (ನೋಡಿರಿ "ಹೆಚ್ಚಿನ ಅಧ್ಯಯನಕ್ಕಾಗಿ: 'ಶರೀರ' [*sarx*] ಎಂಬುದರ ಅರ್ಥವು 'ಪಾಪಾಧೀನಸ್ವಭಾವ' ಎಂದೋ?" ಪುಟ 274). ಈ ಪದವು ಕೆಲವು ಸಾರಿ ಆಂಗ್ಲದಲ್ಲಿ ಅನುವಾದಿಸುವದಕ್ಕೆ ಕಠಿಣವಾಗಿರುತ್ತದೆ. ಈ ವಾಕ್ಯಭಾಗ ಮತ್ತು ಇತರ ವಾಕ್ಯಭಾಗಗಳಿಲ್ಲಿ "ಪಾಪಾಧೀನಸ್ವಭಾವ" ಎಂಬ ಭಾವಾನುವಾದದ ಬದಲಾಗಿ, ಅನೇಕ ತರ್ಜುಮೆಗಳು ಬಳಸಿರುವರ ಪ್ರಕಾರವೇ,[13] *sarx* ಎಂಬದಕ್ಕೆ "ಶರೀರ" ಎಂದು ಬಳಸುವದರಿಂದ ಅಪಾರ್ಥದಕ್ಕೆ ಕಡಿಮೆ ಅವಕಾಶವಿರುತ್ತದೆ. ಸನ್ನಿವೇಶವನ್ನು ಪರಿಗಣಗೆಗೆ ತೆಗೆದುಕೊಳ್ಳುವ ಮೂಲಕ, ವಾಚಕನು ಅರ್ಥವನ್ನು ನಿರ್ಧರಿಸಬಹುದು. ಈ ಪದದ ಅರ್ಥವು ಹೀಗಿರಬಹುದಾಗಿದೆ . . .

1. ಶರೀರ, ಒಂದು ದೇಹದ ಮಾಂಸ (ಲೂಕ 24:39; 1 ಕೊರಿಂಥ 15:39).
2. ಒಂದು ಜೀವಿಯ ದೇಹ (ಅಪೊಸ್ತಲರ ಕೃತ್ಯಗಳು 2:31), ಅದರಲ್ಲಿ ದೈಹಿಕ ಬಲಹೀನತೆಗಳು ಸೇರಿರಬಹುದು (ಮತ್ತಾಯ 26:41).
3. ಒಟ್ಟಾರೆಯಾಗಿ ಮಾನವ ಜನಾಂಗ, ಮಾನವ ಜೀವಿಗಳು (ಮತ್ತಾಯ 16:17; ಲೂಕ 3:6; ಯೋಹಾನ 17:2; ಅಪೊಸ್ತಲರ ಕೃತ್ಯಗಳು 2:17).
4. ಯಾವದು ಮಾನವ ಸಂತಾನದಿಂದಾಗಿರುತ್ತದೋ (ರೋಮಾ 1:3; 11:14; ಅಪೊಸ್ತಲರ ಕೃತ್ಯಗಳು 2:30; ಗಲಾತ್ಯ 4:23).
5. ಮಾನವ ದೇಹದ ಮಿತಿಗಳನ್ನೊಳಗೊಂಡಿರುವಂಥ ಜೀವ (ರೋಮಾ 8:3).
6. ಪ್ರಪಂಚದ ಮಾನದಂಡಗಳನ್ನಾಧರಿಸಿದ ಮೂಲತತ್ವಗಳು (1 ಕೊರಿಂಥ 1:26).
7. ಮಾನವರೊಂದಿಗೆ ಸಂಬಂಧ ಹೊಂದಿರುವ ಶಾರೀರಿಕ ಅಭಿಲಾಷೆಗಳು (ರೋಮಾ 7:5).

ಕ್ರಿಸ್ತನಲ್ಲಿ ನೂತನಗೊಳಿಸಲ್ಪಡುವದಕ್ಕೆ ಮುಂಚೆ ಇದ್ದ ಒಬ್ಬ ವ್ಯಕ್ತಿಯ (2 ಕೊರಿಂಥ 5:17) ಪೂರ್ವಸ್ವಭಾವವನ್ನು ಶರೀರಭಾವದ ಅಭಿಲಾಷೆಗಳಿಗೆ ಸಮಾನಗೊಳಿಸಬಹುದು (ರೋಮಾ 6:6; ಕೊಲೊಸ್ಸೆ 3:9). ಹಿಂದಿನ ಕಾಲದಲ್ಲಿ, ಕೊಲೊಸ್ಸೆಯವರು ತಮ್ಮ ದುಷ್ಕೃತ್ಯಗಳ ಕಾರಣದಿಂದ ದೇವರ ಕಡೆಗೆ ದ್ವೇಷಮನಸ್ಸುಳ್ಳವರಾಗಿದ್ದರು (ಕೊಲೊಸ್ಸೆ 1:21). ಎಫೆಸದವರಂತೆಯೇ, ಅವರು ಕಠಿಣ ಹೃದಯಗಳ ನಿಮಿತ್ತವಾಗಿ ಅಜ್ಞಾನದಲ್ಲಿದ್ದರು

(ನೋಡಿರಿ ಎಫೆಸ 4:18). ಅವರ ದುಷ್ಟತನವು ಅವರ ಮನಸ್ಸುಗಳ ಫಲಿತವಾಗಿತ್ತು; ಅವರು ಸ್ವಭಾವತಃ ಕೆಟ್ಟವರು ಅಥವಾ ಅವರ ಚಿತ್ತಕ್ಕೆ ವಿರುದ್ಧವಾಗಿ ಪಾಪಾಧೀನಸ್ವಭಾವದ ನಿಯಂತ್ರಣದಲ್ಲಿದ್ದವರು ಆಗಿರಲಿಲ್ಲ.

ಕ್ರಿಸ್ತೀಯ ಸುನ್ನತಿಯು "ಪಾಪಾಧೀನಸ್ವಭಾವವನ್ನು" ತೆಗೆದು ಹಾಕಿರುವದಾಗಿದ್ದರೆ, ಈ ದೀಕ್ಷಾಸ್ನಾನ ಮಾಡಿಸಿಕೊಂಡವರು ಇನ್ನು ಮೇಲೆ ಪಾಪಾಧೀನಸ್ವಭಾವವನ್ನು ಹೊಂದಿಲ್ಲ ಮತ್ತು ಇನ್ನು ಮೇಲೆ ಪಾಪ ಮಾಡುವದಿಲ್ಲ ಎಂದರ್ಥವಾಗಿರುತ್ತದೆ. ಆದಾಮ ಮತ್ತು ಹವ್ವಳರು ನಿಷೇಧಿಸಲ್ಪಟ್ಟ ಮರದಿಂದ ಹಣ್ಣನ್ನು ತಿಂದ ಬಳಿಕ, ಅವರ ಸ್ವಭಾವಗಳು ಪಾಪಾಧೀನಗೊಂಡಿದ್ದು ನಿಜವಾಗಿದ್ದಲ್ಲಿ, ಆ ಸ್ವಭಾವವನ್ನು ತೆಗೆದು ಹಾಕಲ್ಪಡುವದರಿಂದ ಜನರನ್ನು ಪುನಃ ಆದಾಮ ಮತ್ತು ಹವ್ವಳರು ತಿನ್ನುವದಕ್ಕೆ ಮುಂಚೆ ಹೊಂದಿದ್ದ ಅದೇ ಪಾಪರಹಿತ ಸ್ವಭಾವ ಹೊಂದಿರುವವರನ್ನಾಗಿ ಮಾಡುವದು ಎಂದಾಗುತ್ತದೆ. ಅವರು ಬೆತ್ತಲೆಯನ್ನು ಗುರುತಿಸದವರಾಗುವು, ಮತ್ತು ಅವರಿಗೆ ನಾಚಿಕೆ ಇರುವದಿಲ್ಲ. (ಪುಟ 272ರಲ್ಲಿರುವ "ಹೆಚ್ಚಿನ ಅಧ್ಯಯನಕ್ಕಾಗಿ: ನಮ್ಮಲ್ಲಿ ಒಂದು ಪಾಪಾಧೀನಸ್ವಭಾವ ಇರುತ್ತದೋ?" ನೋಡಿರಿ.)

*11 ರಿಂದ 13 ವಚನಗಳಲ್ಲಿ ಶಾರೀರಿಕ ಮತ್ತು ಆತ್ಮೀಕ ನಡುವೆ ಬಳಲಸಲ್ಪಟ್ಟಿರುವ ಎರಡನೆಯ ಹೋಲಿಕೆಯು ಯೇಸುವಿನ ಶಿಲುಬೆ ಮರಣದ ಬಳಿಕ ಆತನ ಹೊಸ ಜೀವನ ಮತ್ತು ದೀಕ್ಷಾಸ್ನಾನದ ಬಳಿಕ ಒಬ್ಬ ಕ್ರೈಸ್ತನ ಹೊಸ ಜೀವನದ ನಡುವಿನದ್ದಾಗಿರುತ್ತದೆ.* ಯೇಸುವು ಮರಣಿಸಿದ ಬಳಿಕ, ಆತನು ಹೂಣಲ್ಪಟ್ಟನು ಮತ್ತು ಒಂದು ಹೊಸ ಶಾರೀರಿಕ ಜೀವನಕ್ಕೆ ಎಬ್ಬಿಸಲ್ಪಟ್ಟನು. ದೀಕ್ಷಾಸ್ನಾನದಲ್ಲಿ ನೀರಿನಲ್ಲಿ ಹೂಣಲ್ಪಟ್ಟ ಒಬ್ಬ ವ್ಯಕ್ತಿಯು ನಂತರ ಒಂದು ಹೊಸ ಆತ್ಮೀಕ ಜೀವನಕ್ಕೆ ಎಬ್ಬಿಸಲ್ಪಡುತ್ತಾನೆ.

ಕೇವಲ ಮತ್ತೊಂದು ಧಾರ್ಮಿಕ ಆಚಾರ ಎಂಬರ್ಥದಲ್ಲಿ ದೀಕ್ಷಾಸ್ನಾನವನ್ನು ಸುನ್ನತಿಯೊಂದಿಗೆ ಹೋಲಿಕೆ ಮಾಡಕೂಡದು. ಧರ್ಮಶಾಸ್ತ್ರದ ಅಡಿಯಲ್ಲಿ ಸುನ್ನತಿ ಮಾಡಿಸಿಕೊಳ್ಳುವವರು ಸುನ್ನತಿಗೆ ಯಾವದೇ ಆಂತರಿಕ ಪ್ರತಿಕ್ರಿಯೆಯನ್ನು ಕೊಡಬೇಕಾದ ಅಗತ್ಯವಿರಲಿಲ್ಲ. ಮತ್ತೊಬ್ಬನ ಶುದ್ಧೀಕರಿಸುವ ರಕ್ತದಲ್ಲಿ ನಂಬಿಕೆಯಿಡಬೇಕೆಂಬ ಯಾವದೇ ಆಜ್ಞಾಪಣೆಯಿರಲಿಲ್ಲ, ಬದಲಾದ ಜೀವನ ಇರಬೇಕೆಂದು ಯಾವ ಬೇಡಿಕೆಯೂ ಇರಲಿಲ್ಲ. ಖಂಡಿತವಾಗಿಯೂ, ಪೌಲನು ಅದೇ ರೀತಿಯಲ್ಲಿಯೇ ಕೊಲೊಸ್ಸೆಯವರ ಮೇಲೆ ನಿರರ್ಥಕವಾದ ಸಂಸ್ಕಾರವೊಂದನ್ನು ಹೇರಲಿಲ್ಲ. "ದೀಕ್ಷಾಸ್ನಾನವು ನಂಬಿಕೆಯ ಸಂಸ್ಕಾರವಾಗಿರುತ್ತದೆ, ಮತ್ತು ಮೂಲತತ್ವ ಮತ್ತು ಯೋಚನೆಯಲ್ಲಿ, ಎಂದಿಗೂ ಅದರ ವಸ್ತುವಿನಿಂದ ಬೇರ್ಪಡಿಸಲ್ಪಡಕೂಡದು . . . , ನಿಜವಾಗಿಯೂ ವಸ್ತುವು ಇಲ್ಲದಿರುವಲ್ಲಿ ಅದರ ಕೆಲಸ ಮುಗಿಯಿತೇನೋ ಎಂಬಂತೆ."[14]

ಕೊಲೊಸ್ಸೆಯವರು ದೇವರ ಕಾರ್ಯದಲ್ಲಿ ನಂಬಿಕೆಯಿಡುವ ಮೂಲಕ ದೀಕ್ಷಾಸ್ನಾನ ಮಾಡಿಸಿಕೊಂಡು ಕ್ರಿಸ್ತನನ್ನು ಪ್ರವೇಶಿಸಿದಾಗ, ಅವರು ಆತ್ಮೀಕವಾಗಿ ಸುನ್ನತಿ ಹೊಂದಿದರು ಮತ್ತು ಆತ್ಮೀಕವಾಗಿ ಬದುಕಿಸಲ್ಪಟ್ಟರು. ಅವರು ಆತ್ಮೀಕವಾಗಿ ಸುನ್ನತಿಯನ್ನು ಹೊಂದಿದಾಗ, "ಉತ್ತಮ, ನೀವು 'ಕ್ರಿಸ್ತನಲ್ಲಿ' ಪ್ರವೇಶಿಸಿದ ವೇಳೆ, *ಸುನ್ನತಿ ಹೊಂದಿದಿರಿ.* ಅವರಲ್ಲಿ ಆಗಲೇ ದೈವಿಕ ವಾಸ್ತವಿಕೆಯು ಇತ್ತು"[15] ಎಂದು ಹೇಳುವ ಮೂಲಕ H. C. G. Moule ಸರಿಯಾಗಿಯೇ ಅಭಿಪ್ರಾಯ ವ್ಯಕ್ತಪಡಿಸುತ್ತಾನೆ.

ಬೇರೊಂದು ಕಡೆಯಲ್ಲಿ, ಪೌಲನು ಕ್ರಿಸ್ತೀಯ ಸುನ್ನತಿಯು ಕೊಲೊಸ್ಸೆಯವರ ಪಾಪಾಧೀನಸ್ವಭಾವವನ್ನು ತೆಗೆದು ಹಾಕಿತು ಎಂಬದನ್ನು ಸೂಚಿಸುತ್ತಾನೆ. ದೀಕ್ಷಾಸ್ನಾನ ಮಾಡಿಸಿಕೊಳ್ಳುವಾಗ ಪಾಪಗಳು ನಿವಾರಿಸಲ್ಪಡುತ್ತವಾದರೂ, ದೀಕ್ಷಾಸ್ನಾನ ಮಾಡಿಸಿಕೊಳ್ಳುವವರು ಪಾಪಕೃತ್ಯಗಳನ್ನು ಬಿಟ್ಟು ಬಿಡಬೇಕು (ಕೊಲೊಸ್ಸೆ 3:8, 9; 2 ಕೊರಿಂಥ 7:1).

ಕೊಲೊಸ್ಸೆಯವರು ದೀಕ್ಷಾಸ್ನಾನ ಮಾಡಿಸಿಕೊಳ್ಳುವ ವೇಳೆ, ಅವರು ದೇವರಲ್ಲಿ, ಆತನು ಅವರ ಅಪರಾಧಗಳನ್ನು ಕ್ಷಮಿಸುವ ಮೂಲಕ ಅವರನ್ನು ಬದುಕಿಸುತ್ತಿದ್ದಾನೆ ಮತ್ತು ಆತ್ಮೀಕ ಸುನ್ನತಿಯನ್ನು ಮಾಡುತ್ತಿದ್ದಾನೆ ಎಂಬ ವಾಸ್ತವಾಂಶದಲ್ಲಿ ತಮ್ಮ ವಿಶ್ವಾಸವನ್ನು ಇಡುವವರಾಗಿದ್ದರು.

ಅಪೇಕ್ಷಿಸಲ್ಪಟ್ಟ ಫಲಿತಾಂಶಗಳನ್ನು ತರುವದಕ್ಕಾಗಿ ದೇವರು ಮಾಡುತ್ತಿದ್ದ ಕಾರ್ಯದಲ್ಲಿ ಸಹೋದರರು ನಂಬಿಕೆಯನ್ನು ಇಡದೆ ಹೋಗಿದ್ದರೆ ನಂಬಿಕೆಯು ನಿಷ್ಪ್ರಯೋಜಕವಾಗುತ್ತಿತ್ತು. ಈ ಫಲಿತಾಂಶಗಳಲ್ಲಿ ಆತ್ಮೀಕ ಸುನ್ನತಿಯ ಮೂಲಕ ಶಾರೀರಿಕ ಅಭಿಲಾಷೆಗಳನ್ನು ತೆಗೆದು ಹಾಕುವದು, ಯೇಸುವಿನ ಸಂಗಡ ಹೊಸ ಜೀವನ ನಡಿಸುವದಕ್ಕೆ ಪನರುತ್ಥಾನಗೊಳಿಸಲ್ಪಡುವದು, ಮತ್ತು ಪಾಪಗಳ ಕ್ಷಮಾಪಣೆ ಇವುಗಳು ಸೇರಿದ್ದವು.

ಯೆಹೂದಿ ಸುನ್ನತಿಯು ಕೇವಲ ಶಾರೀರಿಕ ದೇಹದಿಂದ ಒಂದು ಭಾಗವನ್ನು ಮಾತ್ರವೇ ತೆಗೆದು ಹಾಕುತ್ತಿತ್ತು, ಆದರೆ ಕ್ರಿಸ್ತೀಯ ಸುನ್ನತಿಯು ಇಡೀ ಪಾಪಾಧೀನಸ್ವಭಾವವನ್ನೇ ತೆಗೆದು ಹಾಕಿವದಾಗಿತ್ತು. ಅದರ ಪರಿಣಾಮವು ಒಂದು ದೈಹಕ ಕಾರ್ಯದ ಮೂಲಕವಷ್ಟೆ ಉಂಟಾಗುವಂತೆ ಮಾಡಲ್ಪಡುವದಿಲ್ಲ. ಬದಲಾಗಿ, ಅದಕ್ಕೆ ಹೃದಯದಿಂದ ಸೈಹಿಕ ಕಾರ್ಯವೊಂದಕ್ಕೆ ಅಧೀನಪಡಿಸಿಕೊಳ್ಳುವದರೊಂದಿಗೆ ಒಂದು ಆತ್ಮೀಕ ಸಹವಾಸದ ಅಗತ್ಯವಿರುತ್ತದೆ (ರೋಮಾ 6:17, 18). ಅದು ಹೃದಯದ ಸುನ್ನತಿಯಾಗಿದೆ (ರೋಮಾ 2:28, 29). ಒಬ್ಬನು ನೂತನ ವ್ಯಕ್ತಿಯಾಗುವ ಹಾಗೆ ಆತನ ಪೂರ್ವಸ್ವಭಾವವಾದ ಪಾಪಾಧೀನಸ್ವಭಾವವು ತೆಗೆದು ಹಾಕಲ್ಪಟ್ಟಾಗ ಕ್ರಿಸ್ತೀಯ ಸುನ್ನತಿಯು ಸಂಭವಿಸುತ್ತದೆ (ರೋಮಾ 6:6). ದೇವರೇ ಆತ್ಮೀಕ ಸುನ್ನತಿಯನ್ನು ಮಾಡುವವನಾಗಿದ್ದಾನೆ (ಕೊಲೊಸ್ಸೆ 2:12).

ಹೃದಯದ ಸುನ್ನತಿಯನ್ನು ದೇವರು ಯಾವಾಗಲೂ ಅಪೇಕ್ಷೆ ಪಡುವವನಾಗಿದ್ದನು. ಮೋಶೆಯ ಮೂಲಕ, ದೇವರು ತಮ್ಮ ಹೃದಯಗಳನ್ನು ಸುನ್ನತಿ ಮಾಡಿಸಿಕೊಳ್ಳುವಂತೆ ಜನರಿಗೆ ಹೇಳಿದನು (ಧರ್ಮೋಪದೇಶಕಾಂಡ 10:16). ಯೆರೆಮೀಯನು ಸಹ ಇಸ್ರಾಯೇಲ್ಯರಿಂದ ಅದನ್ನೇ ಬಯಸಿದನು (ಯೆರೆಮೀಯ 4:4; 9:25, 26). ದೇವರು ಹೃದಯದಲ್ಲಿ ಸುನ್ನತಿ ಮಾಡಿಸಿಕೊಳ್ಳದವರನ್ನು ಅಂಗೀಕರಿಸಿಕೊಳ್ಳುವದಿಲ್ಲ ಎಂಬದಾಗಿ ಯೆಹೆಜ್ಕೇಲನು ಹೇಳುತ್ತಾನೆ (ಯೆಹಜ್ಕೇಲ 44:7, 9).

ಪೌಲನು ಆತ್ಮೀಕ ಸುನ್ನತಿಯ ಕುರಿತು ತನ್ನ ಚರ್ಚೆಯನ್ನು ಮುಂದುವರೆಸುವವನಾಗಿ, ಹೊಸ ಜೀವನ, ಕ್ಷಮಾಪಣೆ, ಮತ್ತು ಕ್ರೈಸ್ತೀಯ ಸ್ವಾತಂತ್ರ್ಯ ಸೇರಿದಂತೆ ಅದರ ಫಲಿತದಿಂದಾಗುವ ಹಲವಾರು ಆಶೀರ್ವಾದಗಳನ್ನು ಹೆಸರಿಸುತ್ತಾನೆ.

## ಕ್ರಿಸ್ತನಲ್ಲಿ ಜೀವ ಮತ್ತು ಕ್ಷಮಾಪಣೆ (2:12, 13)

**[12]ನೀವು ದೀಕ್ಷಾಸ್ನಾನದಲ್ಲಿ ಕ್ರಿಸ್ತನೊಂದಿಗೆ ಹೂಣಲ್ಪಟ್ಟದ್ದರಿಂದಲೇ ಆ ಸುನ್ನತಿಯನ್ನು ಹೊಂದಿದಿರಿ. ಇದಲ್ಲದೆ ಆತನನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರ ಸಾಮರ್ಥ್ಯದಲ್ಲಿ ನಂಬಿಕೆಯಿಡುವದರ ಮೂಲಕ ಅದರಲ್ಲಿ ಆತನ ಕೂಡ ಎದ್ದು ಬಂದಿರಿ. [13]ಅಪರಾಧಗಳನ್ನು ಮಾಡುವದರಿಂದಲೂ ಸುನ್ನತಿಯಿಲ್ಲದ ಶರೀರಭಾವದಿಂದಲೂ ಸತ್ತವರಾಗಿದ್ದ ನಿಮ್ಮನ್ನು ಸಹ ದೇವರು ಕ್ರಿಸ್ತನೊಂದಿಗೆ ಬದುಕಿಸಿದ್ದಾನೆ.**

ನಾವು ದೀಕ್ಷಾಸ್ನಾನದಲ್ಲಿ ಕ್ರಿಸ್ತನ ಸಂಗಡ ಹೂಣಲ್ಪಟ್ಟಾಗ ಅತ್ಮೀಕ ಸುನ್ನತಿಯು ಸಂಭವಿಸುತ್ತದೆ (2:11-13). ಲೇಖಕನು ಎರಡು ದೈಹಿಕ ಕಾರ್ಯಗಳನ್ನು – ಸುನ್ನತಿ ಮತ್ತು ನೀರಿನಲ್ಲಿ ಮುಳುಗಿಸಲ್ಪಡುವಿಕೆ – ದೀಕ್ಷಾಸ್ನಾನದ ಆತ್ಮೀಕ ವಾಸ್ತವಿಕತೆಯೊಂದಿಗೆ ಹೋಲಿಕೆ ಮಾಡುತ್ತಿದ್ದಾನೆ. ದೀಕ್ಷಾಸ್ನಾನದಲ್ಲಿ ಒಬ್ಬ ವ್ಯಕ್ತಿಯು ಯೇಸುವಿನ ಹೂಣಲ್ಪಡುವಿಕೆ ಮತ್ತು ಪುನರುತ್ಥಾನಗಳಲ್ಲಿ ಪಾಲುಗಾರನಾಗುವ ಮೂಲಕ ಬದುಕಿಸಲ್ಪಡುವನು. ಪೌಲನು ವಿವರಿಸಿದ್ದೇನೆಂದರೆ, ದೀಕ್ಷಾಸ್ನಾನದಲ್ಲಿ ಒಬ್ಬ ವ್ಯಕ್ತಿಯು ಪಾಪದಲ್ಲಿ ಸತ್ತವನಾಗಿರುವದರಿಂದ ಆತ್ಮೀಕವಾಗಿ ಬದುಕಿಸಲ್ಪಟ್ಟ ಸ್ಥಿತಿ ತರಲ್ಪಡುತ್ತಾನೆ ಎಂಬದೆ. ಈ ಮಾರ್ಪಾಡುಗಳು ಸಂಭವಿಸುವ ಸಮಯವು ದೀಕ್ಷಾಸ್ನಾನ ಮಾಡಿಸಿಕೊಳ್ಳುವಾಗಲೇ ಎಂದು ನಿರ್ದಿಷ್ಟವಾಗಿ ಹೇಳಲ್ಪಟ್ಟಿರುತ್ತದೆ. R. C. Lucas ಹೀಗೆ ಬರೆಯುತ್ತಾನೆ, "ಕ್ರಿಸ್ತನಲ್ಲಿ ಸೇರುವದಕ್ಕಾಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವದೆಂದರೆ ಆತನ ಮರಣ ಹಾಗೂ ಆತನ ಪುನರುತ್ಥಾನದ ಪ್ರಯೋಜನಗಳಲ್ಲಿ ಪಾಲು ಹೊಂದುವದೇ ಎಂದರ್ಥವಾಗಿರುತ್ತದೆ."[16]

ಪೌಲನು ದೈಹಿಕವಾಗಿ ಮುಳುಗಿಸಲ್ಪಡುವದರೊಂದಿಗೆ ವಿವಿಧ ಆತ್ಮೀಕ ವಾಸ್ತವಿಕತೆಗಳನ್ನು ಸಂಬಂಧಗೊಳಿತ್ತಾನೆ. ಆತನು ಕರ್ತನ ಭೋಜನದ ವಿಷಯದಲ್ಲಿ ಸಹ ಅದೇ ದಾರಿಯನ್ನು ಅನುಸರಿಸಿದನು. ರೊಟ್ಟಿಯ ಮತ್ತು ದ್ರಾಕ್ಷಾ ಹಣ್ಣಿನ ದೈಹಿಕ ಪದಾರ್ಥಗಳು ಯೇಸುವಿನ ದೇಹ ಮತ್ತು ರಕ್ತದೊಂದಿಗೆ ಕ್ರೈಸ್ತರಿಗಿರುವ ಆತ್ಮೀಕ ಸಹವಾಸಕ್ಕೆ ಸಂಬಂಧ ಪಟ್ಟಿರುತ್ತವೆ (1 ಕೊರಿಂಥ 10:16). ದೀಕ್ಷಾಸ್ನಾನವು ಪ್ರಮಾಣೀಕೃತವಾದದ್ದಾಗಿ ಇರಬೇಕೆಂದರೆ, ಅದು ಯೇಸುವಿನ ಹೂಣಲ್ಪಡುವಿಕೆ ಮತ್ತು ಪುನರುತ್ಥಾನಗಳೊಂದಿಗೆ ಸಂಬಂಧ ಹೊಂದಿರುವ ಆತ್ಮೀಕ ವಾಸ್ತವಿಕತೆಗಳನ್ನೊಳಗೊಂಡಿರಬೇಕು, ಅದರ ಫಲಿತವಾಗಿ ಪೂರ್ವಸ್ವಭಾವವು ಹೂಣಲ್ಪಡಬೇಕು ಮತ್ತು ಪುನರುತ್ಥಾನಗೊಂಡು ಹೊಸ ಜೀವನ ನಡಿಸಬೇಕು. Hay ಹೀಗೆ ಹೇಳುತ್ತಾನೆ,

> ದೀಕ್ಷಾಸ್ನಾನದಲ್ಲಿ ಕೊಲೊಸ್ಸೆಯವರು ಬೆತ್ತಲೆಗೊಳಿಸಲ್ಪಡುವಿಕೆಯನ್ನು ಪುನರಭಿನಯಿಸುವವರಾಗಿದ್ದರು, ಅಕ್ಷರಶಃ ಹಳೇ ಉಡುಪನ್ನು ಕಳಚಿ ಬಿಟ್ಟು ಸಾಂಕೇತಿಕವಾಗಿ "ಪಾಪಾಧೀನಸ್ವಭಾವವನ್ನು" (2:11), ಅವರ "ಪೂರ್ವಸ್ವಭಾವವನ್ನು" (3:9) ಕಳಚಿ ಬಿಡುವವರಾಗಿದ್ದರು. ಪೂರ್ವಸ್ವಭಾವವನ್ನು ತೆಗೆದು ಹಾಕುವ ಮೂಲಕ ಅವರು ಶಾರೀರಭಾವದಿಂದ ಮತ್ತು ಮುಂಚೆ ಅವರನ್ನು ನಿಯಂತ್ರಣ ಮಾಡುತ್ತಿದ್ದ ಅಥವಾ ಪಾಪಕೃತ್ಯಗಳನ್ನು ಮಾಡುವಂತೆ ಶೋಧನೆಗೆ ನಡಿಸುತ್ತಿದ್ದ ಆತ್ಮೀಕ ದೊರೆತನಗಳು ಮತ್ತು ಅಧಿಕಾರಗಳ ಅಧೀನದಿಂದ ಸ್ವತಂತ್ರಗೊಳಿಸಲ್ಪಟ್ಟಿದ್ದರು.[17]

ದೀಕ್ಷಾಸ್ನಾನದಲ್ಲಿ ಕೇವಲ ಯೇಸುವಿನೊಂದಿಗೆ ಹೂಣಲ್ಪಟ್ಟು ಪುನರುತ್ಥಾನಗೊಂಡ

ಮಾತ್ರಕ್ಕೆ ಯಾವದೇ ಮಾಂತ್ರಿಕವಾದ ಸುಧಾರಣೆಯು ಸಂಭವಿಸಿ ಬಿಡುವದಿಲ್ಲ. ಅದರ ಫಲಿತವಾದ ಹೊಸ ಜೀವನವು ವಿಧೇಯತೆಯುಳ್ಳ ಹೃದಯದಿಂದ ಬರುತ್ತದೆ (ರೋಮಾ 6:4, 17, 18). ದೀಕ್ಷಾಸ್ನಾನ ಮಾಡಿಸಲ್ಪಡುವವನು ಯೇಸುವನ ಸಂಗಡ ಹೂಣಲ್ಪಟ್ಟು ಪುನರುತ್ಥಾನಗೊಳ್ಳುವ ಮೂಲಕ ಆತನೊಂದಿಗೆ ಗುರುತಿಸಿಕೊಳ್ಳುತ್ತಾನೆ. ನೀರಿನಲ್ಲಿ ದೇಹದ ಹೂಣಲ್ಪಡುವಿಕೆ ಮತ್ತು ನೀರಿನಲ್ಲಿ ದೇಹಕ್ಕಾಗುವ ಪುನರುತ್ಥಾನದಲ್ಲಿ ಹೃದಯದ ಜೊತೆಗೆ ದೇಹವನ್ನೂ ಭಾಗಿಯಾಗಿರಬೇಕು. "ಈ ತೀವ್ರವಾದ ರೂಪಾಂತರಗೊಳ್ಳುವಿಕೆಯು ಯಾವದೇ ಮನುಷ್ಯ ಶಕ್ತಿಯ ಅಥವಾ ಅಂತರ್ದೃಷ್ಟಿಯ ಕಾರಣದಿಂದಾಗುವದಲ್ಲ. ಅದು ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸುವ ಮೂಲಕ ತನ್ನ ಶಕ್ತಿಯನ್ನು ಘೋಷಿಸಿರುವ ದೇವರ ಶಕ್ತಿಯಲ್ಲಿ ನಂಬಿಕೆಯಿಡುವದರಿಂದ ಸಂಭವಿಸುತ್ತದೆ."[18]

## "ನೀವು ದೀಕ್ಷಾಸ್ನಾನದಲ್ಲಿ ಕ್ರಿಸ್ತನೊಂದಿಗೆ ಹೂಣಲ್ಪಟ್ಟದ್ದರಿಂದಲೇ" (2:12)

**ಕ್ರಿಸ್ತನೊಂದಿಗೆ ಹೂಣಲ್ಪಟ್ಟಿರಿ** (συνταφέντες, *suntaphentes*) ಎಂಬುದರ ಅನುವಾದಿತ ಪದವು ಒಂದು ಅನಿಶ್ಚಿತ ನಿಷ್ಕ್ರಿಯ ಕೃದಂತವಾಗಿದ್ದು, ಅದು ವಚನದಲ್ಲಿ ನಂತರ ಬರುವ "ಎದ್ದು ಬಂದಿರಿ" ಎಂಬುದಕ್ಕೆ ಮುಂಚೆ ಕ್ರಿಯೆಯು ಪೂರ್ತಿಗೊಳಿಸಲ್ಪಟ್ಟಿತೆಂಬ ಅರ್ಥವನ್ನು ಕೊಡುತ್ತದೆ. ಅದು ಬೇರೊಂದು ಕಡೆ ಕೇವಲ ರೋಮಾ 6:4ರಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ. ಇದೊಂದು ಸಂಯುಕ್ತ ಕ್ರಿಯಾಪದವಾಗಿದ್ದು, ಅದು σύν (*sun*, "ಯೊಂದಿಗೆ") ಮತ್ತು θάπτω (*thaptō*, "ಹೂಣು") ಎಂಬ ಪದಗಳನ್ನು ಒಂದುಗೂಡಿಸುತ್ತದೆ. ಪೌಲನು *sun* ಉಪಸರ್ಗದೊಂದಿಗೆ ಆರಂಭಗೊಳ್ಳುವ ಸಂಯುಕ್ತ ಪದಗಳನ್ನು ಪದೇ ಪದೇ ಬಳಸುತ್ತಾನೆ. 12 ಮತ್ತು 13 ವಚನಗಳಲ್ಲಿ ಅಂಥ ಮೂರು ಪದಗಳು ಬಳಸಲ್ಪಟ್ಟಿವೆ.[19] **ದೀಕ್ಷಾಸ್ನಾನದಲ್ಲಿ** ಕೊಲೊಸ್ಸೆಯವರು ಸಹ – ಹೂಣಲ್ಪಟ್ಟವರು, ಜೊತೆಯಾಗಿ ಹೂಣಲ್ಪಟ್ಟವರು, "ಕ್ರಿಸ್ತನೊಂದಿಗೆ" ಹೂಣಲ್ಪಟ್ಟವರು ಆಗಿದ್ದರು; ಸಹ-ಎಬ್ಬಿಸಲ್ಪಟ್ಟವರು, ಜೊತೆಯಾಗಿ ಎಬ್ಬಿಸಲ್ಪಟ್ಟವರು, "ಆತನ ಕೂಡ" ಎಬ್ಬಿಸಲ್ಪಟ್ಟವರು ಆಗಿದ್ದರು; ಮತ್ತು, ಅದರ ಫಲಿತವಾಗಿ, ಸಹ-"ಬದುಕಿ"ಸಲ್ಪಟ್ಟವರು, ಜೊತೆಯಾಗಿ ಬದುಕಿಸಲ್ಪಟ್ಟವರು, "ಕ್ರಿಸ್ತನೊಂದಿಗೆ" ಬದುಕಿಸಲ್ಪಟ್ಟವರು ಆದರು.

ಒಬ್ಬನು ತನ್ನ ದೇಹವನ್ನು ನೀರಿನಲ್ಲಿ ಹೂಣಲ್ಪಡುವಂತೆ ಮತ್ತು ಬಳಿಕ ಅದನ್ನು ಎಬ್ಬಿಸುವಂತೆ ಮತ್ತೊಬ್ಬನಿಗೆ ಅನುಮತಿಸುವ ಮೂಲಕ ದೀಕ್ಷಾಸ್ನಾನವು ಮಾಡಿಸಲ್ಪಡಬೇಕು. ಈ ವಿಧದಲ್ಲಿ, ದೀಕ್ಷಾಸ್ನಾನವನ್ನು ಪಡೆದುಕೊಳ್ಳುವವನು ಯೇಸುವಿನೊಂದಿಗೆ ಆತನ ಹೂಣಲ್ಪಡುವಿಕೆ ಮತ್ತು ಪುನರುತ್ಥಾನಗಳಲ್ಲಿ ಪಾಲುಗಾರನಾಗುತ್ತಾನೆ. ಯೇಸುವು ಹೇಗೆ ಮನುಷ್ಯರಿಂದ ಶಿಲುಬೆಗೆ ಹಾಕಲ್ಪಟ್ಟು ದೇವರಿಂದ ಎಬ್ಬಿಸಲ್ಪಟ್ಟನೋ (ವ. 12), ಹಾಗೆಯೇ ದೀಕ್ಷಾಸ್ನಾನ ಮಾಡಿಸಿಕೊಳ್ಳುವವರು ಮತ್ತೊಬ್ಬರ ಕ್ರಿಯೆಗಳಿಗೆ ತಮ್ಮನ್ನು ಅಧೀನಪಡಿಸಿಕೊಳ್ಳುತ್ತಾರೆ. ಯೇಸು ಸ್ವತಃ ಶಿಲುಬೆಯನ್ನು ನಿರ್ಮಿಸಲಿಲ್ಲ, ತನ್ನನ್ನು ಶಿಲುಬೆಗೆ ಮೊಳೆಗಳಿಂದ ಜಡಿದುಕೊಳ್ಳಲಿಲ್ಲ, ಅಥವಾ ತಾನೇ ಸ್ವತಃ ಶಿಲುಬೆಯ ಮೇಲೆ ಏರಲಿಲ್ಲ. ಯೇಸುವು ಮಾನರಿಗಾಗಿ ಇದೆಲ್ಲವನ್ನೇ ಅನುಭವಿಸಿದನಾದರೂ, ಶಿಲುಬೆಗೇರಿಸಲ್ಪಟ್ಟದ್ದು ಸ್ವತಃ ತಾನೇ ಮಾಡಿಕೊಂಡ ಕಾರ್ಯವಾಗಿರಲಿಲ್ಲ. ಅದೇ ರೀತಿಯಲ್ಲಿಯೇ, ದೀಕ್ಷಾಸ್ನಾನ ಮಾಡಿಸಲ್ಪಡುವವನು ಸ್ವತಃ ತಾನೇ ತನ್ನನ್ನು ಹೂಣಿಸಿಕೊಂಡು ಎಬ್ಬಿಸಿಕೊಳ್ಳುವದಿಲ್ಲ. ಆದ್ದರಿಂದ ಒಬ್ಬನು ದೀಕ್ಷಾಸ್ನಾನ

ಹೊಂದುವ ಮೂಲಕ ರಕ್ಷಿಸಲ್ಪಡುವ ವೇಳೆ ಸ್ವತಃ ಯಾವ ಕಾರ್ಯವನ್ನು ಮಾಡುವದಿಲ್ಲ ಎಂದು ಹೇಳುವದು ನಿಖರವಾಗಿರುತ್ತದೆ (ಮಾರ್ಕ 16:16; 1 ಪೇತ್ರ 3:21). "ನಾವು ಮಾಡಿದ ಪುಣ್ಯಕ್ರಿಯೆಗಳ ನಿಮಿತ್ತದಿಂದಲ್ಲ ಆತನ ಕರುಣೆಯಲ್ಲಿಯೇ ಪುನರ್ಜನ್ಮವನ್ನು ಸೂಚಿಸುವ ಸ್ನಾನದ ಮೂಲಕವಾಗಿಯೂ ಪವಿತ್ರಾತ್ಮನ ನಮ್ಮಲ್ಲಿ ನೂತನಸ್ವಭಾವವನ್ನು ಉಂಟು ಮಾಡುವದರ ಮೂಲಕವಾಗಿಯೂ ಆತನು ನಮ್ಮನ್ನು ರಕ್ಷಿಸಿದನು" (ತೀತನಿಗೆ 3:5; ನೋಡಿರಿ ಎಫೆಸ 2:8, 9).

ದೀಕ್ಷಾಸ್ನಾನ ಮಾಡಿಸಿಕೊಳ್ಳುವವನನ್ನು ಮತ್ತೊಬ್ಬ ವ್ಯಕ್ತಿಯ ಕೈಗಳು ನೀರಿನಲ್ಲಿ ಹೂಣಿಟ್ಟು ನಂತರ ಮೇಲಕ್ಕೆತ್ತುತ್ತವಾದರೂ, ಯೇಸುವು ಕೈಗಳಿಂದಲ್ಲ ಆತ್ಮೀಕ ಸುನ್ನತಿಯನ್ನು ಮಾಡುವವನಾಗಿದ್ದಾನೆ.

> ಹೀಗೆ ದೀಕ್ಷಾಸ್ನಾನವು ಒಬ್ಬನಿಗೆ ಮಾಡಲ್ಪಡುವ ಕಾರ್ಯವಾಗಿದೆ. ನೋಹನು ನಾವೆಯನ್ನು ಕಟ್ಟಿದೆ, ಕರ್ತನು ಅದನ್ನು ಸುರಕ್ಷಿತವಾಗಿ ನೀರುಗಳ ಮೂಲಕ ಕರೆತಂದನು; ಮತ್ತು ಮೋಶೆ ಹಾಗೂ ಯೆಹೋಶುವ ಜನರನ್ನು ನೀರುಗಳ ಮೂಲಕ ನಡಿಸಿದರು. ಕ್ರೈಸ್ತೀಯ ದೀಕ್ಷಾಸ್ನಾನವು ಯೆಶಾಯನ ಪುಸ್ತಕದಲ್ಲಿನ "ನಿಮ್ಮನ್ನು ತೊಳೆದುಕೊಂಡು ಶುದ್ಧ ಮಾಡಿಕೊಳ್ಳಿರಿ" ಎಂಬಂತಲ್ಲ, ಯೆಹೂದಿ ಮತದ ಸ್ನಾನದ ಆಚಾರಗಳಂತಲ್ಲ, ಕುಮ್ರಾನನಲ್ಲಿರುವ ದೃಷ್ಟಾಂತಗಳಂತಲ್ಲ, ಅಥವಾ ಮತಾಂತರಗೊಂಡವರಿಗೆ ಮಾಡಲಾಗುತ್ತಿದ್ದ ಯೆಹೂದಿ ಸ್ನಾನದಂತಲ್ಲ; ಯಾಕೆಂದರೆ, ಯೋಹಾನನಿಂದ ಮಾಡಲ್ಪಡುತ್ತಿದ್ದ ದೀಕ್ಷಾಸ್ನಾನವನ್ನು ಅನುಸರಿಸುವದಾಗಿ (ಯೇಸುವು ಸಹ ಅದನ್ನು ಮಾಡಿಸಿಕೊಂಡನು), ಅದು ಯಾವಾಗಲೂ, ಎಲ್ಲೆಡೆಯೂ, ಮತ್ತು ಎಲ್ಲರಿಗಾಗಿಯೂ, ಒಬ್ಬನಿಗೆ ಮಾಡಲ್ಪಡುವಂತಹ ಸಂಗತಿಯಾಗಿರುತ್ತದೆ.[20]

ದೀಕ್ಷಾಸ್ನಾನ ಮಾಡಿಸಲ್ಪಡುತ್ತಿರುವ ವ್ಯಕ್ತಿಯು ತನ್ನನ್ನು ಮತ್ತೊಬ್ಬನನ ಕೈಗಳಲ್ಲಿ ಒಪ್ಪಿಸಿಕೊಳ್ಳುತ್ತಾನೆ, ತನ್ನನ್ನು ನೀರಿನಲ್ಲಿ ಕೆಳಕ್ಕೆ ಇಳಿಸುವಂತೆ ಮತ್ತು ತನ್ನನ್ನು ಯಶಸ್ವಿಯಾಗಿ ನೀರಿನಿಂದ ಮೇಲಕ್ಕೆತ್ತುವಂತೆ ಆತನ ಮೇಲೆ ಅವಲಂಭಿತನಾಗುತ್ತಾನೆ. ಹೇಗೂ, ಪಾಪಗಳ ಕ್ಷಮಾಪಣೆ ಮತ್ತು ರಕ್ಷಣೆ ಹೊಂದಿಕೊಳ್ಳುವ ನಂಬಿಕೆಯು ಆತನನ್ನು ದೀಕ್ಷಾಸ್ನಾನ ಮಾಡಿಸುವವನ ಮೇಲಿಡಲ್ಪಟ್ಟಿರುವದಿಲ್ಲ. ಬದಲಾಗಿ, ಆತನ ನಂಬಿಕೆಯು "ಆತನನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರ ಸಾಮರ್ಥ್ಯದಲ್ಲಿ" ಆಗಿರುತ್ತದೆ (ವ. 12).

ಈ ವಚನದಲ್ಲಿ ಅವಶ್ಯಕವಾಗಿ ಮುಳುಗಿಸಲ್ಪಡುವಿಕೆಯ ಸೂಚ್ಯಾರ್ಥವಿರುವದಿಲ್ಲ ಎಂದು ಕೆಲವರು ವಾದಿಸುತ್ತಾರೆ. ಇದಕ್ಕೆ William Hendriksen ತನ್ನ ಆಕ್ಷೇಪಣೆಯನ್ನು ಹೀಗೆ ಮಂಡಿಸುತ್ತಾನೆ:

> ಮುಳುಗಿಸಿ ದೀಕ್ಷಾಸ್ನಾನ ಮಾಡಿಸುವಿಕೆಯನ್ನು ನಂಬುವಂಥವರು ಮುಳುಗಿಸಿ ದೀಕ್ಷಾಸ್ನಾನ ಮಾಡಿಡುವದೇ ಪ್ರಮಾಣೀಕೃತವಾದದ್ದೆಂಬ ತಮ್ಮ ವಾದವನ್ನು ಇಂತಹ ವಾಕ್ಯಭಾಗಗಳ ಮೇಲೆ ಆಧಾರಗೊಳಿಸುವರಿಂದ, ಇಲ್ಲಿ ದೀಕ್ಷಾಸ್ನಾನದ *ವಿಧಾನದ* ಬಗ್ಗೆ ಏನನ್ನೂ ಹೇಳದಿದ್ದರೆ ಚರ್ಚೆಯು ಅಪೂರ್ಣವಾಗುವದು. ಅವರು "ನೀವು ದೀಕ್ಷಾಸ್ನಾನದಲ್ಲಿ ಆತನೊಂದಿಗೆ ಹೂಣಲ್ಪಟ್ಟಿದ್ದರಿಂದಲೇ" ಎಂಬುದರಲ್ಲಿ ನೀರಿನಲ್ಲಿ ಮುಳುಗಿಸಲ್ಪಡುವಿಕೆಗೆ ಒಂದು ಅನುಮೋದನೆ ಎಂಬದಾಗಿ ಕಾಣುತ್ತಾರೆ; ಮತ್ತು "ಅದರಲ್ಲಿ ಆತನ ಕೂಡ ಎದ್ದು ಬಂದಿರಿ" ಎಂಬ ಮಾತುಗಳಲ್ಲಿ, ನೀರಿನಿಂದ ಮೇಲೇಳುವದಕ್ಕೆ ಒಂದು ದೃಢವಾದ

> ಬೆಂಬಲವೆಂದು ಕಾಣುತ್ತಾರೆ. ಹೇಗೂ, ಕ್ರಿಸ್ತನಲ್ಲಿ ನಮ್ಮ ಸಹೋದರರಿಗೆ ಸಕಲ ಪ್ರೀತಿ ಮತ್ತು ಗೌರವುಳ್ಳವನಾಗಿ ನಾನು ಹೇಳಲು ಧೈರ್ಯಮಾಡುವದೇನೆಂದರೆ, ದೀಕ್ಷಾಸ್ನಾನಕ್ಕೆ ಸೂಚ್ಯಾರ್ಥವಾಗಿ ಶಾಸ್ತ್ರವು ಇತರ ವ್ಯಕ್ತಪಡಿಸುವಿಕೆಗಳನ್ನು ಸಹ ಬಳಸುತ್ತದೆ, ಅವುಗಳು ಈ ರೀತಿಯ ತರ್ಕದ ತಳಹದಿಯ ಮೇಲೆ, ಸಹ ದೀಕ್ಷಾಸ್ನಾನದ ಸೂಕ್ತವಾದ *ವಿಧಾನವನ್ನು* ಸೂಚಿಸುತ್ತವೆಂದು ಪರಿಗಣಿಸಲ್ಪಡತಕ್ಕದ್ದು. *ಕ್ರಿಸ್ತನೊಂದಿಗೆ ಹೂಣಲ್ಪಡುವದು* (ಕೊಲೊಸ್ಸೆ 2:11, 12; ರೋಮಾ 6:4) ಎಂಬದರ ಅರ್ಥವು ದೀಕ್ಷಾಸ್ನಾನವು ಮುಳುಗಿಸಲ್ಪಡುವ ಮೂಲಕವೇ ಆಗಿರುತ್ತದೆಂದಾದಲ್ಲಿ, *ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಡುವದು* (ರೋಮಾ 6:6) ದೀಕ್ಷಾಸ್ನಾನವು ಶಿಲುಬೆಗೆ ಹಾಕಲ್ಪಡುವ ಮೂಲಕವೇ ಆಗಿರುತ್ತದೆಂದು, *ಆತನಲ್ಲಿ ಐಕ್ಯವಾಗಿದ್ದರೆ* (ರೋಮಾ 6:5 A.V. ಮತ್ತು ಮೂಲ) ಎಂಬುದು ದೀಕ್ಷಾಸ್ನಾನವು ಆತನಲ್ಲಿ ಐಕ್ಯಗೊಳ್ಳುವ ಮೂಲಕ, ಮತ್ತು *ಕ್ರಿಸ್ತನನ್ನು ಧರಿಸಿಕೊಳ್ಳುವ* (ಗಲಾತ್ಯ 3:27) ಎಂಬದರ ಅರ್ಥವು ದೀಕ್ಷಾಸ್ನಾನವು ಪುನಶ್ಚೇತನಗೊಳಿಸಲ್ಪಡುವ ಮೂಲಕ ಆಗತಕ್ಕದ್ದು ಎಂದು ಏಕೆ ಹೇಳಕೂಡದು?[21]

Hendriksen ವಾದವು ದೋಷಪೂರಿತವಾದದ್ದು ಯಾಕೆಂದರೆ "ದೀಕ್ಷಾಸ್ನಾನ" (βαπτίζω, *baptizō*) ಎಂಬ ಪದದ ಮೂಲ ಅರ್ಥವು "ಮುಳುಗಿಸು" ಎಂದಾಗಿರುತ್ತದೆ. ಪೌಲನು ದೀಕ್ಷಾಸ್ನಾನದಲ್ಲಿ ಯೇಸುವಿನ ಹೂಣಲ್ಪಡುವಿಕೆ ಮತ್ತು ಪುನರುತ್ಥಾನಗಳಲ್ಲಿ ಪಾಲುಗಾರರಾಗುವದಕ್ಕೆ ಸಾದೃಶ್ಯಗೊಳಿಸಿರುವದು ಮುಳುಗಿಸುವ ಮೂಲಕ ದೀಕ್ಷಾಸ್ನಾನದ ಪುರಾವೆಗೆ ಇನ್ನಷ್ಟು ಪುಷ್ಠಿಯನ್ನು ಕೊಡುತ್ತದೆ.

ಅನೇಕ ಪ್ರಾಧಿಕಾರಗಳು, ಧಾರ್ಮಿಕ ವಲಯಗಳಿಂದ ಹೊರಗಿರುವವರು ಸಹ ಈ ಪದದ ಅರ್ಥವನ್ನು ಪ್ರಮಾಣೀಕರಿಸುತ್ತಾರೆ. *The American Heritage Dictionary* "baptize" ಎಂಬದಕ್ಕೆ ವ್ಯುತ್ಪತ್ತಿಯ ಅರ್ಥವನ್ನು "*baptein* ಮುಳುಗಿಸು" ಎಂಬದಾಗಿ ಕೊಡುತ್ತದೆ.[22] ಇನ್ನೊಂದು ಧಾರ್ಮಿಕವಲ್ಲದ, ನಿಷ್ಪಕ್ಷಪಾತದ ಮೂಲವು ದೀಕ್ಷಾಸ್ನಾನಕ್ಕೆ ಈ ಅರ್ಥನಿರೂಪಣೆಯನ್ನು ಒದಗಿಸುತ್ತದೆ: "*baptisma*, 'ನೀರಿನಲ್ಲಿ ಮುಳುಗಿಸುವಿಕೆ' . . . ಅರ್ಥದ ಬೆಳವಣಿಗೆಗಾಗಿ ಮನಸ್ಸಿನಲ್ಲಿ ಹೊಳೆಯತಕ್ಕದ್ದೇನೆಂದರೆ ದೀಕ್ಷಾಸ್ನಾನವು [ಮೂಲತಃ] ಮುಳುಗಿಸಲ್ಪಡುವಿಕೆಯನ್ನು ಒಳಗೊಂಡಿತ್ತು ಎಂಬದೆ."[23] ಇನ್ನು ಬೇರೆ ಮೂಲಗಳು ಹೀಗೆ ಹೇಳುತ್ತವೆ,

> "ದೀಕ್ಷಾಸ್ನಾನ ಮಾಡಿಸು" ಎಂಬದಕ್ಕಾಗಿರುವ ಗ್ರೀಕ್ ಕ್ರಿಯಾಪದ, *baptizein* ಎಂಬುದು *baptein,* "ಅದ್ದು," ಮತ್ತು "ಸತತವಾಗಿ ಅದ್ದು ಅಥವಾ ತೀವ್ರವಾಗಿ ಒಳಗೆ ತಳ್ಳು, ಮುಳುಗಿಸು" ಎಂಬದರಿಂದ ರೂಪಗೊಂಡಿರುತ್ತದೆ.[24]

ಪ್ರಾಚೀನ ದೀಕ್ಷಾಸ್ನಾನದ ತೊಟ್ಟಿಗಳು ತೋರಿಸುವ ಪ್ರಕಾರ, ಪ್ರಾಚೀನ ಕಾಲದಲ್ಲಿ ಅನುಸರಿಸುತ್ತಿದ್ದ ಸರ್ವಸಾಧಾರಣವಾದ ವಿಧಾನವು ಮುಳುಗಿಸುವ ಮೂಲಕವಾಗಿತ್ತು.[25]

> . . . ಅಪೊಸ್ತಲರು ದೀಕ್ಷಾಸ್ನಾನದ ಚಿತ್ರಣವನ್ನು ಜ್ಞಾಪಿಸಿಕೊಳ್ಳುವದಕ್ಕಾಗಿ "ಹೂಣಲ್ಪಟ್ಟರು" ಎಂಬ ಪದಗುಚ್ಛವನ್ನು ಪರಿಚಯಿಸಿದರು, ಈ ಸಾದೃಶ್ಯವು ನಮ್ಮ ಕಾಲದಲ್ಲಿ ದೀಕ್ಷಾಸ್ನಾನವನ್ನು ತೀರ್ಥಕಲಶ [ಪ್ರೋಕ್ಷಣ] ಮೂಲಕ ಆಚರಿಸುವದರಲ್ಲಿ ಕಾಣೆಯಾಗಿರುತ್ತದೆ.[26]

ಒಬ್ಬನು ನೀರಿನಲ್ಲಿ ಕೆಳಕ್ಕೆ ಇಳಿಸಲ್ಪಟ್ಟಾಗ "ಹೂಣಲ್ಪಡುವಿಕೆ" ಸಂಭವಿಸುತ್ತಿತ್ತು, ಮತ್ತು ಆಕೆಯನ್ನು ಅಥವಾ ಆತನನ್ನು ನೀರಿನಿಂದ ಮೇಲಕ್ಕೆ ತರುವಾಗ "ಪುನರುತ್ಥಾನ" ಸಂಭವಿಸುತ್ತಿತ್ತು.[27]

ದೀಕ್ಷಾಸ್ನಾನದಲ್ಲಿ ದೇಹ ಮತ್ತು ಆತ್ಮದ ಸಂಪೂರ್ಣ ವ್ಯಕ್ತಿಯು ಭಾಗಿಯಗುತ್ತಾನೆ. ದೀಕ್ಷಾಸ್ನಾನದ ವೇಳೆ ಅದರಲ್ಲಿ ಯಾವದೂ ಹಿಂದಕ್ಕೆ ಹಿಡಿಯಲ್ಪಡುವದಿಲ್ಲ. ಹಳೆಯ ಜೀವಿತವನ್ನು ಅಂತ್ಯಗೊಳಿಸಿ ನೂತನ ಜೀವನದೊಳಗೆ ಪ್ರವೇಶಿಸುವದರಲ್ಲಿ ಫಲಿತಗೊಳ್ಳುವಂತಹ ನಂಬಿಕೆಯ ಮೂಲಕ, ಆತ್ಮವು ಯೇಸುವಿಗೆ ಸಂಪೂರ್ಣವಾಗಿ ಅರ್ಪಿಸಲ್ಪಡತಕ್ಕದ್ದು. ಹೀಗೆ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ಆತ್ಮೀಕವಾಗಿ ಬದುಕಿಸಲ್ಪಡುವನು. ನೀರಿನ ಕೆಳಗೆ ಇಳಿಸಲ್ಪಟ್ಟದ್ದಾಗಿ, ಇಡೀ ಶರೀರವು ಸಹ ದೀಕ್ಷಾಸ್ನಾನದಲ್ಲಿ ಭಾಗಿಯಾಗಿರುತ್ತದೆ. ಇಡೀ ದೇಹವನ್ನು ಹೂಣಿಡುವದರ ರೀತಿಯಲ್ಲಿ ದೇಹದ ಮೇಲೆ ಸ್ವಲ್ಪ ನೀರನನ್ನು ಸುರಿಯುವದರಿಂದ ಅಥವಾ ಪ್ರೋಕ್ಷಿಸುವದರಿಂದ ಯೇಸುವಿನ ಹೂಣಲ್ಪಡುವಿಕೆ ಮತ್ತು ಪುನರುತ್ಥಾನಗಳಲ್ಲಿ ಪಾಲುಗಾರರಾಗುವ ಯೋಚನೆಯನ್ನು ನೆರವೇರಿಸುವದಿಲ್ಲ. ಈ ಪ್ರಕ್ರಿಯೆಯ ಮೂಲಕ ಒಬ್ಬನು ಕ್ರಿಸ್ತನಿಗೆ ಸಮರ್ಪಿತನಾಗುವನು.

ಪಾಪಗಳ ಕ್ಷಮಾಪಣೆ, ರಕ್ಷಣೆ ಮತ್ತು ಹೊಸ ಜೀವನಕ್ಕಾಗಿ ದೀಕ್ಷಾಸ್ನಾನ ಅವಶ್ಯಕವೆಂಬದರಿಂದ ನುಣುಚಿಕೊಳ್ಳುವದಕ್ಕೆ ವಿವಿಧ ತರ್ಕಗಳು ಮಾಡಲ್ಪಟ್ಟಿರುತ್ತವೆ. ಈ ತರ್ಕಗಳು ದೀಕ್ಷಾಸ್ನಾನವು ಅವಶ್ಯಕವೆಂದು ಬೋಧಿಸುವ ಶಾಸ್ತ್ರಗಳಿಗೆ ತದ್ವಿರುದ್ಧವಾಗಿರುತ್ತವೆ (ಮಾರ್ಕ 16:16; ಅಪೊಸ್ತಲರ ಕೃತ್ಯಗಳು 2:38; 22:16; 1 ಪೇತ್ರ 3:21). Warren W. Wiersbe ಹೀಗೆ ಹೇಳುತ್ತಾನೆ,

> . . . ಹೊಸ ಒಡಂಬಡಿಕೆಯಲ್ಲಿ, *baptize* ಎಂಬ ಪದಕ್ಕೆ ಅಕ್ಷರಶಃ ಮತ್ತು ಸಾಂಕೇತಿಕ ಎರಡೂ ಅರ್ಥಗಳಿರುತ್ತವೆ. ಅಕ್ಷರಶಃ ಅರ್ಥವೆಂದರೆ "ಅದ್ದು, ಮುಳುಗಿಸು." ಸಾಂಕೇತಿಕ ಅರ್ಥವು "ಯೊಂದಿಗೆ ಗುರುತಿಸಿಕೊಳ್ಳುವದು" ಎಂದಾಗಿರುತ್ತದೆ. ಉದಾಹರಣೆಗೆ, ಯೆಹೂದ್ಯ ಜನಾಂಗವು ಕೆಂಪು ಸಮುದ್ರವನ್ನು ದಾಟಿ ಹೋಗುವ ಮೂಲಕ "ಮೋಶೆಯ ಶಿಷ್ಯರಾಗುವದಕ್ಕಾಗಿ" ದೀಕ್ಷಾಸ್ನಾನವನ್ನು ಹೊಂದಿದರು (1 ಕೊರಿಂಥ 10:1, 2). ಈ ದೀಕ್ಷಾಸ್ನಾನದಲ್ಲಿ ನೀರು ಭಾಗಿಯಾಗಿರಲಿಲ್ಲ, ಯಾಕೆಂದರೆ ಅವರು ಒಣ ನೆಲದಲ್ಲಿ ನಡೆದು ಹೋದರು. ಈ ಅನುಭವದಲ್ಲಿ, ಜನಾಂಗವು ಮೋಶೆಯೊಂದಿಗೆ ಗುರುತಿಸಿಕೊಂಡಿತು.[28]

ಈ ಹೇಳಿಕೆಯಲ್ಲಿ ಸ್ಪಷ್ಟವಾಗಿ ಕಾಣುವ ಸಮಸ್ಯೆಯೆಂದರೆ ಇಸ್ರಾಯೇಲ್ ಜನರು ದೀಕ್ಷಾಸ್ನಾನ ಹೊಂದಿದಂಥ ಅಂಶವು ಮೋಶೆಯಾಗಿರಲಿಲ್ಲ. ಅವರು ಸಮುದ್ರದ ಮೂಲಕ ಹಾದು ಹೋಗುವ ವೇಳೆ, ದೀಕ್ಷಾಸ್ನಾನ ಹೊಂದಿದರು, ಸಮುದ್ರದ ಮತ್ತು ದೂಮಮೇಘದಿಂದ ಆವರಿಸಲ್ಪಟ್ಟಿದ್ದರು (ಯೆಶಾಯ 4:5). ಅವರು ನೀರಿನಲ್ಲಿ ಮುಳುಗಿಸಲ್ಪಟ್ಟಿರಲಿಲ್ಲ ಎಂಬದನ್ನು ಸ್ಪಷ್ಟವಾಗಿ ತೋರಿಸುವ, ಒಣ ನೆಲದ ಮೇಲೆ ದಾಟುವಿಕೆಯು ಅವರು ಮೇಘ ಮತ್ತು ಸಮುದ್ರದಿಂದ ಸುತ್ತುವರೆಯಲ್ಪಟ್ಟವರಾಗಿ, ದೀಕ್ಷಾಸ್ನಾನ ಹೊಂದಿದರು ಎಂಬುದರ ವಿರುದ್ಧ ತರ್ಕವಾಗುವದಿಲ್ಲ. ಸಮುದ್ರವು ಎರಡೂ ಬದಿಗಳಲ್ಲಿ ಗೋಡೆಯನ್ನು ರೂಪಿಸಿತ್ತು; ಅವರು ಸಮುದ್ರ ಮತ್ತು ಮೇಘಗಳಿಂದ

ಆವರಿಸಲ್ಪಟ್ಟಿದ್ದರು – ದೀಕ್ಷಾಸ್ನಾನ ಹೊಂದಿದರು.

ಇನ್ನು ಕೆಲವರು ನೀರಿನ ದೀಕ್ಷಾಸ್ನಾನವು ಕ್ರಿಸ್ತೀಯ ಸುನ್ನತಿ ಎಂದು ಕಲಿಸುವದಕ್ಕೆ 11ನೇ ವಚನವನ್ನು ಬಳಸುವದಕ್ಕೆ ಆಕ್ಷೇಪಣೆಯನ್ನು ವ್ಯಕ್ತಪಡಿಸುವವರಾಗಿ, "ಅದು ಬಹುಶಃ ಪರಿವರ್ತನೆಗೆ ('ಆತನಲ್ಲಿ ಸುನ್ನತಿಯನ್ನೂ ಹೊಂದಿದಿರಿ,' ಅನಿಶ್ಚಿತ ಭೂತಕಾಲ), ಪವಿತ್ರಾತ್ಮನಿಂದ ಮಾಡಲ್ಪಡುವದ ಹೃದಯದ ಸುನ್ನತಿಗೆ ಸೂಚ್ಯಾರ್ಥವನ್ನು ಹೊಂದಿದೆ . . . ಎಂದು ಹೇಳುತ್ತಾರೆ."[29] ಹಾಗಾದರೆ ಮುಕ್ತಾಯಕ್ಕೆ ಬರಬಹುದಾದದ್ದೇನೆಂದರೆ ಪೌಲನು "ಈ ಸುನ್ನತಿಯು ಕೈಯಿಂದ ಮಾಡಿದ್ದಲ್ಲ" (ವ. 11) ಎಂದು ಹೇಳಿದನಾದ್ದರಿಂದ 12ನೇ ವಚನದಲ್ಲಿ ಸೂಚಿಸಿರುವ ದೀಕ್ಷಾಸ್ನಾನವು ಪವಿತ್ರಾತ್ಮನ ದೀಕ್ಷಾಸ್ನಾನವಾಗಿರುತ್ತದೆ ಎಂದು ಹೇಳುತ್ತಾರೆ.

ಕೊಲೊಸ್ಸೆಯವರು ಹೊಂದಿದ ದೀಕ್ಷಾಸ್ನಾನವು ಎಲ್ಲಾ ದೇಶಗಳಿಗಾಗಿ ಉದ್ದೇಶಿಸಿದ್ದ ದೀಕ್ಷಾಸ್ನಾನವಾಗಿತ್ತು (ಮತ್ತಾಯ 28:19; ಮಾರ್ಕ 16:15, 16), ಹೊರತು ಅಪೊಸ್ತಲರಿಗೆ ವಾಗ್ದಾನ ಮಾಡಲ್ಪಟ್ಟ ಮತ್ತು ಅವರಿಂದ ಹೊಂದಲಾದ (ಅಪೊಸ್ತಲರ ಕೃತ್ಯಗಳು 1:2–5; 2:4) ಮತ್ತು ನಂತರ ಕೊರ್ನೇಲ್ಯನಿಂದ ಹೊಂದಲಾದ ಪವಿತ್ರಾತ್ಮನ ಮಿತಿಯುಳ್ಳ ದೀಕ್ಷಾಸ್ನಾನ ಆಗಿರಲಿಲ್ಲ (ಅಪೊಸ್ತಲರ ಕೃತ್ಯಗಳು 11:15, 16). ಯೇಸುವಿನ ಆತ್ಮೀಕ ಸುನ್ನತಿಯು ಕೈಗಳಿಲ್ಲದೆ ಮಾಡಲ್ಪಡುತ್ತದೆಂಬ ವಾಸ್ತವಾಂಶವು ಸೂಚಿಸುವದೇನೆಂದರೆ ಅವರ ಪಾಪಗಳು ಮನುಷ್ಯ ಕೈಗಳಿಂದ ತೆಗೆದು ಹಾಕಲ್ಪಡಲಿಲ್ಲ ಆದರೆ ದೇವರ ಕಾರ್ಯಮಾಡುವ ಸಾಮರ್ಥ್ಯದಿಂದಲೇ ತೆಗೆದು ಹಾಕಲ್ಪಟ್ಟಿತು ಎಂಬದೆ. ಇದು ಸಂಭವಿಸಿದ ಗಳಿಗೆಯು ದೀಕ್ಷಾಸ್ನಾನದ ಸಂದರ್ಭದಲ್ಲಿಯೇ ಆಗಿತ್ತು. Albrecht Oepke ಸರಿಯಾಗಿಯೇ ಅಭಿಪ್ರಾಯ ಪಟ್ಟು ಹೇಳುವದೇನೆಂದರೆ,

> ಸನ್ನಿವೇಶವು ಬೇರೆಯದನ್ನು ಸೂಚಿಸುವ ಹೊರತು ಹೊಸ ಒಡಂಬಡಿಕೆಯಲ್ಲಿ ದೀಕ್ಷಾಸ್ನಾನ ಎಂಬದು ಕಾಣಿಸಿಕೊಳ್ಳುವಾಗ ಅದನ್ನು ನೀರಿನ ದೀಕ್ಷಾಸ್ನಾನವೆಂದು ಯೋಚಿಸಿಕೊಳ್ಳತಕ್ಕದ್ದು. ದೀಕ್ಷಾಸ್ನಾನವು ತಾಂತ್ರಿಕವಾಗಿ "ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸು" ಎಂದರ್ಥವಾಗಿರುತ್ತದೆ. ಆದ್ದರಿಂದ ಮಾಧ್ಯಮವನ್ನು ನಿರ್ದಿಷ್ಟವಾಗಿ ಹೆಸರಿಸುವದು ಅನಾವಶ್ಯಕವಾಗಿರುತ್ತದೆ.[30]

ಸನ್ನಿವೇಶದಲ್ಲಿ ಪವಿತ್ರಾತ್ಮನ ದೀಕ್ಷಾಸ್ನಾನ ಎಂದು ಸೂಚಿಸುವದಕ್ಕೆ ಯಾವ ಅವಕಾಶವೂ ಇರುವದಿಲ್ಲ, ಆದ್ದರಿಂದ ಪೌಲನು ಮನಸ್ಸಿನಲ್ಲಿ ನೀರಿನ ದೀಕ್ಷಾಸ್ನಾನವನ್ನಿಟ್ಟುಕೊಂಡು ಹೇಳಿದನೆಂದು ಪರಿಗಣಿಸತಕ್ಕದ್ದು.

### "ಇದಲ್ಲದೆ ಆತನನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರ ಸಾಮರ್ಥ್ಯದಲ್ಲಿ ನಂಬಿಕೆಯಿಡುವವದರ ಮೂಲಕ ಅದರಲ್ಲಿ ಆತನ ಕೂಡ ಎದ್ದು ಬಂದಿರಿ" (2:12)

ಕೊಲೊಸ್ಸೆಯಲ್ಲಿರುವ ಸಹೋದರರು ದೀಕ್ಷಾಸ್ನಾನದಲ್ಲಿ ಯೇಸುವಿನೊಂದಿಗೆ ಹೂಣಲ್ಪಟ್ಟಿದ್ದರು ಮತ್ತು **ಆತನ ಕೂಡ ಎದ್ದು ಬಂದಿದ್ದರು**. "ಆತನೊಂದಿಗೆ ಎದ್ದು ಬಂದಿರಿ" (συνηγέρθητε, *sunēgerthēte*) ಎಂಬದರ ಅನುವಾದಿತ ಪದವು ಒಂದು ಅನಿಶ್ಚಿತ ಭೂತಕಾಲ ನಿಷ್ಕ್ರಿಯ ನಿಶ್ಚಯಾರ್ಥಕವಾಗಿದ್ದು, ಸಂಪೂರ್ಣಗೊಂಡ ಕ್ರಿಯೆಯನ್ನು ಪ್ರತಿನಿಧಿಸುತ್ತದೆ. 3:1 ಮತ್ತು ಎಫೆಸ 2:6ರಲ್ಲಿ ಅದೇ ಪದವು ಕಾಣಿಸಿಕೊಳ್ಳುತ್ತದೆ.

ದೀಕ್ಷಾಸ್ನಾನ ಹೊಂದುವ ಮೂಲಕ ಆತನ ಹೂಣಲ್ಪಡುವಿಕೆ ಮತ್ತು ಪುನರುತ್ಥಾನಗಳಲ್ಲಿ ಪಾಲುಗಾರರಾದ ವೇಳೆ, ಈ ಸಹೋದರರು ಆತನ ಮುಖಾಂತರ ಒಂದು ಹೊಸ ಜೀವನವನ್ನು ಹಂಚಿಕೊಂಡರು ಮತ್ತು ಪಡೆದುಕೊಂಡರು.

ಇದು ಅವರು **ನಂಬಿಕೆಯಿಡುವದರ** (πίστις, *pistis*) ಮೂಲಕ ಸಾಧ್ಯವಾಗಿತ್ತು. ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಯಲ್ಲಿ ಇದೇ ಕಡೇ ಸಾರಿ ಪೌಲನು "ನಂಬಿಕೆ" ಎಂಬ ಪದವನ್ನು ಬಳಸುತ್ತಾನೆ. (ಇದು 1:4, 23; 2:5, 7ರಲ್ಲಿ ಸಹ ಕಾಣಿಸಿಕೊಳ್ಳುತ್ತದೆ.) ಇಲ್ಲಿ ಪ್ರಸ್ತಾಪಿಸಲಾಗಿರುವ ನಂಬಿಕೆಯ ಕುರಿತಾದ ಹಲವಾರು ಪ್ರಶ್ನೆಗಳಿಗೆ ಉತ್ತರಿಸಬೇಕಾದ ಅಗತ್ಯವಿರುತ್ತದೆ.

1. **ದೇವರ ಸಾಮರ್ಥ್ಯದಲ್ಲಿ ನಂಬಿಕೆಯಿಡುವದರ ಮೂಲಕ** ಎಂಬ ಪದಗುಚ್ಛದಲ್ಲಿರುವ *pistis* ಪದವು "ನಂಬಿಕೆ" ಎಂಬುದರ ಬದಲಾಗಿ ದೇವರ ಕಾರ್ಯಮಾಡುವದರ "ನಂಬಿಗಸ್ತಿಕೆ" ಎಂದು ಅನುವಾದಿಸಲ್ಪಡತಕ್ಕದ್ದೋ? *Pistis* ಹೆಚ್ಚುಕಡಿಮೆ ಎಂದಿಗೂ "ನಂಬಿಗಸ್ತಿಕೆ" ಎಂದು ಅನುವಾದಿಸಲ್ಪಟ್ಟಿರುವದಿಲ್ಲ. ಯಲ್ಲಿ ಇದು 239 ಸಾರಿ "ನಂಬಿಕೆ" ಎಂದು, ಮತ್ತು ಒಂದೊಂದು ಸಾರಿ "ಭರವಸೆ," "ನಿಷ್ಠೆ," ಮತ್ತು "ವಿಶ್ವಾಸಿಸು" ಎಂದು ಅನುವಾದಿಸಲ್ಪಟ್ಟಿದೆ – ಆದರೆ ಎಂದಿಗೂ "ನಂಬಿಗಸ್ತಿಕೆ" ಎಂದು ಅನುವಾದಿಸಲ್ಪಟ್ಟಿಲ್ಲ. ಯಲ್ಲಿ 238 ಸಾರಿ "ನಂಬಿಕೆ" ಎಂದು, ಒಂದು ಸಾರಿ "ಪುರಾವೆ," ಮತ್ತು ಮೂರು ಸಾರಿ "ನಂಬಿಗಸ್ತಿಕೆ" – ಮತ್ತಾಯ 23:23; ರೋಮಾ 3:3; ಮತ್ತು ಗಲಾತ್ಯ 5:22ರಲ್ಲಿ – ಎಂದು ಅನುವಾದಿಸಲ್ಪಟ್ಟಿರುತ್ತದೆ. ಮತ್ತಾಯ 23:23 ಮತ್ತು ಗಲಾತ್ಯ 5:22ರಲ್ಲಿ "ನಂಬಿಕೆ" ಎಂಬುದಕ್ಕಿಂತಲೂ "ನಂಬಿಗಸ್ತಿಕೆ" ಎಂಬದನ್ನು ಉತ್ತಮ ಅನುವಾದವೆಂಬದಾಗಿ ಪರಿಗಣಿಸಲಾಗಿರುತ್ತದೆ? 2 ಪೇತ್ರ 1:5ರಲ್ಲಿರುವ ಪ್ರಕಾರ, ಈ ವಾಕ್ಯಭಾಗಗಳಲ್ಲಿ "ನಂಬಿಕೆ" ಒಂದು ಕ್ರೈಸ್ತ ಸದ್ಗುಣವಾಗಿರುವದಿಲ್ಲವೋ?

ಈಗ ರೋಮಾ 3:3ನ್ನು ಪರಿಗಣಿಸೋಣ: "ಅವರಲ್ಲಿ ಕೆಲವರು ನಂಬದೆ ಹೋಗಿದ್ದರೇನು? ಅವರು ನಂಬದೆ ಹೋದದರಿಂದ ದೇವರು ವಚನಕ್ಕೆ ತಪ್ಪುವವನಾದನೋ? ಎಂದಿಗೂ ಇಲ್ಲ." ಈ ವಚನದಲ್ಲಿ ಗ್ರೀಕ್ ಪದವು ಸಮರ್ಥನೀಯವಾಗಿ "ನಂಬಿಗಸ್ತಿಕೆ" ಎಂದು ಅನುವಾದಿಸಲ್ಪಟ್ಟಿದೆ; ಹೇಗೂ, "ನಂಬಿಕೆ" ಎಂಬುದು ಸಹ ಇದರ್ಥವಾಗಿರುವದರಿಂದ ಅದರ ಬಗ್ಗೆಯೂ ಅಧಿಕವಾಗಿ ಹೇಳಲ್ಪಡಬೇಕಾಗಿರುತ್ತದೆ. Barclay M. Newman ಮತ್ತು Eugene A. Nida ಹೀಗೆ ಬರೆದರು, "ಈ ಪ್ರಶ್ನೆಯನ್ನು 'ಈ ಕಾರಣಕ್ಕಾಗಿ ದೇವರಲ್ಲಿಟ್ಟ ನಂಬಿಕೆಯು ನಿಷ್ಪ್ರಯೋಜಕ ಎಂದು ಅರ್ಥವೋ?' ಎಂಬ ಅರ್ಥವನ್ನು ಕೊಡುವ ರೀತಿಯಲ್ಲಿ . . . ತೆಗೆದುಕೊಳ್ಳುವ ಸಾಧ್ಯತೆಯಿರುತ್ತದೆ ಆದರೆ ಯಾವ ಆಧುನಿಕ ತರ್ಜುಮೆಗಳು ಸಹ ಪೌಲನ ಪ್ರಶ್ನೆಯನ್ನು ಆ ಅರ್ಥದಲ್ಲಿ ತೆಗೆದುಕೊಳ್ಳುವದಿಲ್ಲ."[31] ಬಹುಶಃ, ಮತ್ತು ರವರು 1973ರಲ್ಲಿ ಇದನ್ನು ಬರೆದ ವೇಳೆ, ಅವರು ರೋಮಾ 3:3ಕ್ಕೆ "ಅವರು ನಂಬದಿರುವದರಿಂದ ದೇವರ ನಂಬಿಕೆಯನ್ನು ಪ್ರಯೋಜನವಿಲ್ಲದ್ದಾಗಿ ಮಾಡುವದೋ?" (LB) ಎಂಬ ಭಾವಾನುವಾದವನ್ನು ನೀಡಿದ 1971ರ ತರ್ಜುಮೆಯ ಪರಿಚಯವಿಲ್ಲದವರಾಗಿದ್ದರೆಂದು ತೋರುತ್ತದೆ.

ರೋಮಾ 3:3ರಲ್ಲಿ "ನಂಬಿಗಸ್ತಿಕೆ" ಎಂಬುದು ಉತ್ತಮ ಅನುವಾದವಲ್ಲ. "ರ ನಂಬಿಕೆ" ಎಂಬುದು ಒಂದು ದ್ವಿತೀಯಾರ್ಥಕ ಷಷ್ಠಿಯಾಗಿದೆ, ಅದು "ರಲ್ಲಿ ನಂಬಿಕೆ" ಎಂದು

ಅನುವಾದಿಸಲ್ಪಡತಕ್ಕದ್ದು. ಈ ವಾಕ್ಯದಲ್ಲಿ "ಈ ಕಾರಣಕ್ಕಾಗಿ ದೇವರಲ್ಲಿನ ನಂಬಿಕೆ ನಿಷ್ಪ್ರಯೋಕಜ ಎಂದು ಅರ್ಥವಾಗುವದೋ?" ಎಂಬದಲ್ಲಿಂತಲೂ ಬೇರೊಂದು ರೀತಿಯಲ್ಲಿ ಅನುವಾದ ಮಾಡುವಂತಾಗುವದಕ್ಕೆ ಯಾವದೇ ಅವಕಾಶವಿರುವದಿಲ್ಲ. ಪೌಲನು ಇಲ್ಲಿ ಕೆಲವರ ಅಪನಂಬಿಕೆಯು ದೇವರಲ್ಲಿ ಇತರರು ಇಟ್ಟಿರುವ ನಂಬಿಕೆಯನ್ನು ಪ್ರಯೋಜನವಿಲ್ಲದ್ದಾಗಿ ಮಾಡುವದಿಲ್ಲ ಎಂಬ ಅರ್ಥದಲ್ಲಿ ಹೇಳುತ್ತಿದ್ದಾನೆ.

ಒಂದು ಸರ್ವಸಾಧಾರಣ ನಿಯಮವಾಗಿ, ಸನ್ನಿವೇಶವು ಬೇರೊಂದು ಅರ್ಥವನ್ನು ಕೇಳುವ ಹೊರತು ಒಂದು ಪದದ ಸಾಮಾನ್ಯವಾದ ಅರ್ಥವನ್ನು ಅನುವಾದದಲ್ಲಿ ಉಳಿಸಿಕೊಳ್ಳತಕ್ಕದ್ದು. ಯಾವ ವಾಕ್ಯಭಾಗವು ಸಹ *pistis* ಎಂಬುದಕ್ಕೆ "ನಂಬಿಕೆ" ಎಂಬದಕ್ಕಿಂತ ಬೇರೆ ಯಾವದೇ ರೀತಿಯಲ್ಲಿ ಅನುವಾದಿಸಲ್ಪಡುವಂತೆ ಕೇಳುವದಿಲ್ಲ. 2:12ರ ಸನ್ನಿವೇಶದಲ್ಲಿನ ಯಾವ ಅಂಶವೂ *pistis* ನ್ನು ಅನುವಾದಿಸುವದಕ್ಕೆ "ನಂಬಿಗಸ್ತಿಕೆ" ಎಂಬುದನ್ನು ಬಳಸುವಂತೆ ಕೇಳುವದಿಲ್ಲ. ಆದುದರಿಂದ, "ದೇವರ ಸಾಮರ್ಥ್ಯದಲ್ಲಿ ನಂಬಿಕೆಯಿಡುವದರ" ಎಂಬುದು ಉಳಿಸಿಕೊಳ್ಳಲ್ಪಡತಕ್ಕದ್ದು. ಪ್ರಾಚೀನ ಅಥವಾ ಆಧುನಿಕ ತರ್ಜುಮೆಗಳಲ್ಲಿ ಯಾವದೇ ತರ್ಜುಮೆಗಳಿದ್ದರೆ, ಕೆಲವೇ ಕೆಲವು ಮಾತ್ರ 12ನೇ ವಚನದಲ್ಲಿ *pistis* ನ್ನು "ನಂಬಿಗಸ್ತಿಕೆ" ಎಂದು ಅನುವಾದಿಸುತ್ತವೆ.

2. ಯೇಸುವಿನ ಪುನರುತ್ಥಾನವು "ದೇವರ ಸಾಮರ್ಥ್ಯಕ್ಕೆ" (ಒಂದು ಮತ್ತೊಂದನ್ನು ಪುನರಾವರ್ತಿಸುವದು ಅಥವಾ ಅರ್ಥನಿರೂಪಣೆ ಮಾಡುವದರೊಂದಿಗೆ) ಎಂಬದರೊಂದಿಗೆ ಏಕಾನ್ವಯದಲ್ಲಿರುತ್ತದೋ? ಹಾಗಿರುವದಾಗಿದ್ದಲ್ಲಿ, ಇದರರ್ಥವು ನಂಬಿಕೆಯನ್ನು ಹೊಸ ಜೀವನ ಕೊಡುವದಕ್ಕಾಗಿ ದೇವರ ಸಾಮರ್ಥ್ಯವುಳ್ಳ ಕಾರ್ಯದಲ್ಲಿ ಇಡುವ ಬದಲಾಗಿ, ಯೇಸುವಿನ ಪುನರುತ್ಥಾನದಲ್ಲಿ ಇಡಬೇಕು ಎಂದಾಗುವದು. A. S. Peake ಹೀಗೆ ಹೇಳುತ್ತಾನೆ,

> . . . *pistis* ನಂತರ ಬರುವ ಷಷ್ಠೀ ವಿಭಕ್ತಿಯ, ನಂಬಿಕೆಯಿಡುವ ವ್ಯಕ್ತಿಯನ್ನು ಸೂಚಿಸುವ ಹೊರತು, ಅದು ನಂಬಿಕೆಯಿಡುವ ಲಕ್ಷ್ಯವನ್ನು ವ್ಯಕ್ತಪಡಿಸುತ್ತದೆ. Hofmann ಅಭಿಪ್ರಾಯದಲ್ಲಿ *t. ener.* ಎಂಬುದು ಒಂದು ಏಕಾನ್ವಯದ ಷಷ್ಠೀ ವಿಭಕ್ತಿಯ ಆಗಿರುತ್ತದೆ, ಮತ್ತು ಅದು "ನಂಬಿಕೆ, ಅಂದರೆ ದೇವರ ಕಾರ್ಯಮಾಡುವ ಸಾಮರ್ಥ್ಯ" ಎಂದು ಕೊಡುವ ಅರ್ಥವು ಇಲ್ಲಿ ಅಸಾಧ್ಯವಾಗಿರುತ್ತದೆ. ಯಾಕೆಂದರೆ ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರ ಸಾಮರ್ಥ್ಯದ ಕಡೆಗೆ ನಡಿಸಲ್ಪಟ್ಟದ್ದಾಗಿರುತ್ತದೆ, *cf.* ರೋಮಾ 4:24. ದೇವರ ಗುಣಸ್ವಭಾವವು ಹಾಗೆಯೇ ಆಗಿರುತ್ತದೆ, ಯಾಕೆಂದರೆ ಯಾವ ಸಾಮರ್ಥ್ಯದ ಮೂಲಕ ಆತನು ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದನೋ ಅದೇ ಸಾಮರ್ಥ್ಯವು ನಮ್ಮ ಸ್ವಂತ ಆತ್ಮೀಕ ಅನುಭವದಲ್ಲಿ ಸಕ್ರಿಯವಾಗಿರುತ್ತದೆ. ಆದ್ದರಿಂದ ನಮ್ಮ ದೀಕ್ಷಾಸ್ನಾನವು ಕ್ರಿಸ್ತನೊಂದಿಗೆ ಒಂದು ವಾಸ್ತವಿಕವಾದ ಆತ್ಮೀಕ ಹೂಣಲ್ಪಡುವಿಕೆ ಮತ್ತು ಪುನರುತ್ಥಾನವೇ ಹೊರತು ಬೇರಾವ ಸೂಚನೆಯೂ ಅಲ್ಲ.[32]

Peake ಪ್ರಕಾರವಾಗಿ, 12ನೇ ವಚನವು "ನಂಬಿಕೆ" ಮತ್ತು "ದೇವರ ಸಾಮರ್ಥ್ಯ" ಎರಡನ್ನು ಒಂದೇ ಎಂಬದಾಗಿ ತಿಳಿಸುವದಿಲ್ಲ. ಬದಲಾಗಿ, "ನಂಬಿಕೆಯು ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರ ಸಾಮರ್ಥ್ಯದ ಕಡೆಗೆ ಇರುತ್ತದೆ." "ಯಾವ ಸಾಮರ್ಥ್ಯದಿಂದ ಆತನು ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದನೋ ಅದೇ ಸಾಮರ್ಥ್ಯವು

ನಮ್ಮ ಸ್ವಂತ ಆತ್ಮೀಕ ಅನುಭವದಲ್ಲಿ ಸಕ್ರಿಯವಾಗಿರುವದರಿಂದ" ನಂಬಿಕೆಯು ದೇವರ ಸಾಮರ್ಥ್ಯದಲ್ಲಿ ಇಡಲ್ಪಡುವದಾಗಿದೆ.

3. τῆς πίστεως (*tēs pisteōs*) ಎಂಬ ಪದಗುಚ್ಛವು "ರ ನಂಬಿಕೆ" ಎಂದು ಅನುವಾದಿಸಲ್ಪಡಬೇಕೋ ಅಥವಾ "ರಲ್ಲಿ ನಂಬಿಕೆ" ಎಂದು ಅನುವಾದಿಸಲ್ಪಡಬೇಕೋ? 2:12ರಲ್ಲಿ Thayer ಒಂದು ದ್ವಿತೀಯಾರ್ಥಕ ಷಷ್ಠಿಯ ಉದಾಹರಣೆಯಾಗಿ ಸೇರ್ಪಡೆಗೊಳಿಸಿರುತ್ತಾನೆ, "[ರಲ್ಲಿ ನಂಬಿಕೆ] ಯ ಲಕ್ಷ್ಯದ ದ್ವಿತೀಯಾರ್ಥಕ [ಷಷ್ಠಿ].[33]

F. Wilbur Gingrich ಮತ್ತು Frederick W. Dankerರು ಪೌಲನ ಪದಗುಚ್ಛವನ್ನು *"ದೇವರಲ್ಲಿ ನಂಬಿಕೆ, ವಿಶ್ವಾಸ, ಭರವಸೆ"* ಎಂದು ವ್ಯಾಖ್ಯಾನಿಸಿರುತ್ತಾರೆ. ಬಳಿಕ, ಈ ಬಳಕೆಯು ಕಾಣಿಸಿಕೊಳ್ಳುವ ವಾಕ್ಯಭಾಗಗಳನ್ನು ಉಲ್ಲೇಖಿಸಿದ ಮೇಲೆ (ಉದಾಹರಣೆಗೆ, ಮಾರ್ಕ 11:22), ಅವರು ಕೊಲೊಸ್ಸೆ 2:12ಕ್ಕೆ ಈ ಅನುವಾದವನ್ನು ಕೊಡುತ್ತಾರೆ: ". . . *ಆತನನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರ ಕಾರ್ಯದಲ್ಲಿ ನಂಬಿಕೆ*."[34] 2000ರಲ್ಲಿನ ಪರಿಷ್ಕರಣೆಯಲ್ಲಿ Danker ಈ ವಚನದ ಈ ಭಾಗವನ್ನು ಇದನ್ನೇ ಹೋಲುವ ರೀತಿಯಲ್ಲಿ ಅನುವಾದಿಸಿರುತ್ತಾನೆ.[35]

ಬಹುಪಾಲು ವ್ಯಾಖ್ಯಾನಕಾರರು διὰ τῆς πίστεως ವನ್ನು ಒಂದು ದ್ವಿತೀಯಾರ್ಥಕ ಷಷ್ಠಿಯೆಂದು ಪರಿಗಣಿಸುತ್ತಾರೆ.[36] ಹೀಗೆ ಈ ಪದಗುಚ್ಛವು "ರಲ್ಲಿ ನಂಬಿಕೆಯಿಡುವ ಮೂಲಕ" ಎಂದು ಅನುವಾದಿಸಲ್ಪಡತಕ್ಕದ್ದು.

4. ಜನರು ದೀಕ್ಷಾಸ್ನಾನ ಹೊಂದುವ ವೇಳೆ ದೇವರು ಮಾಡುತ್ತಿರುವಂಥ ಕಾರ್ಯದಲ್ಲಿ ತಮ್ಮ ನಂಬಿಕೆಯನ್ನು ಇಡಬೇಕೋ? ಹೌದು. ದೀಕ್ಷಾಸ್ನಾನ ಮಾಡಿಸಿಕೊಳ್ಳುತ್ತಿರುವವನು ದೇವರ ಸಾಮರ್ಥ್ಯವು – ಯೇಸುವನ್ನು ಎಬ್ಬಿಸಿದ ಅದೇ ಶಕ್ತಿಯು – ತನಗೆ ಒಂದು ಹೊಸ ಆತ್ಮೀಕ ಜೀವವನ್ನು ಒದಗಿಸುವದೆಂದು ನಂಬಬೇಕು. ದೀಕ್ಷಾಸ್ನಾನದಲ್ಲಿ ಆತನು ಯೇಸುವಿನ ಹೂಣಲ್ಪಡುವಿಕೆ ಮತ್ತು ಪುನರುತ್ಥಾನಗಳಲ್ಲಿ ಪಾಲುಗಾರನಾಗುವ ವೇಳೆ ಹೊಸ ಜೀವವು ಕೊಡಲ್ಪಡುತ್ತದೆ. ದೀಕ್ಷಾಸ್ನಾನ ಮಾಡಿಸಿಕೊಳ್ಳುತ್ತಿರುವ ವ್ಯಕ್ತಿಯು ಆತನನ್ನು ಆತ್ಮೀಕವಾಗಿ ಸುನ್ನತಿ ಮಾಡುವ ಮತ್ತು ಆತ್ಮೀಕವಾಗಿ ಬದುಕಿಸುವ ದೇವರ ಚಟುವಟಿಕೆಯಲ್ಲಿ ನಂಬಿಕೆಯನ್ನು ಹೊಂದಿರುವದಾದರೆ ಮಾತ್ರವೇ ಇದು ಸಂಭವಿಸಬಲ್ಲದು. ದೇವರು ಇದನ್ನು ಮಾಡಬಲ್ಲನು ಎಂಬ ಭರವಸೆಯು ಯೇಸುವನ್ನು ಎಬ್ಬಿಸುವದರಲ್ಲಿ ತೋರಿದ ಆತನ ಬಲವಾದ ಸಾಮರ್ಥ್ಯದ ಮೇಲೆ ಆಧಾರವಾಗಿರುತ್ತದೆ. Marvin Vincentನು "'ದೇವರ ಕಾರ್ಯಾಚರಣೆಯ ನಂಬಿಕೆ' ಅಂದರೆ, 'ದೇವರು ಕಾರ್ಯಮಾಡುವ ನಂಬಿಕೆಯಲ್ಲ, ಆದರೆ ದೇವರ ಕಾರ್ಯದಲ್ಲಿ ನಿಮ್ಮ ನಂಬಿಕೆ' . . . ಕ್ರಿಸ್ತನ ಪುನರುತ್ಥಾನದಲ್ಲಿ ತೋರಿ ಬಂದ ಪ್ರಕಾರ."[37]

ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು, ತರ್ಜುಮೆಯಲ್ಲಿ ಅನುವಾದಿಸಲ್ಪಟ್ಟಿರುವ ಹಾಗೆ, ದೇವರ "ಶಕ್ತಿ"ಯಲ್ಲಿ ನಂಬಿಕೆಯಿಡುವದು ಮಾತ್ರವದಲ್ಲ, ದೇವರ "ಸಾಮರ್ಥ್ಯ" (ἐνέργεια, *energeia*) ದಲ್ಲಿ ಸಹ ನಂಬಿಕೆಯಿಡುವವನಾಗಿದ್ದಾನೆ.[38] ಪೌಲನ ತಾತ್ಪರ್ಯವು "ಶಕ್ತಿ" ಎಂದಾಗಿದ್ದಲ್ಲಿ, ಆತನು ಗ್ರೀಕ್ ಪದವಾದ ἐξουσία (*exousia*, "ಕ್ರಿಯೆ ಮಾಡುವದಕ್ಕೆ ಹಕ್ಕು ಅಥವಾ ಅಧಿಕಾರ") ಅಥವಾ δύναμι (*dunamis*, "ಕಾರ್ಯಮಾಡುವ ಶಕ್ತಿ ಅಥವಾ ಸಾಮರ್ಥ್ಯ) ಎಂಬದನ್ನು ಬಳಸಿರುತ್ತಿದ್ದನು. ಬದಲಾಗಿ, ಆತನು *energeia* ಎಂಬ ಪದವನ್ನು

ಬಳಸುತ್ತಾನೆ, ಅದು ಸಕ್ರಿಯವಾಗಿರುವ ಶಕ್ತಿ ಎಂದರ್ಥವಾಗಿರುತ್ತದೆ ಮತ್ತು ಅದು ಬಹಳಷ್ಟು ಸಂದರ್ಭಗಳಲ್ಲಿ "ಸಾಮರ್ಥ್ಯ" ಎಂದು ಅನುವಾದಿಸಲ್ಪಟ್ಟಿದೆ. J. Ithel Jones ಹೀಗೆ ಹೇಳುತ್ತಾನೆ, "'ದೇವರ ಸಾಮರ್ಥ್ಯದಲ್ಲಿ ನಂಬಿಕೆಯಿಡುವ ಮೂಲಕ' ಎಂಬುದೇ ಈ ಸಂಸ್ಕಾರಕ್ಕೆ ಅರ್ಥ ಮತ್ತು ಪ್ರಾಮಾಣೀಕರಣವನ್ನು ಕೊಡಬಹುದಾಗಿದೆ."[39] William Barclay ಇದನ್ನು ಈ ವಿಧದಲ್ಲಿ ಬರೆಯುತ್ತಾನೆ: "ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರ ಪರಿಣಾಮಕರವಾದ ಸಾಮರ್ಥ್ಯವು ತನಗೆ ಸಹ ಅದನ್ನೇ ಮಾಡಬಲ್ಲದು ಎಂದು ಒಬ್ಬ ಮನುಷ್ಯನು ನಂಬಿಕೆಯಿಟ್ಟಾಗ ಮಾತ್ರವೇ ಇದು ಸಂಭವಿಸಬಲ್ಲದು."[40]

Herbert M. Carson ಹೀಗೆ ವ್ಯಾಖ್ಯೆ ನೀಡುತ್ತಾನೆ:

> ಕ್ರಿಸ್ತನ ಪುನರುತ್ಥಾನದಲ್ಲಿ ಈಗಾಗಲೆ ತೋರ್ಪಡಿಸಲ್ಪಟ್ಟ ರೀತಿಯಲ್ಲಿ ದೇವರ ಬಲವಾದ ಸಾಮರ್ಥ್ಯವು ವಿಶ್ವಾಸಿಗಳ ಭರವಸೆಯ ಲಕ್ಷ್ಯ ಆಗಿರುತ್ತದೆ. ಹಾಗಾದರೆ ವಾದವು ಈ ರೀತಿಯಲ್ಲಿರಲಿದೆ: ಅವರು ಕ್ರಿಸ್ತನ ಪುನರುತ್ಥಾನದ ವಾಸ್ತವಾಂಶವನ್ನು ಅಂಗೀಕರಿಸಿಕೊಂಡಿದ್ದರು. ಇದು ದೇವರ ಶಕ್ತಿಯ ಸೂಚನೆಯ ತೋರ್ಪಡಿಸುವಿಕೆಯಾಗಿತ್ತು, ಮತ್ತು ಆ ಶಕ್ತಿಯನ್ನು ಅವಲಂಭಿಸಿದವರಾಗಿ ಕ್ರಿಸ್ತನೊಂದಿಗೆ ಐಕ್ಯವಾಗಿ ಆತ್ಮೀಕ ಪುನರುತ್ಥಾನವೊಂದನ್ನು ತಿಳಿದಿದ್ದರು.[41]

ಇತರ ವ್ಯಾಖ್ಯಾನಕಾರರು ಒಮ್ಮತ ವ್ಯಕ್ತಪಡಿಸುತ್ತಾರೆ:

> Chrysostom ಈ ಅಭಿಪ್ರಾಯ ವ್ಯಕ್ತಪಡಿಸುತ್ತಾನೆ: "ದೇವರು ನಿಮ್ಮನ್ನು ಎಬ್ಬಿಸಬಲ್ಲನೆಂದು ನೀವು ನಂಬಿದಿರಿ, ಮತ್ತು ಅದೇ ರೀತಿಯಲ್ಲಿ ಎಬ್ಬಿಸಲ್ಪಟ್ಟಿರಿ" . . . ಇದು ಕೇವಲ ದೇವರು ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂಬ ನಂಬಿಕೆಯಷ್ಟೆ ಅಲ್ಲ, ಆದರೆ ಆತನು ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದ ರೀತಿಯಲ್ಲಿ, ಮತ್ತು ಕ್ರಿಸ್ತನು ಎಬ್ಬಿಸಲ್ಪಡುವದರ ಫಲಿತವಾಗಿ, ದೇವರು ಮಾನವ ಸ್ವಭಾವದಲ್ಲಿ ಕಾರ್ಯಮಾಡುತ್ತಿದ್ದಾನೆ, ಅದನ್ನು ಒಂದು ಹೊಸ ಜೀವಿತಕ್ಕೆ ಎಬ್ಬಿಸುತ್ತಾನೆಂಬುದರಲ್ಲಿ ನಂಬಿಕೆಯಿಡುವದಾಗಿದೆ.[42]

ಆದ್ದರಿಂದ ಕ್ರಿಸ್ತನ ವಿಮೋಚನೆಯು ಸಾಧಿಸಿದ ಆತ್ಮೀಕ ಸುನ್ನತಿಗೆ ಉತ್ತರಿಸುವ ಕ್ರೈಸ್ತ ದೀಕ್ಷಾಸ್ನಾನಕ್ಕೆ ದೀಕ್ಷಾಸ್ನಾನ ಮಾಡಿಸಿಕೊಳ್ಳುವವರು ವೈಯಕ್ತಿಕವಾಗಿ ಒಪ್ಪಿಕೊಳ್ಳುವ – ಮತ್ತು ಅಂಗೀಕರಿಸಿಕೊಳ್ಳುವ ಅಗತ್ಯವಿರುತ್ತದೆ. ಇದರರ್ಥವು ನಂಬಿಕೆಯ ಅನಿವಾರ್ಯತೆಯು ಸ್ವತಃ ಧಾರ್ಮಿಕ ವಿಧಿಯ ಕಡೆಗೆ ಅಲ್ಲ ಆದರೆ "ಸಂಸ್ಕಾರ"ದಲ್ಲಿ ಕಾರ್ಯಮಾಡುವ ದೇವರ ಕಡೆಗೆ ಇರುವ ನಂಬಿಕೆಯು, ವಿಶ್ವಾಸಿಗಳು ಯಾವದರಲ್ಲಿ ಮರಣಿಸಿ ಪುನರುತ್ಥಾನಗೊಂಡರೋ, ಮತ್ತು ಯಾವದು ಅವರನ್ನು ಪಾಪವು ಪರಾಜಯಗೊಳಿಸಲ್ಪಡುವ ದೈವಿಕ ಮಂಡಲದಲ್ಲಿ ಇರಿಸುತ್ತದೋ ಆ ಕ್ರಿಸ್ತನ ಮರಣ ಮತ್ತು ಪುನರುತ್ಥಾನದಲ್ಲಿರುವ ರಕ್ಷಣೆಯುಂಟು ಮಾಡುವ ಸಾಮರ್ಥ್ಯಕ್ಕೆ ಅನ್ವಯಿಸುತ್ತದೆ (ರೋಮಾ 6:7, 9-11).[43]

12ನೇ ವಚನದ ಮಧ್ಯದ ವಿಭಾಗಕ್ಕೆ "ನೀವು ದೀಕ್ಷಾಸ್ನಾನ ಹೊಂದಿದ ವೇಳೆ, ದೇವರು ನಿಮ್ಮನ್ನು ಸಹ ತನ್ನ ಶಕ್ತಿಯ ಮೂಲಕ ಬದುಕುವಂತೆ ಮಾಡಿದನು. ಆತನು ನಿಮ್ಮನ್ನು ಕ್ರಿಸ್ತನ ಸಂಗಡ ಎಬ್ಬಿಸಿದನು. ಇದು ದೇವರ ಶಕ್ತಿಯಲ್ಲಿ ನೀವು ಇಟ್ಟ ಭರವಸೆಯ

ಫಲಿತವಾಗಿ ಸಂಭವಿಸಿತು" ಎಂಬದಾಗಿ ಭಾವಾನುವಾದವನ್ನು ನೀಡಬಹುದು.[44]

ದೇವರು ಮನುಷ್ಯನ ಮನೋಭಾವವು ಏನೇ ಆಗಿದ್ದಾಗ್ಯೂ, ಅಥವಾ ದೇವರು ದೀಕ್ಷಾಸ್ನಾನದಲ್ಲಿ ಏನು ಮಾಡುತ್ತಾನೆಂಬ ಬಗ್ಗೆ ಆತನು ತಿಳುವಳಿಕೆ ಏನೇ ಆಗಿದ್ದಾಗ್ಯೂ, ಅಥವಾ ದೀಕ್ಷಾಸ್ನಾನದ ಬಳಿಕ ಸಮರ್ಪಕವಾದ ಪ್ರತಿಕ್ರಿಯೆ ಮಾಡುತ್ತಾನೆಂಬದನ್ನು ಸಾಭಿತುಗೊಳಿಸಿಕೊಳ್ಳದಿದ್ದಾಗ್ಯೂ ಕೇವಲ ದೀಕ್ಷಾಸ್ನಾನ ಮಾಡಿಸು ಎಂದು ಕೇಳಿಕೊಳ್ಳುವದೇ ನಂಬಿಕೆ ಎಂಬದಾಗಿ ಚಿತ್ರಿಸುವದು ತಪ್ಪಾದದ್ದು.[45]

ಹಾಗಾದರೆ ದೇವರು ಹೀಗೆ ಚಿತ್ರಿಸಲ್ಪಟ್ಟಿರುತ್ತಾನೆ: ಆತನನ್ನು ಸತ್ತವರೊಳಗಿಂದ ಎಬ್ಬಿಸಿದಾತನು, ಯಾಕೆಂದರೆ ತರ್ಕವಾಕ್ಯವು ಸಾಗುತ್ತದೆ: ದೇವರು ಕ್ರಿಸ್ತನನ್ನು ಎಬ್ಬಿಸಿದ್ದಾನೋ, ಹಾಗಾದರೆ ಆತನು ನನ್ನನ್ನು ಸಹ ಹೊಸ ಜೀವನಕ್ಕೆ ತರುತ್ತಾನೆ (ಎಫೆಸ 19, 20). ಅಂಥ "ದೇವರ ಒಂದು ಕಾರ್ಯಾಚರಣೆ" ಅನುಭವಿಸಲ್ಪಡುವದು ನಿಖರವಾಗಿ ನಂಬಿಕೆಯ ಮೂಲಕವೇ ಆಗಿರುತ್ತದೆ.[46]

ದೀಕ್ಷಾಸ್ನಾನ ಮಾಡಿಸಿಕೊಳ್ಳುವವನ ನಂಬಿಕೆಯು ದೀಕ್ಷಾಸ್ನಾನ ಮಾಡಿಸುವವನ ಮೇಲಾಗಲಿ, ನೀರಿನ ಮೇಲಾಗಲಿ, ಸ್ವತಃ ದೀಕ್ಷಾಸ್ನಾನದ ಕ್ರಿಯೆಯಲ್ಲಾಗಲಿ, ಅಥವಾ ಯೇಸುವಿನ ಪುನರುತ್ಥಾನದಲ್ಲಿ ಮಾತ್ರವೇ ಆಗಲಿ ಆಗಿರುವದಿಲ್ಲ. ನಂಬಿಕೆಯು ದೇವರ ಕಡೆಗೆ ಇರತಕ್ಕದ್ದು, ಆತನ ಸಾಮರ್ಥ್ಯವು ಹೊಸ ಕ್ರೈಸ್ತನ ಜೀವನದಲ್ಲಿ ವಾಗ್ದಾನ ಮಾಡಲ್ಪಟ್ಟ ಬದಲಾವಣೆಗಳನ್ನು ತರುತ್ತದೆಂಬ ಭರವಸೆಯಿಂದಿರುವದು. ದೇವರು ಇದನ್ನು ಮಾಡಬಲ್ಲನು ಮತ್ತು ಮಾಡುವನು ಎಂಬ ನಂಬಿಕೆಯು ಯೇಸುವನ್ನು ಎಬ್ಬಿಸುವ ಕ್ರಿಯೆಯಲ್ಲಿ ತೋರಿ ಬಂದ ಆತನ ಕ್ರಿಯಾಶೀಲ ಶಕ್ತಿಯ ಮೇಲೆ ಆಧಾರವಾಗಿರುತ್ತದೆ. ಒಬ್ಬ ವ್ಯಕ್ತಿಯು ದೇವರಲ್ಲಿ ಅಂಥ ನಂಬಿಕೆಯನ್ನು ಹೊಂದಿರುವ ಹೊರತು ದೇವರು ಕ್ರಿಯೆ ಮಾಡಬೇಕೆಂದು ನಿರೀಕ್ಷಿಸಕೂಡದು.

ದೇವರ ಬಲವಾದ ಸಾಮರ್ಥ್ಯದಲ್ಲಿ ನಂಬಿಕೆಯಿಡುವದರ ನಿಮಿತ್ತವಾಗಿ ಯೇಸುವಿನೊಂದಿಗೆ ಹೂಣಲ್ಪಟ್ಟು ಎಬ್ಬಿಸಲ್ಪಡುವದು ಮೂರು ಫಲಿತಗಳನ್ನುಂಟು ಮಾಡುತ್ತದೆ: ಸುನ್ನತಿ, ಹೊಸ ಜೀವನ, ಮತ್ತು ಕ್ಷಮಾಪಣೆ. ದೀಕ್ಷಾಸ್ನಾನದ ವೇಳೆಯಲ್ಲಿ, ಸುನ್ನತಿಯಿಲ್ಲದವರು ಆತ್ಮೀಕವಾಗಿ ಸುನ್ನತಿ ಹೊಂದುತ್ತಾರೆ, ಪಾಪದಲ್ಲಿ ಸತ್ತವರು ಬದುಕಿಸಲ್ಪಡುತ್ತಾರೆ, ಮತ್ತು ಅಪರಾಧಗಳು ಕ್ಷಮಿಸಲ್ಪಡುತ್ತವೆ. 12ನೇ ವಚನದಿಂದ 13ನೇ ವಚನಕ್ಕೆ ಪೌಲನ ಮುಂದುವರೆಯುವ ಯೋಚನೆಯ ಕುರಿತು Eduard Schweizer ಸರಿಯಾಗಿಯೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ, "ಅವರು ಈಗಾಗಲೇ ಹೊಂದಿಕೊಂಡ ಪುನರುತ್ಥಾನದ ಜೀವನ ಎಂಬುದರ ಅರ್ಥವೇನೆಂಬುದನ್ನು ಈ ಕೆಳಗಿನ ವಾಕ್ಯವು ವಿವರಿಸುತ್ತದೆ: ಅದು ಪಾಪಗಳ ಕ್ಷಮಾಪಣೆಯ ಆಧಾರದಲ್ಲಿ, ಸುನ್ನತಿಯಿಲ್ಲದಿರುವಿಕೆಯ ಸ್ಥಿತಿಯಿಂದ ಬಿಡುಗಡೆಗೊಳಿಸಲ್ಪಡುವದು ಎಂಬದನ್ನು ಸೂಚಿಸುತ್ತದೆ."[47]

## "ಅಪರಾಧಗಳನ್ನು ಮಾಡುವದರಿಂದಲೂ ಸುನ್ನತಿಯಿಲ್ಲದ ಶರೀರಭಾವದಿಂದಲೂ ಸತ್ತವರಾಗಿದ್ದ ನಿಮ್ಮನ್ನು" (2:13)

ಕೊಲೊಸ್ಸೆಯವರು ಕ್ಷಮಿಸಲ್ಪಡುವದಕ್ಕೆ ಮುನ್ನ, ಅವರು ಪಾಪದಲ್ಲಿ ಸತ್ತವರಾಗಿದ್ದರು. ಪೌಲನು ರೋಮಾಪುರದವರಿಗೆ ಹೀಗೆ ಹೇಳುತ್ತಾನೆ, "ಪಾಪಕ್ಕೆ ಜೀವ ಬಂತು, ನಾನು

ಸತ್ತೆನು. ಹೇಗಂದರೆ ಪಾಪವು ಆಜ್ಞೆಯಿಂದ ಅನುಕೂಲ ಹೊಂದಿ ನನ್ನನ್ನು ವಂಚಿಸಿ ಆ ಆಜ್ಞೆಯ ಮೂಲಕವೇ ನನ್ನನ್ನು ಕೊಂದಿತು" (ರೋಮಾ 7:9, 11). ಯಾಕೋಬನು ಹೀಗೆ ಬರೆಯುತ್ತಾನೆ, "ಪಾಪವು ತುಂಬಾ ಬೆಳೆದು ಮರಣವನ್ನು ಹಡೆಯುತ್ತದೆ" (ಯಾಕೋಬ 1:15). ಎಲ್ಲಾ ಜನರಂತೆಯೇ, ಕೊಲೊಸ್ಸೆಯವರು ಪಾಪ ಮಾಡಿದ್ದರಿಂದಾಗಿ ಪಾಪದಲ್ಲಿ ಸತ್ತವರಾಗಿದ್ದರು (ರೋಮಾ 3:23). ದೀಕ್ಷಾಸ್ನಾನದ ವೇಳೆಯಲ್ಲಿ, ಅವರು ತಮಗೆ ಹೊಸ ಜೀವನ ಮತ್ತು ಪಾಪಗಳ ಕ್ಷಮಾಪಣೆಯನ್ನು ಕೊಡುವ ಹಾಗೆ ದೇವರ ಸಾಮರ್ಥ್ಯದಲ್ಲಿ ತಮ್ಮ ನಂಬಿಕೆಯಿಟ್ಟದ್ದರಿಂದ ಅವರ ಸ್ಥಿತಿಯು ಬದಲಾಯಿತು.

ಖಂಡಿತವಾಗಿಯೂ, ಪೌಲನು ಇಲ್ಲಿ ಶಾರೀರಿಕ ಮರಣವನ್ನು ಸೂಚಿಸಿ ಹೇಳುತ್ತಿಲ್ಲ. **ಅಪರಾಧಗಳನ್ನು ಮಾಡುವದರಿಂದಲೂ . . . ಸತ್ತವರಾಗಿದ್ದ** ಎಂಬದಾಗಿ ಹೇಳುವ ಮೂಲಕ, ಆತನ ತಾತ್ಪರ್ಯವು ಪಾಪದ ಫಲಿತವಾಗಿ ಕ್ರಿಸ್ತನಲ್ಲಿನ ಜೀವದಿಂದ ಬೇರ್ಪಟ್ಟವರಾಗಿದ್ದರು ಎಂದಾಗಿತ್ತು (ಎಫೆಸ 4:18). ಯೇಸುವು ಆತ್ಮೀಕ ಜೀವನದ ಮೂಲವಾಗಿದ್ದನಾದ್ದರಿಂದ (1 ಯೋಹಾನ 5:12), ಆತನಲ್ಲಿ ಇಲ್ಲದವರು ಆತ್ಮೀಕವಾಗಿ ಸತ್ತವರಾಗಿದ್ದಾರೆ. ಕ್ರಿಸ್ತನಲ್ಲಿರುವ ಜೀವವನ್ನು ಪಡೆದುಕೊಳ್ಳಬೇಕೆಂದರೆ (1 ಯೋಹಾನ 5:11), ಒಬ್ಬ ವಿಶ್ವಾಸಿಯು ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಹೊಂದಬೇಕು (ರೋಮಾ 6:4; ಗಲಾತ್ಯ 3:27). ಒಬ್ಬ ವ್ಯಕ್ತಿಯು ದೀಕ್ಷಾಸ್ನಾನ ಮಾಡಿಸಿಕೊಳ್ಳುವಾಗ ಒಂದು ಹೊಸ ಜೀವನದೊಳಗೆ ಪ್ರವೇಶಿಸುತ್ತಾನೆ ಮತ್ತು ಆತ್ಮೀಕ ನಿರ್ಜೀವತೆಯಿಂದ ತಪ್ಪಿಸಿಕೊಳ್ಳುತ್ತಾನೆಂಬ ಸತ್ಯವು 12 ಮತ್ತು 13 ವಚನಗಳಲ್ಲಿ ಪೌಲನಿಂದ ಸ್ಪಷ್ಟವಾಗಿ ಕಲಿಸಲ್ಪಡುತ್ತದೆ.

13ನೇ ವಚನವು καί ὑμᾶς (*kai humas*, "ಮತ್ತು ನೀವು") ಎಂದು ಆರಂಭಗೊಳ್ಳುತ್ತದೆ, 13ನೇ ವಚನವನ್ನು 12ನೇ ವಚನಕ್ಕೆ ಜೋಡಣೆ ಮಾಡುತ್ತದೆ. ವಿಷಯ ವಸ್ತುವು ಮುಂದುವರೆಯುವದಕ್ಕೆ ಯಾವದೇ ಹೊಸ ಪರಿಚ್ಛೇದದ ಅಗತ್ಯವಿರುವದಿಲ್ಲ. NIV ಮತ್ತು TNIV ತರ್ಜುಮೆಗಳು 12ನೇ ವಚನದ ಅಂತ್ಯದಲ್ಲಿ ವಾಕ್ಯವನ್ನು ಮುಕ್ತಾಯಗೊಳಿಸಿ ಪರಿಚ್ಛೇದವನ್ನು ನಿಲ್ಲಿಸುವ ಮೂಲಕ 12 ಮತ್ತು 13 ವಚನಗಳನ್ನು ಅಸಮರ್ಥನೀಯವಾಗಿ ಬೇರೆ ಬೇರೆ ಮಾಡಿರುತ್ತವೆ. ಇದೊಂದು ವಿವರಣಾತ್ಮಕ ತೀರ್ಮಾನವಾಗಿರುತ್ತದೆ; ಅದು ಈ ವಾಕ್ಯಗಳಲ್ಲಿರುವ ಗ್ರೀಕ್ ರಚನಾವಿನ್ಯಾಸದ ಮೇಲೆ ಆಧಾರವಾದದ್ದಲ್ಲ. ಗ್ರೀಕ್ ವಾಕ್ಯದಲ್ಲಿ, 12ನೇ ವಚನದ ಮುಕ್ತಾಯಕ್ಕೆ ಸಾಲಿನ ಮೇಲೆ ಒಂದು ಬಿಂದುವನ್ನಿಡುವ ಮೂಲಕ ವಿರಾಮ ಕೊಡಲಾಗಿರುತ್ತದೆ. "ಸಾಲಿನ ಮೇಲ್ಗಡೆಯಲ್ಲಿ ಬಿಂದುವನ್ನು ಹೊಂದಿರುವ ಅಪೂರ್ಣ ವಿರಾಮ ಚಿಹ್ನೆಯು . . . ಆಂಗ್ಲದ ಅಪೂರ್ಣ ವಿರಾಮ ಚಿಹ್ನೆ ಮತ್ತು ಪೂರ್ಣವಿರಾಮ ಚಿಹ್ನೆಯ ಸ್ಥಾನವನ್ನು ವಹಿಸಿಕೊಳ್ಳುತ್ತದೆ."[48]

ಒಂದು ಹೊಸ ಪರಿಚ್ಛೇದವನ್ನು ಸೇರ್ಪಡೆಗೊಳಿಸುವ ಮೂಲಕ ವಚನಗಳನ್ನು ಬೇರ್ಪಡಿಸುವದರಿಂದ 12ನೇ ವಚನದಲ್ಲಿರುವ ಪೌಲನ ವಿಚಾರಧಾರೆಯನ್ನು 13ನೇ ವಚನದಿಂದ ಪ್ರತ್ಯೇಕಿಸಿದಂತಾಗುವದು, ಹೇಳಿಕೆಗಳ ನಡುವಿನ ಸಂಬಂಧವನ್ನು ಪ್ರತಿಫಲನ ಮಾಡುವದಕ್ಕೆ ವಿಫಲವಾದಂತಾಗುವದು. ಇತರ ತರ್ಜುಮೆಗಳು ಒಂದು ಪರಿಚ್ಛೇದ ವಿರಾಮ ಕೊಡುವ ಮೂಲಕ ಈ ವಚನಗಳನ್ನು ಬೇರ್ಪಡಿಸುವದಿಲ್ಲ (ನೋಡಿರಿ NASB; KJV; NKJV; ASV; RSV; NRSV). NAB ತರ್ಜುಮೆಯು ಈ ವಚನಗಳ ನಡುವೆ ಒಂದು ಬಲವಾದ ಸಂಬಂಧವನ್ನು ಮಾಡುತ್ತಾ ಹೀಗೆ ಅನುವಾದಿಸುತ್ತದೆ, ". . . ದೇವರು

ಆತನನ್ನು ಸತ್ತವರೊಳಗಿಂದ ಎಬ್ಬಿಸಿದನು. ನೀವು ಸಹ ಪಾಪದಲ್ಲಿ ಸತ್ತವರಾಗಿದ್ದಾಗ . . ." NASBಯು ಸಹ ಹೆಚ್ಚುಕಡಿಮೆ ಅದೇ ರೀತಿಯಲ್ಲಿ ಒತ್ತಿಹೇಳುತ್ತದೆ: ". . . ದೇವರು, ಆತನನ್ನು ಸತ್ತವರೊಗಿಂದ ಎಬ್ಬಿಸಿದಾತನು. ನೀವು ನಿಮ್ಮ ಅಪರಾಧಗಳಲ್ಲಿ ಸತ್ತವರಾಗಿದ್ದಾಗ . . ."

"ಅಪರಾಧಗಳು" (παραπτώματα, *paraptōmata*) ಎಂಬುದರ ವಿವಿಧ ರೂಪದ ಪದಗಳನ್ನು ಯೇಸುವು ಬಳಸಿದನು (ಮತ್ತಾಯ 6:14, 15) ಮತ್ತು ಪೌಲನು ಬಳಸಿದನು (ರೋಮಾ 4:25).[49] ಈ ವಾಕ್ಯಭಾಗಗಳಲ್ಲಿ ಅದು "ತಪ್ಪುಗಳು" ಎಂದು ಅನುವಾದಿಸಲ್ಪಟ್ಟಿದೆ (ಕೆಲವು ಆವೃತ್ತಿಗಳಲ್ಲಿ ಅದು "ಪಾಪಗಳು" ಅಥವಾ "ಉಲ್ಲಂಘನೆಗಳು" ಎಂದು ಅನುವಾದಿಸಲ್ಪಟ್ಟಿರುತ್ತದೆ). ಹೊಸ ಒಡಂಬಡಿಕೆಯ ಹೊರಗೆ, ಈ ಪದವು "ಒಬ್ಬನು ಬೀಳುವವನಾಗುವಂತೆ ಒಂದು ತಪ್ಪು ಹೆಜ್ಜೆಯನ್ನಿಡುವ ಚಿತ್ರಣದಲ್ಲಿ" ಬಳಸಲ್ಪಟ್ಟಿರುತ್ತದೆ.[50] ಪೌಲನು "ಅಪರಾಧಗಳು" ಎಂಬುದನ್ನು ಪದೇ ಪದೇ ಬಹುವಚನದಲ್ಲಿ ಬಳಸಿದನು.

ಪೌಲನು 13ನೇ ವಚನವನ್ನು ಸರ್ವನಾಮವಾದ ನೀವು ಎಂಬುದನ್ನು ಬಳಸುವ ಮೂಲಕ ಆರಂಭಿಸಿದರೆ, ಮುಕ್ತಾಯವನ್ನು ಹೀಗೆ ಬರೆಯುವ ಮೂಲಕ ಮಾಡುತ್ತಾನೆ, "ಆತನು *ನಮ್ಮ* ಅಪರಾಧಗಳನ್ನೆಲ್ಲಾ ಕ್ಷಮಿಸಿ" (ಒತ್ತಿ ಹೇಳಿದ್ದು ನನ್ನದು). ಈ ಪದವಿನ್ಯಾಸವು ಹೆಚ್ಚು ಪ್ರಾಚೀನ ಗ್ರೀಕ್ ಹಸ್ತಪ್ರತಿಗಳಿಂದ ಪ್ರಮಾಣೀಕರಿಸಲ್ಪಟ್ಟಿರುತ್ತದೆ. (KJV ಮತ್ತು NKJVಗಳಲ್ಲಿ "ನಿಮ್ಮ ಎಲ್ಲಾ ಅಪರಾಧಗಳನ್ನು ಕ್ಷಮಿಸಿದನು" ಎಂದಿರುತ್ತದೆ.) "ನಮ್ಮ" ಎಂಬದಾಗಿ ಬಳಸುವ ಮೂಲಕ, ಲೇಖಕನು ದೀಕ್ಷಾಸ್ನಾನದ ವೇಳೆ ಯೇಸುವಿನ ಹೂಣಲ್ಪಡುವಿಕೆ ಮತ್ತು ಪುನರುತ್ಥಾನಗಳಲ್ಲಿ ಪಾಲುಗಾರನಾದಾಗ ತನ್ನ ಅಪರಾಧಗಳು ಕ್ಷಮಿಸಲ್ಪಟ್ಟವು ಎಂಬದಾಗಿ ತನ್ನನ್ನು ಸೇರಿಸಿಕೊಂಡು ಹೇಳುವವನಾಗಿದ್ದಾನೆ. ಪೌಲನು ಏನು ಮಾಡಬೇಕೆಂದು ಆತನಿಗೆ ಹೇಳುವದಕ್ಕಾಗಿ ಯೇಸು ಅನನೀಯನನ್ನು ಕಳುಹಿಸಿದನು (ಅಪೊಸ್ತಲರ ಕೃತ್ಯಗಳು 9:6); ಮತ್ತು ಅನನೀಯನು ಆತನಿಗೆ ಹೀಗೆ ಹೇಳಿದ್ದನು, "ಎದ್ದು ಆತನ ಹೆಸರನ್ನು ಹೇಳಿಕೊಳ್ಳುವವನಾಗಿ ದೀಕ್ಷಾಸ್ನಾನ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ" (ಅಪೊಸ್ತಲರ ಕೃತ್ಯಗಳು 22:16). ಪೌಲ ಹಾಗೂ ಕೊಲೊಸ್ಸೆಯವರು ಏಕ ರೀತಿಯಲ್ಲಿಯೇ ಹೊಸ ಜೀವವನ್ನು ಪಡೆದುಕೊಂಡಿದ್ದರು ಮತ್ತು ಪಾಪಗಳ ಕ್ಷಮಾಪಣೆಯನ್ನು ಹೊಂದಿಕೊಂಡಿದ್ದರು.

ಕೊಲೊಸ್ಸೆಯವರು ದೀಕ್ಷಾಸ್ನಾನದ ವೇಳೆ ಯೇಸುವಿನಲ್ಲಿ ಪರಿಪೂರ್ಣಗೊಳಿಸಲ್ಪಟ್ಟಿದ್ದರು (2:10), ಆಗ ಅವರಿಗೆ ಆತ್ಮೀಕ ಸುನ್ನತಿ ಮಾಡಲ್ಪಟ್ಟಿತು, ಆತ್ಮೀಕವಾಗಿ ಬದುಕಿಸಲ್ಪಟ್ಟರು, ಮತ್ತು ಅವರ ಅಪರಾಧಗಳೆಲ್ಲಾ ಕ್ಷಮಿಸಲ್ಪಟ್ಟಿದ್ದವು. ತಾವು ದೀಕ್ಷಾಸ್ನಾನ ಮಾಡಿಸಿಕೊಳ್ಳುತ್ತಿರುವ ವೇಳೆಯಲ್ಲಿ ದೇವರು ಇದನ್ನು ಮಾಡುತ್ತಿದ್ದಾನೆಂಬ ಅವರ ನಂಬಿಕೆಯು ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದ ಆತನ ಸಾಮರ್ಥ್ಯದ ಮೇಲೆ ಆಧಾರವಾಗಿತ್ತು. ದೇವರು ಯೇಸುವಿನ ಸತ್ತ ಶರೀರದಲ್ಲಿ ಹೊಸ ಜೀವವನ್ನು ತುಂಬುವದಕ್ಕೆ ಶಕ್ತನಾಗಿರುವದಾದರೆ, ಆತನು ಅವರನ್ನು ಆತ್ಮೀಕ ಮರಣದಿಂದ ಹೊಸ ಆತ್ಮೀಕ ಜೀವನವೊಂದಕ್ಕೆ ಕರೆದೊಯ್ಯಬಲ್ಲನು ಎಂಬದಾಗಿ ಅವರು ನಂಬಿಕೆಯನ್ನು ಹೊಂದಿದ್ದರು. ನೀವು ದೀಕ್ಷಾಸ್ನಾನದ ವೇಳೆ ಹೂಣಲ್ಪಡುವಿಕೆ ಮತ್ತು ಪುನರುತ್ಥಾನಗಳಲ್ಲಿ ಪಾಲುಗಾರರಾಗುವಾಗ ಇದೇ ಸಂಭವಿಸುತ್ತದೆ.

ಯೆಹೂದಿ ಯುಗದಲ್ಲಿ, ಸುನ್ನತಿ ಹೊಂದದ ಯೆಹೂದ್ಯರು ಮತ್ತು ಅನ್ಯಜನರು ದೇವರಿಂದ ಬೇರ್ಪಟ್ಟವರು ಮತ್ತು ನಿರೀಕ್ಷೆಯಿಲ್ಲದವರು ಎಂಬದಾಗಿ ಪರಿಗಣಿಸಲ್ಪಡುತ್ತಿದ್ದರು (ಎಫೆಸ 2:11, 12). ಅವರನ್ನು ಯೆಹೂದ್ಯರು ದೇವರ ಜನರೆಂದು ಅಂಗೀಕರಿಸುತ್ತಿರಲಿಲ್ಲ. ಕ್ರೈಸ್ತ ಯುಗದಲ್ಲಿ, ಆತ್ಮೀಕ ಸುನ್ನತಿಯನ್ನು ಹೊಂದಿರದವರು ದೇವರ ಜನರೆಂದು ಪರಿಗಣಿಸಲ್ಪಡುವದಿಲ್ಲ. ಆತ್ಮೀಕ ಸುನ್ನತಿಯು ದೀಕ್ಷಾಸ್ನಾನವನ್ನು ಮಾಡಿಸಿಕೊಳ್ಳುವದರಿಂದ ಹೊಂದಿಕೊಳ್ಳಲಾಗುತ್ತದಾದ್ದರಿಂದ, ದೀಕ್ಷಾಸ್ನಾನದ ಸಂದರ್ಭದಲ್ಲೇ ಒಬ್ಬ ವ್ಯಕ್ತಿಯ ಆತ್ಮೀಕ ಸ್ಥಿತಿಯು ಮಾರ್ಪಡುತ್ತದೆ. ನಂಬಿಕೆ ಮತ್ತು ದೀಕ್ಷಾಸ್ನಾನದ ಮೂಲಕ, ಒಬ್ಬ ವ್ಯಕ್ತಿಯು ದೇವರ ಮಗುವಾಗುತ್ತಾನೆ (ಗಲಾತ್ಯ 3:26, 27).

### "ನಿಮ್ಮನ್ನು ಸಹ ದೇವರು ಕ್ರಿಸ್ತನೊಂದಿಗೆ ಬದುಕಿಸಿದ್ದಾನೆ. ಆತನು ನಮ್ಮ ಅಪರಾಧಗಳನ್ನೆಲ್ಲಾ ಕ್ಷಮಿಸಿ" (2:13)

ಕೊಲೊಸ್ಸೆಯವರಿಗೆ ಪೌಲನು ಹೇಳುವ ಮಾತುಗಳಿಂದ ದೀಕ್ಷಾಸ್ನಾನದ ಪ್ರಮಾಣೀಕರಣವು ಅದನ್ನು ತೆಗೆದುಕೊಳ್ಳುವವನ ನಂಬಿಕೆಯ ಮೇಲೆ ಅವಲಂಭಿತವಾಗಿರುತ್ತದೆಂಬುದು ಸ್ಪಷ್ಟವಾಗುತ್ತದೆ. ಯೇಸುವಿನ ಪುನರುತ್ಥಾನದಲ್ಲಿ ತೋರಿದ ದೇವರ ಬಲವಾದ ಸಾಮರ್ಥ್ಯವು ತನಗೆ ಒಂದು ಹೊಸ ಜೀವನವನ್ನು ನೀಡಬಲ್ಲದು ಮತ್ತು ತನ್ನ ಪಾಪಗಳನ್ನು ಕ್ಷಮಿಸಬಲ್ಲದು ಎಂಬದಾಗಿ ಆತನು ನಂಬತಕ್ಕದ್ದು. ಯೇಸುವನ್ನು ಪುನರುತ್ಥಾನಗೊಳಿಸುವದರಲ್ಲಿ ದೇವರುಮಾಡಿರುವಂಥ ಕಾರ್ಯದಲ್ಲಿ ಮತ್ತು ದೀಕ್ಷಾಸ್ನಾನ ಹೊಂದುತ್ತಿರುವ ವ್ಯಕ್ತಿಗೆ ಆತನು ಮಾಡಲಿರುವ ಕಾರ್ಯದಲ್ಲಿ ನಂಬಿಕೆಯಿಡುವ ಹೊರತು, ದೀಕ್ಷಾಸ್ನಾನದ ಶಾರೀರಿಕ ಕ್ರಿಯೆಯು ಕೇವಲ ಒಂದು ನಿರರ್ಥಕವಾದ, ಪ್ರಯೋಜನವಿಲ್ಲದ ಧಾರ್ಮಿಕ ವಿಧಿಯಾಗುತ್ತದಷ್ಟೆ. ದೇವರು ಮಾಡುತ್ತಿರುವ ಕಾರ್ಯದಲ್ಲಿ ನಂಬಿಕೆಯಿಡಬೇಕೆಂದರೆ, ವ್ಯಕ್ತಿಯು ತಾನು ದೀಕ್ಷಾಸ್ನಾನ ಹೊಂದುತ್ತಿರುವ ವೇಳೆಯಲ್ಲಿ ದೇವರು ಏನು ಮಾಡುತ್ತಿದ್ದಾನೆಂಬುದನ್ನು ಅರ್ಥಮಾಡಿಕೊಳ್ಳಬೇಕಾಗಿರುತ್ತದೆ. ಈ ಪ್ರಕ್ರಿಯೆಯಲ್ಲಿ ದೇವರು ಏನು ಮಾಡುತ್ತಾನೆ? ಅಪೊಸ್ತಲನು ಅದನ್ನು ವಿವರಿಸುತ್ತಾನೆ, **ನಿಮ್ಮನ್ನು ಸಹ ದೇವರು ಕ್ರಿಸ್ತನೊಂದಿಗೆ ಬದುಕಿಸಿದ್ದಾನೆ. ಆತನು ನಿಮ್ಮ ಅಪರಾಧಗಳನ್ನೆಲ್ಲಾ ಕ್ಷಮಿಸಿ.** ದೇವರು ಶರೀರಭಾವದ ಅಭಿಲಾಷೆಗಳನ್ನು ತೆಗೆದು ಹಾಕುವ ಮೂಲಕ, ಆತನನ್ನು ಕ್ರಿಸ್ತನ ಕೂಡ ಬದುಕಿಸುವ ಮತ್ತು ಆತನ ಪಾಪಗಳನ್ನು ಕ್ಷಮಿಸುವ ಮೂಲಕ, ದೀಕ್ಷಾಸ್ನಾನ ಮಾಡಿಸಿಕೊಳ್ಳುತ್ತಿರುವ ವ್ಯಕ್ತಿಗೆ ಆತ್ಮೀಕ ಸುನ್ನತಿಯನ್ನು ಮಾಡುತ್ತಾನೆ.

11ರಿಂದ 13 ವಚನಗಳ ಪ್ರಕಾರವಾಗಿ, ಕೊಲೊಸ್ಸೆಯವರ ಜೀವಿತಗಳಲ್ಲಿ ಕೆಲವೊಂದು ಪ್ರಾಮುಖ್ಯವಾದ ಬದಲಾವಣೆಗಳು ಸಂಭವಿಸಿದ್ದವು. (ಪುಟ 232ರಲ್ಲಿರುವ "ಕೊಲೊಸ್ಸೆಯಲ್ಲಿನ ಕ್ರೈಸ್ತರ ಸ್ಥಿತಿ [2:11-13]" ನಕ್ಷೆಯನ್ನು ನೋಡಿರಿ.) ಯೇಸುವನ್ನು ಎಬ್ಬಿಸಿದ ದೇವರ ಸಾಮರ್ಥ್ಯವು ತಮ್ಮ ಶರೀರಭಾವದ ಅಭಿಲಾಷೆಗಳನ್ನು ತೆಗೆದು ಹಾಕಿ, ಅವರನ್ನು ಬದುಕಿಸಬಲ್ಲದು, ಮತ್ತು ಅವರ ಪಾಪಗಳನ್ನು ಕ್ಷಮಿಸಬಲ್ಲದು ಎಂಬದಾಗಿ ನಂಬಿದ್ದರಿಂದ ಕೊಲೊಸ್ಸೆಯವರಲ್ಲಿ ಈ ಬದಲಾವಣೆಗಳು ಸಂಭವಿಸಿದ್ದವು.

". . . ನೊಂದಿಗೆ ಬದುಕಿಸಿದ್ದಾನೆ" (συνεζωοποίησεν, *sunezōopoiēsen*) ಎಂಬುದು "ಒಬ್ಬನೊಂದಿಗೆ ಬದುಕಿಸಲ್ಪಡುವದು" ಎಂಬ ಅರ್ಥವನ್ನು ಕೊಡುವಂಥ ಪದದಿಂದ ಬಂದದ್ದಾಗಿದೆ.[51] ಹೊಸ ಒಡಂಬಡಿಕೆಯಲ್ಲಿ ಈ ಪದವು ಬಳಸಲ್ಪಟ್ಟಿರುವ ಇತರ

ಏಕೈಕ ವಾಕ್ಯಭಾಗವು ಎಫೆಸ 2:5 ಆಗಿರುತ್ತದೆ. ಈ ನಿರ್ದಿಷ್ಟವಾದ ರೂಪದ ಪದವನ್ನು ಬಳಸುವ ಮೂಲಕ, ಪೌಲನು ಪೂರ್ತಿಗೊಳಿಸಲ್ಪಟ್ಟಿದ್ದಂಥ ಒಂದು ಹಿಂದಿನ ಘಟನೆಯನ್ನು ಸೂಚಿಸುತ್ತಿದ್ದಾನೆ. Peter T. O'Brien ಹೀಗೆ ಬರೆಯುತ್ತಾನೆ,

> ಕ್ರಿಸ್ತನ ಸಂಗಡ ಕೊಲೊಸ್ಸೆಯವರ ಪುನರುತ್ಥಾನವು ಆಗಲೇ ಸಂಭವಿಸಿತ್ತು: ಅದು ಒಂದು ಅನಿಶ್ಚಿತ ಭೂತಕಾಲ ರೂಪದಲ್ಲಿ συνηγέρθητε ("ನೀವು ಎಬ್ಬಿಸಲ್ಪಟ್ಟಿರಿ") ಎಂಬದರ ಮೂಲಕ ಬಣ್ಣಿಸಲ್ಪಟ್ಟಿದೆ. ಇದರರ್ಥವು ಕೊಲೊಸ್ಸೆಯವರ ಅಂತ್ಯಾವಸ್ಥೆಯು ಪೂರ್ಣವಾಗಿ ನೆರವೇರಿತ್ತೆಂಬದಾಗಿರಲಿಲ್ಲ . . . ; ಭವಿಷ್ಯದ ಅಂಶವು ಈಗ ಸದ್ಯಕ್ಕೆ ದೇವರೊಂದಿಗೆ ಕ್ರಿಸ್ತನಲ್ಲಿ ಅಡಗಿಸಲ್ಪಟ್ಟಿರುವ ಪ್ರಕಟನೆಯಾಗಿ ತಿಳಿಸಲ್ಪಟ್ಟಿದೆ (3:3, 4), ಹೊರತು ಸತ್ತವರ ಪುನರುತ್ಥಾನವೆಂಬಂತೆ ಅಲ್ಲ.[52]

12 ಮತ್ತು 13 ವಚನಗಳಲ್ಲಿ ಪೌಲನು σύν (*sun*, "ಒಟ್ಟಿಗೆ" ಎಂಬ ಅರ್ಥ ಕೊಡುವ) ಎಂಬದರೊಂದಿಗೆ ಆರಂಭಗೊಳ್ಳುವ ಮೂರು ಸಂಯುಕ್ತ ಕ್ರಿಯಾಪದಗಳನ್ನು ಬಳಸುತ್ತಾನೆ. ದೀಕ್ಷಾಸ್ನಾನದಲ್ಲಿ ಕೊಲೊಸ್ಸೆಯವರು "ಆತನೊಂದಿಗೆ" ಹೂಣಲ್ಪಟ್ಟಿದ್ದರು ಮತ್ತು ಎಬ್ಬಿಸಲ್ಪಟ್ಟಿದ್ದರು. ಈಗ ನಾವು *sun* ಉಪಸರ್ಗ ಹೊಂದಿರುವ ಮೂರನೆಯ ಪದಕ್ಕೆ ಬಂದಿದ್ದೇವೆ. ಇದು ಮೊದಲ ಎರಡರ ಫಲಿತವಾಗಿ ಉಂಟಾಗುವ ಲಾಭವಾಗಿರುತ್ತದೆ: ಅವರು ". . . ನೊಂದಿಗೆ ಬದುಕಿಸಲ್ಪಟ್ಟವರು" ಸಹ ಆಗಿದ್ದರು. ಅವರು ದೀಕ್ಷಾಸ್ನಾನದಲ್ಲಿ ಯೇಸುವಿನೊಂದಿಗೆ ಶಾರೀರಿಕವಾಗಿ ಹೂಣಲ್ಪಡುವಿಕೆ ಮತ್ತು ಪುನರುತ್ಥಾನಗಳಲ್ಲಿ ಪಾಲುಗಾರರಾಗಿದ್ದರಾದ ಕಾರಣ, ಅವರು ಆತನೊಂದಿಗೆ ಒಂದು ಹೊಸ ಜೀವನದಲ್ಲಿ – ಒಂದು ಆತ್ಮೀಕ ಅರ್ಥದಲ್ಲಿ – ಸಹ ಪಾಲುಗಾರರಾಗಿದ್ದರು. ಅವರು ಒಂದು ಕಾಲದಲ್ಲಿ ಆತ್ಮೀಕವಾಗಿ ಸುನ್ನತಿಯಿಲ್ಲದವರಾಗಿದ್ದರು, ಪಾಪದಲ್ಲಿ ಸತ್ತವರಾಗಿದ್ದರು, ಮತ್ತು ದೇವರಿಂದ ಬೇರ್ಪಟ್ಟಿದ್ದರು; ದೀಕ್ಷಾಸ್ನಾನದ ಬಳಿಕ, ಅವರ ಪಾಪಗಳು ತೆಗೆದು ಹಾಕಲ್ಪಡುವ ಮೂಲಕ ಅವರು ಆತ್ಮೀಕವಾಗಿ ಸುನ್ನತಿ ಹೊಂದಿದರು. ಪಾಪದ ಕಾರಣದಿಂದ ಅವರು ದೇವರಿಂದ ಬೇರ್ಪಡಿಸಲ್ಪಟ್ಟಿದ್ದು ಈಗ ಅಂತ್ಯಗೊಂಡಿತ್ತು. "ಬೈಬಲಿನ ಅರ್ಥದಲ್ಲಿ, ದೇವರು ಪಾಪದ ಕಾರಣದಿಂದ ಮುರಿದು ಹೋಗಿದ್ದ ತನ್ನ ಮತ್ತು ಮನುಷ್ಯನ ನಡುವಿನ ಸಂಬಂಧವನ್ನು ಪುನಃಸ್ಥಾಪನೆ ಮಾಡುವದಕ್ಕೆ ಕ್ಷಮಾಪಣೆಯು ಸಂಬಂಧ ಹೊಂದಿರುತ್ತದೆ."[53]

ಇಲ್ಲಿ ಹೇಳಲ್ಪಟ್ಟಿರುವ ಪುನರುತ್ಥಾನವು ಭವಿಷ್ಯದಲ್ಲಾಗುವ ಪುನರುತ್ಥಾನದ ನಿರೀಕ್ಷೆಯಾಗಿರುವದಿಲ್ಲ, ಆದರೆ ಅದು ದೀಕ್ಷಾಸ್ನಾನದಲ್ಲಿ ಕೊಲೊಸ್ಸೆಯವರು ಯೇಸುವಿನ ಪುನರುತ್ಥಾನದಲ್ಲಿ ಪಾಲುಗಾರರಾದದ್ದನ್ನು ಸೂಚಿಸುತ್ತದೆ. ಕ್ರಿಸ್ತನೊಂದಿಗೆ ಬದುಕಿಸಲ್ಪಡಬೇಕಾದರೆ ಅವರು ಆತನ ಸಂಗಡ ಹೂಣಲ್ಪಡುವದು ಮತ್ತು ಆತನೊಂದಿಗೆ ಎಬ್ಬಿಸಲ್ಪಡುವದು ಅಗತ್ಯವಾಗಿತ್ತು. ಆಗ ಅವರು ಆತನೊಂದಿಗೆ ಒಂದು ಹೊಸ ಜೀವನದಲ್ಲಿ ಭಾಗಿಯಾಗುತ್ತಿದ್ದರು. ಮೊದಲು ಯೇಸುವಿನ ಮರಣದಲ್ಲಿ ಪಾಲುಗಾರರಾಗುವ ಮೂಲಕ ಪಾಪದ ಪಾಲಿಗೆ ಆತ್ಮೀಕವಾಗಿ ಮರಣವನ್ನು ಅನುಭವಿಸದೆಯೇ ಯಾವನೂ ಹೊಸ ಜೀವನದೊಳಗೆ ಪ್ರವೇಶಿಸಲಾರನು (ರೋಮಾ 6:3, 4). ಹೊಸ ಜೀವನದೊಳಗೆ ಪ್ರವೇಶಿಸಬೇಕೆಂದರೆ, ದೀಕ್ಷಾಸ್ನಾನ ಮಾಡಿಸಿಕೊಳ್ಳುತ್ತಿರುವ ವ್ಯಕ್ತಿಯು ಒಂದು ಆಂತರಿಕ ಹೊಸರೂಪವನ್ನುಂಟು ಮಾಡುವಂತೆ, ಹೃದಯದಿಂದ ನಂಬುವ ಮೂಲಕ ಸಹಕಾರ ನೀಡಬೇಕಾಗುತ್ತದೆ (ರೋಮಾ 6:4, 17, 18). ಒಬ್ಬನು ದೀಕ್ಷಾಸ್ನಾನದಲ್ಲಿ ಕ್ರಿಸ್ತನೊಂದಿಗೆ

ಪುನರುತ್ಥಾನಗೊಂಡಾಗ, ಹೊಸ ಜೀವನವು ಪ್ರಸ್ತುತ ವಾಸ್ತವಿಕತೆಯಾಗುತ್ತದೆ.

ಪೌಲನು 13ನೇ ವಚನದ ಸನ್ನಿವೇಶದಲ್ಲಿ ದೀಕ್ಷಾಸ್ನಾನ ಮತ್ತು ಪಾಪಗಳ ಕ್ಷಮಾಪಣೆ ನಡುವೆ ಸ್ಪಷ್ಟವಾಗಿ ಸಂಬಂಧವನ್ನು ತೋರಿಸಿ ಕೊಟ್ಟಿರುತ್ತಾನಾದರೂ, ಕೆಲವರು ಇವೆರಡನ್ನು ಬೇರ್ಪಡಿಸುವದಕ್ಕೆ ಪ್ರಯತ್ನಿಸಿರುತ್ತಾರೆ. ಈ ಪ್ರಯತ್ನಗಳು ಅಸಮರ್ಥನೀಯವಾದವುಗಳು, ಯಾಕೆಂದರೆ ದೀಕ್ಷಾಸ್ನಾನ ಮತ್ತು ಕ್ಷಮಾಪಣೆಗಳು ಬೇರ್ಪಡಿಸಲಾಗದವುಗಳಾಗಿವೆ. ಅವುಗಳ ನಡುವಿನ ಸಂಬಂಧವು ವಿಶೇಷವಾಗಿ ಅಪೊಸ್ತಲರ ಕೃತ್ಯಗಳು 2:38ರಲ್ಲಿ ಕಾಣಿಸುತ್ತದೆ, ಅಲ್ಲಿ ದೀಕ್ಷಾಸ್ನಾನವು "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ [εἰς, *eis*]" ಎಂದು ಹೇಳಲ್ಪಟ್ಟಿರುತ್ತದೆ. ಕೆಲವರು ಅಪೊಸ್ತಲರ ಕೃತ್ಯಗಳು 2:38ರಲ್ಲಿರುವ *eis* ಎಂಬುದು "ಗಳ ಕಾರಣದಿಂದ" ಎಂದಾಗಿರುತ್ತದೆಂದು ವಾದಿಸುತ್ತಾರೆ. ಹೇಗೂ, ಹಲವರು ವ್ಯಾಕರಣಗಳು ಮತ್ತು ಶಬ್ದಕೋಶಗಳು ದೃಢಪಡಿಸುವದೇನೆಂದರೆ *eis* — ಇಲ್ಲಿ, ಮತ್ತು ಮಾರ್ಕ 1:4 ಹಾಗೂ ಲೂಕ 3:3ರಲ್ಲಿ ಸಹ — ಉದ್ದೇಶವನ್ನು ತಿಳಿಯಪಡಿಸುತ್ತದೆ. ಇತ್ತೀಚೆಗೆ ಪ್ರಕಾಶನಗೊಂಡ ಮತ್ತು ಅತ್ಯಂಥ ಗೌರವಕ್ಕೆ ಪಾತ್ರವಾಗಿರುವ ನ ಶಬ್ದಕೋಶವು *eis* ನ್ನು "ಪಾಪಗಳು ಕ್ಷಮಿಸಲ್ಪಡುವಂತಾಗಲು . . . ಭಾವಾತ್ಮಕ/ಅಮೂರ್ತ/ಯುಕ್ತತೆ ಕೋನಗಳನ್ನೊಳಗೊಂಡ ಗುರಿಗಳ ಗುರುತುಗಾರ" ಎಂಬದಾಗಿ ಬಣ್ಣಿಸಲ್ಪಟ್ಟಿದೆ ಮತ್ತಾಯ 26:28; cp. ಮಾರ್ಕ 1:4; ಲೂಕ 3:3; ಅಪೊಸ್ತಲರ ಅ.ಕೃತ್ಯ 2:38."[54]

ಅರ್ಥನಿರೂಪಣೆಯ ಪ್ರಕಾರ, ಗ್ರೀಕ್.ನ *eis* ಎಂಬುದು, ದೀಕ್ಷಾಸ್ನಾನವನ್ನು ಕ್ಷಮಾಪಣೆಯೊಂದಿಗೆ ಸಂಬಂಧಗೊಳಿಸುವ ಸನ್ನಿವೇಶಗಳಲ್ಲಿ, "ಹೀಗಾಗುವ ಹಾಗೆ," "ಉದ್ದೇಶಕ್ಕಾಗಿ," ಅಥವಾ "ಪಡೆದುಕೊಳ್ಳಲು" ಎಂಬರ್ಥವನ್ನು ಕೊಡುತ್ತದೆ. ಸ್ಪಷ್ಟವಾಗಿರುವ ಅಂತಿಮ ನಿರ್ಣಯವೇನೆಂದರೆ ಜನರು ತಮ್ಮ ಪಾಪಗಳು ಕ್ಷಮಿಸಲ್ಪಡುವಂತಾಗಲು ದೀಕ್ಷಾಸ್ನಾನವನ್ನು ಮಾಡಿಸಿಕೊಳ್ಳಬೇಕು ಎಂಬದೆ. ರಕ್ಷಣೆಯನ್ನು ಹೊಂದಿಕೊಳ್ಳಬೇಕೆಂದರೆ ದೀಕ್ಷಾಸ್ನಾನವು ಅವಶ್ಯಕವೆಂಬದಾಗಿ ಇತರ ವಾಕ್ಯಭಾಗಗಳು ಕಲಿಸುತ್ತವೆ (ಮಾರ್ಕ 16:16; 1 ಪೇತ್ರ 3:21). ಯೇಸು ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿ ರಕ್ಷಿಸುವನೆಂದು ಒಬ್ಬ ದೇವದೂತನು ಹೇಳಿದನು. ಇದು "ರಕ್ಷಿಸಲ್ಪಡುವದು" ಕ್ಷಮಾಪಣೆಗೆ ಸಂಬಂಧಿಸಿದ್ದೆಂಬುದನ್ನು ತೋರ್ಪಡಿಸುತ್ತದೆ. ದೀಕ್ಷಾಸ್ನಾನ ಹೊಂದುವ ಮೂಲಕ ರಕ್ಷಿಸಲ್ಪಟ್ಟವರು ತಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಪಡೆದುಕೊಂಡವರಾಗಿದ್ದಾರೆ. ಒಬ್ಬನು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಎಲ್ಲಾ ಅಪರಾಧಗಳು ಕ್ಷಮಿಸಲ್ಪಡುವ ಭಾವನೆಯು ಕ್ಷಮಿಸಲ್ಪಡಬೇಕಾದರೆ ದೀಕ್ಷಾಸ್ನಾನವು ಅವಶ್ಯಕವೆಂದು ತೋರಿಸುವ ಹೊಸ ಒಡಂಬಡಿಕೆಯ ಇತರ ವಾಕ್ಯಭಾಗಗಳೊಂದಿಗೆ ಸಮಂಜಸತೆಯಲ್ಲಿರುತ್ತದೆ.

ಕೊಲೊಸ್ಸೆಯವರ **ಎಲ್ಲಾ** ತಪ್ಪು ಹೆಜ್ಜೆಗಳು **ಕ್ಷಮಿಸಲ್ಪಟ್ಟಿದ್ದವು**. ಯೇಸುವು ನೀಡುವ ಕ್ಷಮಾಪಣೆಯು ಭಾಗಂಶವಾದದ್ದಲ್ಲ, ಆದರೆ ಸಂಪೂರ್ಣವಾದದ್ದು, ಅವರು ಮಾಡಿದ್ದ ಪ್ರತಿಯೊಂದು ದುಷ್ಕೃತ್ಯವನ್ನೂ ಒಳಗೊಂಡದ್ದಾಗಿತ್ತು. ಯೇಸುವಿಗೆ ವಿಧೇಯರಾಗುವವರ (ಇಬ್ರಿಯ 5:9) ಸಕಲ ಪಾಪಗಳನ್ನು ಆತನ ರಕ್ತವು ಕ್ಷಮಿಸುವದು (1 ಯೋಹಾನ 1:7). ಪಂಚಾಶತ್ತಮ ದಿನದಂದು ಪೇತ್ರನು ಇದನ್ನೇ ಯೆಹೂದ್ಯರ ಮುಂದಿಟ್ಟನು (ಅಪೊಸ್ತಲರ ಕೃತ್ಯಗಳು 2:38), ಮತ್ತು ಕ್ರೈಸ್ತರ ಹಿಂಸಕನೂ ಕೊಲೆಗಾರನೂ ಆಗಿದ್ದ ಪೌಲನಿಗೆ ಸಹ

ದಮಸ್ಕದ ದಾರಿಯಲ್ಲಿ ಕೊಡಲ್ಪಟ್ಟಿದ್ದು ಇದೇ ಆಗಿದೆ (ಅಪೊಸ್ತಲರ ಕೃತ್ಯಗಳು 22:16). ಹಿಂದಿನ ಎಲ್ಲಾ ಪಾಪಗಳಿಗೆ ಕ್ಷಮಾಪಣೆ ಹೊಂದಿದವರಾಗುವದೆಂದರೆ, ಕೊಲೊಸ್ಸೆಯವರು ಇನ್ನು ಮೇಲೆ ನೀತಿಯ ಜೀವನ ನಡಿಸುವದನ್ನು ಪರಿಗಣಿಸದೆಯೇ ತಮ್ಮ ಗತಕಾಲವನ್ನು ಅವಲಂಭಿಸಿರಬೇಕೆಂಬ ಅರ್ಥವಾಗಿರಲಿಲ್ಲ. ಕ್ರೈಸ್ತರು ದೀಕ್ಷಾಸ್ನಾನದ ನಂತರದಲ್ಲಿ ಮಾಡಿದ ಯಾವದೇ ಪಾಪಕ್ಕೆ ಕ್ಷಮಾಪಣೆಯನ್ನು ಕೇಳತಕ್ಕದ್ದಾಗಿರುತ್ತದೆ.

ಹೊಸ ಜೀವನವನ್ನು ಪ್ರವೇಶಿಸುವಂಥದ್ದು ಯೇಸುವಿಗೋಸ್ಕರ ಪರಿಶುದ್ಧ ಜೀವನ ನಡಿಸುವದರಲ್ಲಿ ಫಲಿತಗೊಳ್ಳಬೇಕು. ದೇವರ ಕೃಪೆಯ ಮೂಲಕ ತಾವು ಕ್ಷಮಿಸಲ್ಪಡಬಲ್ಲರು ಎಂಬ ಕಾರಣಕ್ಕಾಗಿ ಕ್ರೈಸ್ತರು ಪಾಪದಲ್ಲಿ ಮುಂದುವರೆಯಕೂಡದು (ರೋಮಾ 6:1-6). ಪಾಪದಲ್ಲಿ ಮುಂದುವರೆಯುವವರು ಕೃಪೆಯ ಪವಿತ್ರಾತ್ಮನನ್ನು (ಬಹುಶಃ "ಆತ್ಮನನ್ನು") ಅವಮಾನಿಸುವವರಾಗಿರುತ್ತಾರೆ. ಕ್ರೈಸ್ತರಿಗೆ ಕೊಡಲ್ಪಟ್ಟಿರುವ ಕೃಪೆಯು ಪಾಪವನ್ನು ಪ್ರೋತ್ಸಾಹಿಸುವದಕ್ಕೋಸ್ಕರ ಕೊಡಲ್ಪಟ್ಟದ್ದಲ್ಲ; ಅದು ಪಾಪ ಮಾಡದೆ ಜೀವಿಸುವದಕ್ಕೆ ಪ್ರಯತ್ನಿಸುವವರಿಗೋಸ್ಕರ ಇರುತ್ತದೆ (1 ಯೋಹಾನ 2:1, 2). ಒಬ್ಬ ಬಿಗಿಯಾದ ಹಗ್ಗದ ಮೇಲೆ ನಡೆಯುವವನು ನೆಲದಲ್ಲಿ ಒಂದು ಸುರಕ್ಷತೆಯ ಬಲೆಯನ್ನು ಹಾಕಿಸಿಕೊಳ್ಳಲು ಇಚ್ಛಿಸಬಹುದು. ಆತನಿಗೆ ಬೀಳುವದಕ್ಕೆ ಇಷ್ಟವಿಲ್ಲ, ಆದರೆ ಒಂದು ವೇಳೆ ತಾನು ಬಿದ್ದಲ್ಲಿ ಆತನನ್ನ ಹಿಡಿದುಕೊಳ್ಳುವದಕ್ಕೆ ಅಲ್ಲಿ ಬಲೆಯು ಇರಬೇಕೆಂದು ಆತನ ಬಯಕೆಯಾಗಿರುತ್ತದೆ. ಅದೇ ರೀತಿಯಲ್ಲಿಯೇ, ದೇವರು ಕೃಪೆಯನ್ನು ಪಾಪ ಮಾಡದವರಾಗಿ ಜೀವಿಸುವದಕ್ಕೆ ಪ್ರಯತ್ನಿಸುತ್ತಿರುವ ಆದರೆ ಕೆಲವು ಸಾರಿ ಪಾಪ ಮಾಡುವಂಥ ಕ್ರೈಸ್ತರಿಗಾಗಿ ಒಂದು ಸುರಕ್ಷತೆಯ ಬಲೆಯಾಗಿ ಅನುಗ್ರಹಿಸುತ್ತಾನೆ.

## ಕ್ರಿಸ್ತನಲ್ಲಿ ಧರ್ಮಶಾಸ್ತ್ರದ ವಿಧಿಗಳಿಂದ ಸ್ವಾತಂತ್ರ್ಯ (2:14)

**14ನಮ್ಮ ಮೇಲೆ ದೋಷಾರೋಪಣೆಮಾಡಿದಂಥ ಆಜ್ಞಾರೂಪವಾಗಿದ್ದಂಥ ಪತ್ರವನ್ನು ಕೆಡಿಸಿ ಅದನ್ನು ಶಿಲುಬೆಗೆ ಜಡಿದು ಇಲ್ಲದಂತಾಗ ಮಾಡಿದನು.**

### "ನಮ್ಮ ಮೇಲೆ ದೋಷಾರೋಪಣೆಮಾಡಿದಂಥ ಆಜ್ಞಾರೂಪವಾಗಿದ್ದಂಥ ಪತ್ರವನ್ನು ಕೆಡಿಸಿ"

ಯಾವದು **ಕೆಡಿಸಲ್ಪಟ್ಟಿತು,** "ಇಲ್ಲದಂತಾಗ" ಮಾಡಲ್ಪಟ್ಟಿತು ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕೆಂದರೆ, ನಾವು **ಆಜ್ಞಾರೂಪವಾಗಿದ್ದಂಥ ಪತ್ರ** ಎಂಬುದರ ಅರ್ಥವೇನೆಂಬುದನ್ನು ನಿರ್ಧರಿಸಿಕೊಳ್ಳಬೇಕು. χειρόγραφον (*cheirographon*, "ಸಾಲದ ಪತ್ರ") ಎಂಬ ಪದವು "ಒಂದು ಹಸ್ತ ಲಿಖಿತ ದಸ್ತಾವೇಜು [ವಿಶೇಷವಾಗಿ] ಸಾಲ ಮಾಡಿರುವದರ ಪತ್ರ, *ಲೆಕ್ಕ, ಸಾಲಗಳ ದಾಖಲೆ*"[55] ಎಂದು ಅರ್ಥನಿರೂಪಿಸಲ್ಪಟ್ಟಿರುತ್ತದೆ. "ಆಜ್ಞಾರೂಪವಾಗಿದ್ದಂಥ" ಎಂಬುದು δόγμα (*dogma*) ಎಂಬ ಪದದಿಂದ ಬಂದದ್ದಾಗಿದೆ, ಕೈಕೊಂಡು ನಡೆಯಬೇಕಾದ ನಿಯಮಗಳ ಅಥವಾ ವಿಧಿಗಳ ಕುರಿತಾಗಿ ಒಂದು ಅಧಿಕೃತವಾದ ಹೇಳಿಕೆ . . . ರೂಪರೇಷೆಗೊಳಿಸಲ್ಪಟ್ಟಿರುವ *ಶಾಸನ, ತೀರ್ಮಾನ, ಆಜ್ಞೆಯ* ಸಂಗ್ರಹ" ಎಂದು ಅರ್ಥನಿರೂಪಿಸಲ್ಪಟ್ಟಿರುತ್ತದೆ.[56]

"ಆಜ್ಞಾರೂಪವಾದ ಪತ್ರ" ಎಂಬುದು "ಶಾಸನಗಳನ್ನು" ಸೂಚಿಸುತ್ತದೆಂಬದನ್ನು ಅನೇಕ

ವ್ಯಾಖ್ಯಾನಕಾರರು ಹಾಗೂ ಅನುವಾದಕರು ಒಪ್ಪಿಕೊಳ್ಳುತ್ತಾರೆ. ಇದು ಸರಿಯಾದದ್ದು ಆಗಿದ್ದಲ್ಲಿ, "ಆಜ್ಞಾರೂಪವಾದ ಪತ್ರ" ಎಂಬುದನು ಹಸ್ತ ಲಿಖಿತ ರೂಪದಲ್ಲಿ ಕಾಣಿಸಿಕೊಳ್ಳುವ ವಿಧಿಗಳು ಅಥವಾ ಶಾಸನಗಳನ್ನು ಸೂಚಿಸುತ್ತದೆಂದಾಗುತ್ತದೆ. ಈ ವಿಷಯದಲ್ಲಿ, NASBಯ "ಶಾಸನಗಳನ್ನೊಳಗೊಂಡ ಆಜ್ಞಾರೂಪವಾದ ಪತ್ರ" ಎಂಬ ಅನುವಾದವು ನಿಖರವಾಗಿರುತ್ತದೆ.

ವ್ಯಾಖ್ಯಾನಕಾರರು ಈ ಪದಗುಚ್ಛವನ್ನು ಬೇರೆ ಬೇರೆ ರೀತಿಗಳಲ್ಲಿ ಅರ್ಥನಿರೂಪಣೆ ಮಾಡುತ್ತಾರೆ. ಇತರ ಅಭಿಪ್ರಾಯಗಳೊಳಗೆ, ಐದು ಪ್ರಮುಖ ಅರ್ಥನಿರೂಪಣೆಗಳಿರುತ್ತವೆ: (1) ಕೊಲೊಸ್ಸೆಯವರ ಪಾಪಗಳ ಸಾಲದ ವಿವರಗಳನ್ನೊಳಗೊಂಡ ಒಂದು ದಾಖಲೆಯನ್ನು ಸೂಚಿಸಿ ಪೌಲನು ಹೇಳಿದನು. (2) ಆತನು ಒಂದು ವಾಯಿದೆ ಪತ್ರವನ್ನು, ಶರತ್ತುಗಳನ್ನು ಪಾಲಿಸುತ್ತೇವೆಂಬ ಒಂದು ಸಹಿ ಹಾಕಲ್ಪಟ್ಟ ವಾಗ್ದಾನವನ್ನು ಸೂಚಿಸಿ ಹೇಳಿದನು. (3) ಆತನು ಕಕೊಲೊಸ್ಸೆಯವರಿಗೆ ವಿರುದ್ಧವಾಗಿ "ಶಾಶ್ವತ ಸಾಕ್ಷಿಯಾಗಿ ನಿಂತಿದ್ದಂಥ ಒಂದು ಸಾಲಗಾರರೆಂಬ ಸಹಿ ಹಾಕಲ್ಪಟ್ಟ ಅರಿಕೆ"ಯೆಂಬ ಸೂಚ್ಯಾರ್ಥದಲ್ಲಿ ಹೇಳಿದನು.[57] (4) ಆತನು ಸಿನಾಯ್ ಪರ್ವತದಲ್ಲಿ ದೇವರು ಇಸ್ರಾಯೇಲ್ಯರಿಗೆ ಕೊಟ್ಟ ಧರ್ಮಶಾಸ್ತ್ರ ಎಂಬ ಅರ್ಥದಲ್ಲಿ ಹೇಳಿದನು, ಅದು ಶಿಲುಬೆಗೆ ಜಡಿಯಲ್ಪಟ್ಟದ್ದಾಗಿ ಅಂತ್ಯಗೊಂಡಿತು – ಅಥವಾ, ಸಾಂಕೇತಿಕವಾಗಿ, ಮರಣಿಸಿತು. (5) ಆತನು ಎರಡು ಬೇರೆ ಬೇರೆ ಭಾವನೆಗಳನ್ನು ಚರ್ಚಿಸುತ್ತಿದ್ದನು.

ನಾಲ್ಕನೆಯ ಅರ್ಥನಿರೂಪಣೆಯ ವಿಯಷದಲ್ಲಿ Hendriksen ಹೀಗೆ ಬರೆಯುತ್ತಾನೆ, "ಈ ಕೈಯಿಂದ ಬರೆದ ಅಥವಾ ಲಿಖಿತ ದಸ್ತಾವೇಜು ಸ್ಪಷ್ಟವಾಗಿ ಧರ್ಮಶಾಸ್ತ್ರವಾಗಿರುತ್ತದೆ (cf. ಎಫೆಸ 2:15)."[58] ಆತನು ವಿವರಿಸುತ್ತಾ ಹೀಗೆ ಹೇಳುತ್ತಾನೆ, "ಶಿಲುಬೆಯ ಮೂಲಕ ಅಳಿಸಿ ಹಾಕಲ್ಪಟ್ಟಿರುವಂಥದ್ದು 'ನಮ್ಮ ಸಹಿಯನ್ನು ಹೊಂದಿರುವ ಸಾಲದ ಒಂದು ಪತ್ರ' ಆಗಿರುವದಿಲ್ಲ ಆದರೆ ಅದು 'ಅದರ ಬೇಡಿಕೆಗಳನ್ನೊಳಗೊಂಡಂಥ ಧರ್ಮಶಾಸ್ತ್ರದ ಆಜ್ಞೆಗಳಾಗಿರುತ್ತವೆ.'"[59]

Carson ಸಹ ಅದೇ ಮುಕ್ತಾಯಕ್ಕೆ ಬರುತ್ತಾನೆ: "ಹೀಗೆ ನಿರ್ದಿಷ್ಟವಾದ ಶಾಸನಗಳನ್ನೊಳಗೊಂಡ ದೇವರ ಧರ್ಮಶಾಸ್ತ್ರವು ನಾವು ಸಾಲಗಾರರೆಂಬುದಕ್ಕೆ ದೇವರ ಹೇಳಿಕೆಯಾಗಿ ನಿಲ್ಲುತ್ತದೆ . . . ದೇವರ ಧರ್ಮಶಾಸ್ತ್ರವು ನಮ್ಮನ್ನು ಅಪರಾಧಿಗಳೆಂದು ಹೇಳಿದ್ದು ಮಾತ್ರವಲ್ಲದೆ, ಅಂಥ ಅಪರಾಧಕ್ಕೆ ಸಿಕ್ಕಬೇಕಾದ ದಂಡನೆಯಾಗಬೇಕೆಂದು ಕೂಗುವದಾಗಿತ್ತು. ಆದ್ದರಿಂದ ಆ ಋಣಪತ್ರವು ನಮ್ಮ ವೈರಿಯಾಗಿತ್ತು."[60]

ಮುಂದಿನ 15 ಮತ್ತು 17 ವಚನಗಳು, ಪೌಲನು ಧರ್ಮಶಾಸ್ತ್ರದ ಕುರಿತು ಮಾತಾಡುತ್ತಿದ್ದಾನೆಂಬುದನ್ನು ತೋರಿಸಿ ಕೊಡುತ್ತವೆ. 16ನೇ ವಚನದ "ಹೀಗಿರುವದರಿಂದ" (οὖν, *oun*) ಎಂಬುದು 15ನೇ ವಚನವನ್ನು ಸೂಚಿಸುತ್ತದೆ, ಅದು 14ನೇ ವಚನದಲ್ಲಿ ಪೌಲನು ಹೇಳಿದ "ಆಜ್ಞಾರೂಪದ ಪತ್ರ" ಎಂಬುದರ ಅರ್ಥವನ್ನು ವಿವರಿಸುತ್ತದೆ. "ಆಜ್ಞಾರೂಪದ ಪತ್ರವು" ಅಳಿಸಿಹಾಕಲ್ಪಟ್ಟು ಶಿಲುಬೆಗೆ ಜಡಿಯಲ್ಪಟ್ಟಿರುತ್ತದೆ. ಯೇಸುವು ದೊರೆಗಳನ್ನು ಮತ್ತು ಅಧಿಕಾರಿಗಳನ್ನು ನಿರಾಯುಧರನ್ನಾಗಿ ಮಾಡಿದನು. ಈ ಸತ್ಯದ ಆಧಾರದಲ್ಲಿ, ಕೊಲೊಸ್ಸೆಯವರು ಹಸ್ತಲಿಖಿತ ಆಜ್ಞಾರೂಪದ ಪತ್ರದ ವಿಷಯದಲ್ಲಿ ತಮಗೆ ತೀರ್ಪು ಮಾಡುವಂತೆ ಯಾರಿಗೂ ಅವಕಾಶ ಕೊಡಬಾರದಿತ್ತು. 16ನೇ ವಚನದ ಪ್ರಕಾರ,

ಇವುಗಳಲ್ಲಿ ಆಹಾರ, ಪಾನ, ಹಬ್ಬಗಳು, ಅಮಾವಾಸ್ಯೆಯ ಆಚರಣೆಗಳು, ಮತ್ತು ಸಬ್ಬತ್ ದಿನದ ಪಾಲನೆ ಇವುಗಳ ಕುರಿತ ವಿಧಿಗಳು ಸೇರಿದ್ದವು. ದೇವರು ಮೋಶೆಯ ಮೂಲಕ ಕೊಟ್ಟ ಧರ್ಮಶಾಸ್ತ್ರವು (ವಿಗ್ರಹಾರಾಧಕ ಜನಾಂಗದ ನಿಯಮಗಳಲ್ಲ) ಅಂಥವುಗಳನ್ನು ಕೈಕೊಂಡು ನಡೆಯಬೇಕೆಂದು ಹೇಳುವದಾಗಿತ್ತು.[61] ಈ ಧಾರ್ಮಿಕ ಆಚಾರಗಳು ಮುಂದೆ ಬರಬೇಕಾಗಿದ್ದ ಒಂದಕ್ಕೆ ಛಾಯೆಗಳಾಗಿದ್ದವೆಂಬದಾಗಿ 17ನೇ ವಚನವು ಸೂಚಿಸುತ್ತದೆ. ವಿಗ್ರಹಾರಾಧಕ ಜನಾಂಗದ ಆಚಾರಗಳು ಬರಲಿದ್ದ ಕಾರ್ಯಗಳ ಛಾಯೆಯಾಗಿರಲಿಲ್ಲ, ಆದರೆ ಧರ್ಮಶಾಸ್ತ್ರವು ಹೊಸ ಒಡಂಬಡಿಕೆಯ ಬೋಧನೆಯಲ್ಲಿ ಕಂಡು ಬರುವ ಭವಿಷ್ಯದ ವಾಸ್ತವಿಕತೆಗಳ ಛಾಯೆಯಾಗಿತ್ತು (ಇಬ್ರಿಯ 10:1).

ಪೌಲನು ಮೋಶೆಯ ಧರ್ಮಶಾಸ್ತ್ರವನ್ನು ಸೂಚಿಸಿ ಹೇಳುತ್ತಿದ್ದಾನೆಂದು ಅನೇಕ ವ್ಯಾಖ್ಯಾನಕಾರರು ನಂಬುತ್ತಾರೆ. ಧರ್ಮಶಾಸ್ತ್ರವು ಬರೆಯುವಂತೆ ದೇವರು ಮೋಶೆಗೆ ಆಜ್ಞಾಪಿಸಿದ ಕೈಯಿಂದ ಬರೆಯಲ್ಪಟ್ಟ ದಸ್ತಾವೇಜು ಆಗಿತ್ತು (ವಿಮೋಚನಕಾಂಡ 34:27, 28). ಇಸ್ರಾಯೇಲ್ಯರು ಬರೆಯಲ್ಪಟ್ಟಿದ್ದೆಲ್ಲವನ್ನೂ ಕೈಕೊಂಡು ನಡೆಯಬೇಕಾಗಿತ್ತು (ಧರ್ಮೋಪದೇಶಕಾಂಡ 28:58; 30:10; ಯೆಹೋಶುವ 1:8). ಇದು ಕೇವಲ ಹಳೆಯ ಒಡಂಬಡಿಕೆಯ ಧರ್ಮಶಾಸ್ತ್ರಕ್ಕೆ ಮಾತ್ರ ಅನ್ವಯಿಸುತ್ತದೆ, ಯಾಕೆಂದರೆ ಹೊಸ ಒಡಂಬಡಿಕೆಯು ಆಗ ಇನ್ನೂ ಬರೆಯಲ್ಪಟ್ಟಿರಲಿಲ್ಲ.

ಧರ್ಮಶಾಸ್ತ್ರವು ಅದರ ಅಡಿಯಲ್ಲಿ ಜೀವಿಸಿದವರಿಗೆ ಒಂದು ಅಳತೆಗೋಲಿನಂತಿತ್ತು. ಸುನ್ನತಿ ಹೊಂದಿದವರೆಲ್ಲರೂ ಇಡೀ ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವ ಹಂಗಿನಲ್ಲಿದ್ದರು (ಗಲಾತ್ಯ 5:3). "ಸಾಲ"ವು ಧರ್ಮಶಾಸ್ತ್ರದ ಅಧೀನದಲ್ಲಿ ಜೀವಿಸುವವರ ಪಾಪ ಆಗಿರಲಿಲ್ಲ. ಬದಲಾಗಿ, "ಸಾಲ"ವು ಹಳೆಯ ಒಡಂಬಡಿಕೆಯು ಅಧೀನದಲ್ಲಿ ಜೀವಿಸುವವರಿಗಿದ್ದ ಹಂಗು, ಧರ್ಮಶಾಸ್ತ್ರದ ಪ್ರತಿಯೊಂದು ಆಜ್ಞೆಯನ್ನು ದೋಷವಿಲ್ಲದೆ ಕೈಕೊಂಡು ನಡೆಯಲೇ ಬೇಕಾದ ಸಾಲಗಾರಿಕೆಯ ಭಾರ ಆಗಿತ್ತು. ಧರ್ಮಶಾಸ್ತ್ರದ ಅಧೀನದಲ್ಲಿದ್ದವರೆಲ್ಲರೂ ಅದನ್ನು ಮೀರಿದ್ದರು ಮತ್ತು ಮರಣಕ್ಕೆ ಯೋಗ್ಯರಾಗಿದ್ದರು (ರೋಮಾ 6:23; ಯಾಕೋಬ 1:13–15). ಜೀವ ಕೊಡುವದಕ್ಕೆ ಶಕ್ತವಾಗಿದ್ದಾಗ್ಯೂ (2 ಕೊರಿಂಥ 3:7–9), ಮರಣ ವಿಧಿಸುವ ಸೇವೆಯಾಗಿ, ಧರ್ಮಶಾಸ್ತ್ರವು ತನ್ನ ಅಧೀನದಲ್ಲಿರುವವರೆಲ್ಲರ ಪಾಪದ ನಿಮಿತ್ತದಿಂದ ಮರಣ ದಂಡನೆಯನ್ನುಂಟು ಮಾಡಿತ್ತು (ರೋಮಾ 7:9–11). ಮೋಶೆಯ ಮೂಲಕ ಕೊಡಲ್ಪಟ್ಟ ಧರ್ಮಶಾಸ್ತ್ರದ ವಿಧಿಗಳ ಆಧಾರದ ಮೇಲೆ, ಪ್ರತಿಯೊಬ್ಬನೂ ಪಾಪಕ್ಕೊಳಗಾದವನೆಂದು ತೀರ್ಮಾನಿಸಲ್ಪಟ್ಟಿದ್ದನು (ಗಲಾತ್ಯ 3:22). "ಸಾಲ"ವು ಧರ್ಮಶಾಸ್ತ್ರದ ಶಾಸನಗಳನ್ನು ಕೈಕೊಂಡು ನಡೆಯಬೇಕೆಂದು ದೇವರ ಜನರ ಮೇಲೆ ಹೇರಲಾಗಿದ್ದ ಹಂಗು ಆಗಿತ್ತು.

## "ನಮ್ಮ ಮೇಲೆ ದೋಷಾರೋಪಣೆ ಮಾಡಿದಂಥ"

ಧರ್ಮಶಾಸ್ತ್ರವು ಯಾವ ವಿಧದಲ್ಲಿ **ನಮ್ಮ ಮೇಲೆ ದೋಷಾರೋಪಣೆ** ಮಾಡಿತು? "ದೋಷಾರೋಪಣೆ ಮಾಡಿದಂಥ" (ὑπεναντίος, *hupenantios*) ಎಂಬುದು "ತೀವ್ರವಾದ ವಿರೋಧ" ಎಂಬರ್ಥವನ್ನು ಸೂಚಿಸುವದಾಗಿದ್ದು ಇಲ್ಲಿ ಮತ್ತು ಇಬ್ರಿಯ 10:27ರಲ್ಲಿ ಮಾತ್ರವೇ ಕಂಡು ಬರುತ್ತದೆ, ಅಲ್ಲಿ ಅದು "ವಿರೋಧಿಗಳು" ಎಂದು ಅನುವಾದಿಸಲ್ಪಟ್ಟಿದೆ. ಧರ್ಮಶಾಸ್ತ್ರವು ಹಿತಕರವಾಗಿತ್ತು (ನೋಡಿರಿ ರೋಮಾ 7:12); ಹೇಗೂ, ಮಾನವ

ಜನಾಂಗವು ಪಾಪದಿಂದ ತುಂಬಿತ್ತು. ಈ ಕಾರಣಕ್ಕಾಗಿ, ಧರ್ಮಶಾಸ್ತ್ರದ ಒಳ್ಳೇ ಮಾನದಂಡವು ಮನುಷ್ಯನ ಪಾಪವನ್ನು ಪ್ರಕಟಗೊಳಿಸಿತು (ರೋಮಾ 7:8-11). ಅದನ್ನು ಅಸಡ್ಡೆ ಮಾಡುವವರಿಗೆ ಕನಿಕರವಿಲ್ಲದೆ ಮರಣದಂಡನೆ ಆಗುತ್ತಿತ್ತು (ಇಬ್ರಿಯ 10:28). ಇದು ಇಸ್ರಾಯೇಲ್ಯರಿಗೆ ಸಹಿಸಿಕೊಳ್ಳದಷ್ಟು ಅಧಿಕವಾಗಿತ್ತು ಯಾಕೆಂದರೆ ಅದಕ್ಕೆ ದೋಷವಿಲ್ಲದ ವಿಧೇಯತೆಯ ಅಗತ್ಯವಿತ್ತು (ಯಾಕೋಬ 2:10). ಆದುದರಿಂದ, ಧರ್ಮಶಾಸ್ತ್ರವು ತನ್ನ ಅಧೀನದಲ್ಲಿರುವವರನ್ನು ಶಪಿಸಿತು (ಗಲಾತ್ಯ 3:10). ಯೆರೂಸಲೇಮಿನಲ್ಲಿದ್ದ ಯೆಹೂದಿ ಕ್ರೈಸ್ತರಿಗೆ ಪೇತ್ರನು ಭರವಸೆ ಕೊಟ್ಟಿದ್ದೇನೆಂದರೆ ಧರ್ಮಶಾಸ್ತ್ರವು "ನಮ್ಮ ಪಿತೃಗಳಾಗಲಿ ನಾವಾಗಲಿ ಹೊರಲಾರದ ನೊಗ" ಆಗಿತ್ತು ಎಂಬದೆ (ಅಪೊಸ್ತಲರ ಕೃತ್ಯಗಳು 15:10b). ಅದರಿಂದ ನೀತಿವಂತರೆಂಬ ನಿರ್ಣಯವನ್ನು ಹೊಂದಬೇಕೆಂದು ಅಪೇಕ್ಷಿಸುವವರು ಕ್ರಿಸ್ತನಿಂದ ಬೇರ್ಪಟ್ಟವರು ಮತ್ತು ಕೃಪಾಶ್ರಯದೊಳಗಿಂದ ಬಿದ್ದವರಾಗಿದ್ದಾರೆ (ಗಲಾತ್ಯ 5:4).

ಬಹಳಷ್ಟು ಸಂದರ್ಭಗಳಲ್ಲಿ ಧರ್ಮಶಾಸ್ತ್ರವನ್ನು ಮೀರಿದ್ದಕ್ಕೆ ಮರಣ ದಂಡನೆ ವಿಧಿಸಲ್ಪಡುತ್ತಿತ್ತು. ದಶಾಜ್ಞೆಗಳಲ್ಲಿ ಏಳು ಆಜ್ಞೆಗಳು ಅವುಗಳನ್ನ ಉಲ್ಲಂಘಿಸಿದವರಿಗೆ ಮರಣ ದಂಡನೆಯನ್ನು ಬೇಡುವಂಥವುಗಳಾಗಿದ್ದವು. ಮೊದಲ ಮೂರು ಆಜ್ಞೆಗಳಲ್ಲಿ ನಿಷೇಧಿಸಲ್ಪಟ್ಟ ಪ್ರಕಾರವಾಗಿ, ಇಸ್ರಾಯೇಲ್ಯರು ಬೇರೆ ದೇವರುಗಳನ್ನು ಪೂಜಿಸಿದ್ದಾದರೆ, ಅವರಿಗೆ ಮರಣದಂಡನೆ ವಿಧಿಸಬೇಕಾಗಿತ್ತು (ಧರ್ಮೋಪದೇಶಕಾಂಡ 17:2-5). ಅಲ್ಲದೆ ಸಬ್ಬತ್ ದಿನದಲ್ಲಿ ಕೆಲಸ ಮಾಡುವ ಮೂಲಕ ನಾಲ್ಕನೆಯ ಆಜ್ಞೆಯನ್ನು ಉಲ್ಲಂಘಿಸಿದವರಿಗೆ (ವಿಮೋಚನಕಾಂಡ 31:15), ಅಥವಾ ತಮ್ಮ ತಂದೆತಾಯಿಗಳನ್ನು ಸನ್ಮಾನಿಸುವ ಬದಲಾಗಿ ಅವರನ್ನು ಶಪಿಸುವ ಮೂಲಕ ಐದನೆಯ ಆಜ್ಞೆಯನ್ನು ಉಲ್ಲಂಘಿಸಿದವರಿಗೆ (ವಿಮೋಚನಕಾಂಡ 21:15, 17), ಅಥವಾ ನರಹತ್ಯೆ ಮಾಡಿ ಆರನೆಯ ಆಜ್ಞೆಯನ್ನು (ಅರಣ್ಯಕಾಂಡ 35:30, 31), ಅಥವಾ ವ್ಯಭಿಚಾರ ಮಾಡುವ ಮೂಲಕ ಏಳನೆಯ ಆಜ್ಞೆಯನ್ನು ಉಲ್ಲಂಘಿಸಿದವರಿಗೆ (ಧರ್ಮೋಪದೇಶಕಾಂಡ 22:22-25) ಅದೇ ದಂಡನೆಯನ್ನು ವಿಧಿಸಬೇಕೆಂದು ಹೇಳಲ್ಪಟ್ಟಿರುತ್ತದೆ.

ಅಬ್ರಹಾಮನ ಸಂತಾನದವರಿಗೆ ದೇವರು ವಾಗ್ದಾನ ಮಾಡಿದ್ದ ಆಶೀರ್ವಾದಗಳನ್ನು ತರುವ ಬದಲಾಗಿ (ಆದಿಕಾಂಡ 22:18; ಗಲಾತ್ಯ 3:16), ಧರ್ಮಶಾಸ್ತ್ರವು ತನ್ನ ಅಧೀನದಲ್ಲಿರುವವನ್ನು ಶಪಿಸಿತು (ಗಲಾತ್ಯ 3:10). "ಆ ಮೊದಲನೆಯ ಒಡಂಬಡಿಕೆಯು ದೋಷವಿಲ್ಲದ್ದಾಗಿದ್ದರೆ ಎರಡನೆಯ ಒಡಂಬಡಿಕೆಗೆ ಅವಕಾಶವು ಇರುತ್ತಿರಲಿಲ್ಲ" (ಇಬ್ರಿಯ 8:7). ಧರ್ಮಶಾಸ್ತ್ರವು ಯಾವದನ್ನು ಸಾಧಿಸಲಾರದೆ ಹೋಯಿತೋ ಅದರಲ್ಲಿ ಅದರ "ನಿರ್ಬಲತೆ ಮತ್ತು ನಿಷ್ಪ್ರಯೋಜಕ"ವು ತೋರಿಬರುತ್ತದೆ (ಇಬ್ರಿಯ 7:18, 19). ಅದಕ್ಕೆ ಜನರನ್ನು ವಿಮೋಚಿಸುವದಕ್ಕಾಗಲಿಲ್ಲ (ಅಪೊಸ್ತಲರ ಕೃತ್ಯಗಳು 13:39), ನೀತಿವಂತರೆಂದು ನಿರ್ಣಯಿಸುವದಕ್ಕಾಗಲಿಲ್ಲ (ರೋಮಾ 3:20; ಗಲಾತ್ಯ 2:16; 3:11), ಬಾಧ್ಯತೆಯನ್ನು ಕೊಡುವದಕ್ಕಾಗಲಿಲ್ಲ (ಗಲಾತ್ಯ 3:18; 1 ಪೇತ್ರ 1:3, 4), ಜೀವವನ್ನು ಕೊಡುವದಕ್ಕಾಗಲಿಲ್ಲ (ಗಲಾತ್ಯ 3:21), ಒಬ್ಬ ವ್ಯಕ್ತಿಯನ್ನು ನೀತಿವಂತನನ್ನಾಗಿಸುವದಕ್ಕೆ ಆಗಲಿಲ್ಲ (ಗಲಾತ್ಯ 3:21), ಕೃಪೆಯನ್ನು ಒದಗಿಸುವದಕ್ಕೆ (ಗಲಾತ್ಯ 5:4), ಜನರನ್ನು ಬಾಧ್ಯಸ್ಥರನ್ನಾಗಿ ಮಾಡುವದಕ್ಕೆ (ರೋಮಾ 4:14), ಪರಿಪೂರ್ಣಗೊಳಿಸುವದಕ್ಕೆ (ಇಬ್ರಿಯ 7:19), ಪಾಪಗಳನ್ನು

ಕ್ಷಮಿಸುವದಕ್ಕೆ (ಇಬ್ರಿಯ 10:4), ಅಥವಾ ಕನಿಕರವನ್ನ ಒದಗಿಸುವದಕ್ಕೆ (ಇಬ್ರಿಯ 10:28) ಆಗಲಿಲ್ಲ.

## "ಅದನ್ನು ಶಿಲುಬೆಗೆ ಜಡಿದು ಇಲ್ಲದಂತಾಗ ಮಾಡಿದನು"

ಧರ್ಮಶಾಸ್ತ್ರವು ತನ್ನ ಉದ್ದೇಶವನ್ನು ನೆರವೇರಿಸಿತ್ತಾದರೂ, ಅದಕ್ಕೆ ಮಾಡುವದಕ್ಕಾಗದ್ದು ಬಹಳಷ್ಟಿತ್ತು. ಹೀಗಿರುವದರಿಂದ, ದೇವರ ಯೋಜನೆಗೆ ಅನುಗುಣವಾಗಿ, ಪೌಲನು ಹೀಗೆ ಹೇಳುವದಕ್ಕೆ ಶಕ್ತನಾಗಿದ್ದನು, **ಅದನ್ನು ಶಿಲುಬೆಗೆ ಜಡಿದು ಇಲ್ಲದಂತಾಗ ಮಾಡಿದನು**. "ಆತನು" ಎಂಬುದು ದೇವರನ್ನು ಸೂಚಿಸುತ್ತದೆ, ಆತನು ಆಜ್ಞಾರೂಪವಾಗಿದ್ದ ಪತ್ರವನ್ನು ಅಳಿಸಿ ಹಾಕುವದಕ್ಕೆ ಶಿಲುಬೆಯ ಮೂಲಕ ಕಾರ್ಯ ಮಾಡಿದನು. 12ನೇ ವಚನದ "ದೇವರು" ಎಂಬುದು 13ರಿಂದ 15 ವಚನಗಳಲ್ಲಿನ "ಆತನು" ಎಂಬುದಕ್ಕೆ ಪೂರ್ವಭಾವಿ ಪದವಾಗಿರುತ್ತದೆ. KJVಯಲ್ಲಿ ಕಾಣಿಸಿಕೊಳ್ಳುವ "ತನ್ನ ಶಿಲುಬೆಗೆ" ಎಂಬುದು "ಅದನ್ನ ಇಲ್ಲದಂತಾಗ ಮಾಡಿದ" "ಆತನು" (NASB) ಯೇಸು ಆಗಿದ್ದಾನೆಂದು ಸೂಚಿಸುತ್ತದೆ. ಹೇಗೂ, ಇತ್ತೀಚಿನ ಬಹುಪಾಲು ತರ್ಜುಮೆಗಳಲ್ಲಿ ಕಾಣಿಸಿಕೊಳ್ಳುವಂಥ "ಶಿಲುಬೆ" ಎಂಬುದಕ್ಕೆ, "ತನ್ನ ಶಿಲುಬೆಗೆ" ಎಂಬುದಕ್ಕಿಂತಲೂ ಉತ್ತಮವಾಗಿ ಗ್ರೀಕ್ ಹಸ್ತಪ್ರತಿಗಳ ಪುರಾವೆಯು ಇರುತ್ತದೆ.

ನಂಬುವದೇನೆಂದರೆ ಪೌಲನು 14ನೇ ವಚನದಲ್ಲಿ ದೇವರು ಎಂಬುದರಿಂದ ಕ್ರಿಸ್ತನು ಎಂಬುದಕ್ಕೆ ಬದಲಾಯಿಸುತ್ತಾನೆ.[62] Carson ಸರಿಯಾಗಿಯೇ ಆಕ್ಷೇಪಿಸುತ್ತಾನೆ:

> ಆದರೆ ವಿಷಯದಲ್ಲಿ ಅಂಥ ಬದಲಾವಣೆ ಮಾಡುವದನ್ನು ಆಧಾರವಾಕ್ಯಗೊಳಿಸಿದರೆ ಮೊದಲನಿಂದ ಕಡೇ ವರೆಗೂ ಒಂದೇ ವಿಷಯವಿರುವ ವಾಕ್ಯಭಾಗದ ವ್ಯಾಕರಣದೊಂದಿಗೆ ಸ್ವೇಚ್ಛಾಮನಸ್ಸಿನಿಂದ ಮಧ್ಯಪ್ರವೇಶಿಸಿದಂತಾಗುವದು. ಹೀಗೆ ನಮ್ಮನ್ನು ಕ್ರಿಸ್ತನೊಂದಿಗೆ ಎಬ್ಬಿಸಿದವನಾಗಿ, 13ನೇ ವಚನದಲ್ಲಿ "ದೇವರು" ವಿಷಯವಾಗಿರುತ್ತಾನೆ. ಆದರೆ 13ನೇ ವಚನದ ಕೃದಂತವು 14ನೇ ವಚನದ ಕೃದಂತಕ್ಕೆ ಸಮಾನಾರ್ಥವುಳ್ಳದ್ದಾಗಿದ್ದು, ಸಹಜವಾಗಿ ಅವುಗಳಲ್ಲಿ ವಿಷಯವು ಒಂದೇ ಆಗಿರುವದು. ಅಷ್ಟುಮಾತ್ರವಲ್ಲದೆ *ತೆಗೆದುಕೊಂಡು*, *erken* ಎಂಬುದಕ್ಕೆ *ಮತ್ತು* ಎಂಬುದು, ಅದನ್ನು ಮುಂಚಿನ ವಚನದೊಂದಿಗೆ ಜೋಡಿಸುತ್ತದೆ ಮತ್ತು ಎರಡರ ವಿಷಯವು ಒಂದೇ ಎಂಬ ನಿರ್ಧಾರಕ್ಕೆ ನಡಿಸುತ್ತದೆ.[63]

ಧರ್ಮಶಾಸ್ತ್ರವು ಇಲ್ಲದಂತಾಗ ಮಾಡಲ್ಪಟ್ಟಿದೆ ಎಂಬದನ್ನು ಬೋಧಿಸುವದರಲ್ಲಿ ಮೊದಲಿನಿಂದ ಕಡೇ ತನಕ ಸ್ಥಿರತೆಯಿಂದಿರುತ್ತದೆ. ಅನ್ಯಜನಾಂಗದ ಕ್ರೈಸ್ತರ ಮೇಲೆ ಧರ್ಮಶಾಸ್ತ್ರವನ್ನು ಹೇರುವದಕ್ಕೆ ಅಪೇಕ್ಷಿಸುತ್ತಿದ್ದ ಯೆಹೂದ್ಯ ಕ್ರೈಸ್ತರಲ್ಲಿ ಕೆಲವರು ಹೀಗೆ ಹೇಳಿದರು, "ಅನ್ಯಜನರಿಗೆ ಸುನ್ನತಿಮಾಡಿಸಬೇಕು ಮತ್ತು ಮೋಶೆಯ ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವದಕ್ಕೆ ಅವರಿಗೆ ಅಪ್ಪಣೆಕೊಡಬೇಕು" (ಅಪೊಸ್ತಲರ ಕೃತ್ಯಗಳು 15:5). ಅಪೊಸ್ತಲರು ಮತ್ತು ಯೆರೂಸಲೇಮಿನಲ್ಲಿದ್ದ ಹಿರಿಯರ ಪ್ರತ್ಯುತ್ತರವು ಹೀಗಿತ್ತು – "ನಾವು ಅಪ್ಪಣೆ ಕೊಡಲಿಲ್ಲ" (ಅಪೊಸ್ತಲರ ಕೃತ್ಯಗಳು 15:24). ಸ್ಪಷ್ಟವಾಗಿರುವ ಪ್ರಕಾರ, ಅವರು ತಮ್ಮ ಮಕ್ಕಳಿಗೆ ಸುನ್ನತಿ ಮಾಡಿಸಬೇಕೆಂದು ಅಥವಾ ಧರ್ಮಶಾಸ್ತ್ರವನ್ನ ಕೈಕೊಂಡು ನಡೆಯಬೇಕೆಂದು ಅನ್ಯಜನರಿಗೆ ಅಪ್ಪಣೆಯನ್ನು ಕೊಡಲಿಲ್ಲ.

ಕ್ರೈಸ್ತರು ಧರ್ಮಶಾಸ್ತ್ರಾಧೀನರಲ್ಲ ಎಂಬುದನ್ನು ಕಲಿಸುವ ಇತರ ವಾಕ್ಯಭಾಗಗಳು ಈ ಕೆಳಗಿನಂತಿವೆ:

"ನೀವು ಧರ್ಮಶಾಸ್ತ್ರಕ್ಕೆ ಅಧೀನರಲ್ಲ" (ರೋಮಾ 6:14).
"ನಾವು ಧರ್ಮಶಾಸ್ತ್ರಾಧೀನರಲ್ಲ" (ರೋಮಾ 6:15).
"'ನಮ್ಮನ್ನು ವಶಮಾಡಿಕೊಂಡಿದ್ದ ಧರ್ಮಶಾಸ್ತ್ರದ ಪಾಲಿಗೆ ನಾವು ಸತ್ತಕಾರಣ ಆ ಧರ್ಮಶಾಸ್ತ್ರದಿಂದ ವಿಮುಕ್ತರಾಗಿದ್ದೇವೆ" (ರೋಮಾ 7:6).
ಕಲ್ಲಿನ ಮೇಲೆ ಲಿಖಿತವಾದ ಒಡಂಬಡಿಕೆಯು "ಕುಂದಿಹೋಗುವಂಥದ್ದು" (2 ಕೊರಿಂಥ 3:7-13).
"ಧರ್ಮಪ್ರಮಾಣದ ಪಾಲಿಗೆ ಸತ್ತೆನು" (ಗಲಾತ್ಯ 2:19).
"ನಾವಿನ್ನು ಕಾಯುವವನ [ಧರ್ಮಶಾಸ್ತ್ರದ] ಕೈಕೆಳಗಿರುವವರಲ್ಲ" (ಗಲಾತ್ಯ 3:25).
ನಾವು "ಸೀನಾಯಿ ಪರ್ವತದಿಂದ ಉತ್ಪನ್ನವಾದ" ಒಡಂಬಡಿಕೆಯನ್ನು ಸೂಚಿಸುವ, "ದಾಸಿಯ ಮಕ್ಕಳಲ್ಲ" (ಗಲಾತ್ಯ 4:31).
"ಆತನು [ಕ್ರಿಸ್ತನು] ತನ್ನ ಶರೀರವನ್ನು ಸಮರ್ಪಿಸಿದ್ದರಲ್ಲಿ ವಿಧಿರೂಪವಾದ ಆಜ್ಞೆಗಳುಳ್ಳ ಧರ್ಮಶಾಸ್ತ್ರವನ್ನು ತೆಗೆದುಹಾಕಿ ಇದ್ದ ದ್ವೇಷವನ್ನು ಮುಗಿಸಿ ನಮ್ಮನ್ನು ಅಗಲಿಸಿದ್ದ ಅಡ್ಡಗೋಡೆಯನ್ನು ಕೆಡವಿಹಾಕಿದನು" (ಎಫೆಸ 2:14, 15).
"[ಧರ್ಮಶಾಸ್ತ್ರವು] ರದ್ದಾಗಿ ಹೋಯಿತು" (ಇಬ್ರಿಯ 7:18, 19).
"ಮೊದಲಿದ್ದದ್ದನ್ನು [ಒಡಂಬಡಿಕೆಯನ್ನು] ಹಳೇದಾಗಿ ಮಾಡಿದ್ದಾನೆ" (ಇಬ್ರಿಯ 8:13; ನೋಡಿರಿ ವ. 7).
"ಆತನು . . . ಮೊದಲನೆಯದನ್ನು ತೆಗೆದುಬಿಡುತ್ತಾನೆ" (ಇಬ್ರಿಯ 10:9).

ಹಳೆಯ ಒಡಂಬಡಿಕೆಯು "ಇಲ್ಲದಂತಾಗ ಮಾಡಿದ್ದ"ಕ್ಕಿಂತಲೂ ಹೆಚ್ಚಿನದನ್ನು ಒಳಗೊಂಡಿರುತ್ತದೆ. ಧರ್ಮಶಾಸ್ತ್ರವು ಹೆಚ್ಚಾಗಿ ವಿಮೋಚನಕಾಂಡ, ಯಾಜಕಕಾಂಡ, ಅರಣ್ಯಕಾಂಡ, ಮತ್ತು ಧರ್ಮೋಪದೇಶಕಾಂಡ ಪುಸ್ತಕಗಳಲ್ಲಿ ಕಂಡು ಬರುತ್ತದೆ. ಧರ್ಮಶಾಸ್ತ್ರದ ಅನ್ವಯಿಸುವಿಕೆಯು ಹಳೆಯ ಒಡಂಬಡಿಕೆಯ ಉಳಿದ ಪುಸ್ತಕಗಳಲ್ಲಿ ತಿಳಿಯಪಡಿಸಲ್ಪಟ್ಟಿದೆ. ಧರ್ಮಶಾಸ್ತ್ರದ ಪುಸ್ತಕಗಳ ಹೊರತಾಗಿ, ಹಳೆಯ ಒಡಂಬಡಿಕೆಯು ಇತಿಹಾಸ, ಕೀರ್ತನೆಗಳು, ಜ್ಞಾನೋಕ್ತಿಗಳು, ಮತ್ತು ಪ್ರವಾದನೆ ಇತ್ಯಾದಿಗಳನ್ನು ಒಳಗೊಂಡಿರುತ್ತದೆ. ಇವುಗಳಲ್ಲಿ ಕ್ರೈಸ್ತರಿಗಾಗಿ ಉಪಯುಕ್ತವಾದ ಉಪದೇಶ (ರೋಮಾ 15:4) ಮತ್ತು ನಿದರ್ಶನಗಳು (1 ಕೊರಿಂಥ 10:6, 11) ಇರುತ್ತವೆ. ಶಾಸ್ತ್ರಗಳಲ್ಲಿ ಕ್ರೈಸ್ತರು ಲಾಭ ಪಡೆದುಕೊಳ್ಳಬಹುದಾದ ಮೂಲಗಳಿರುತ್ತವೆ, ವಿಶೇಷವಾಗಿ ಯೋಬ, ಕೀರ್ತನೆಗಳು, ಜ್ಞಾನೋಕ್ತಿಗಳು, ಮತ್ತು ಪ್ರವಾದಿಗಳ ಪುಸ್ತಕಗಳಿರುತ್ತವೆ. ಇವುಗಳ ವಾಕ್ಯಭಾಗಗಳನ್ನು ಕ್ರೈಸ್ತರಿಗೆ ಉಪದೇಶ ಮತ್ತು ಆದರಣೆಯನ್ನು ನೀಡುವದಕ್ಕಾಗಿ ಪದೇ ಪದೇ ಅನ್ವಯಿಸಲ್ಪಟ್ಟಿರುತ್ತವೆ ಮತ್ತು ಉಲ್ಲೇಖಿಸಲ್ಪಟ್ಟಿರುತ್ತವೆ. ಧರ್ಮಶಾಸ್ತ್ರ, ಪ್ರವಾದಿಗಳು, ಮತ್ತು ಕೀರ್ತನೆಗಳು ಇತ್ಯಾದಿ ಪುಸ್ತಕಗಳನ್ನು ಯೇಸುವೇ ಕ್ರಿಸ್ತನು ಎಂಬದಾಗಿ ಸಾಭಿತುಪಡಿಸುವದಕ್ಕೆ ಬಳಸಬಹುದಾಗಿದೆ (ಲೂಕ 24:44; ಅಪೊಸ್ತಲರ ಕೃತ್ಯಗಳು

28:23), ಯಾಕೆಂದರೆ ಬಹುಪಾಲು ಪ್ರವಾದನೆಗಳು ಹೊಸ ಒಡಂಬಡಿಕೆಯಲ್ಲಿಯೇ ನೆರವೇರಿರುತ್ತವೆ (1 ಪೇತ್ರ 1:10-12). ಹೇಗೂ, ಧಾರ್ಮಿಕ ನಿಯಮಗಳನ್ನು ಮತ್ತು ವಿಧಿಗಳನ್ನೊಳಗೊಂಡ ಧರ್ಮಶಾಸ್ತ್ರವು ಅದರ ಧಾರ್ಮಿಕ ಆಚಾರಗಳು ಮತ್ತು ಆರಾಧನೆಯ ಪದ್ಧತಿಗಳ ಸಮೇತವಾಗಿ ರದ್ದುಗೊಳಿಸಲ್ಪಟ್ಟಿತು. ಪ್ರವಾದನೆಗಳು ಪೂರ್ತಿಗೊಂಡು ನೆರವೇರಿದ ಮೇಲೆ, ಅವುಗಳು ಸಹ ಅಳಿಸಿ ಹಾಕಲ್ಪಟ್ಟವು (ಮತ್ತಾಯ 5:17, 18).

ಆದಿ ಸಭೆಯು ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವದಕ್ಕೆ ಸಮರ್ಪಿಸಿಕೊಂಡಿರಲಿಲ್ಲ; ಬದಲಾಗಿ, ಅದು ಅಪೊಸ್ತಲರ ಬೋಧನೆ ಕೇಳುವದರಲ್ಲಿ ನಿರತವಾಗಿತ್ತು (ಅಪೊಸ್ತಲರ ಕೃತ್ಯಗಳು 2:42). ಪವಿತ್ರಾತ್ಮನ ಮುಖಾಂತರವಾಗಿ, ಯೇಸು ಅಪೊಸ್ತಲರಿಗೆ ಸಕಲ ಸಂಗತಿಗಳನ್ನು ಕಲಿಸಿದನು ಮತ್ತು ಎಲ್ಲಾ ಸತ್ಯವನ್ನು ಕೊಟ್ಟನು (ಯೋಹಾನ 14:25, 26; 16:12, 13). ಆತನು ನಂತರ ಅವರಿಗೆ "ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವಂತೆ" ಬೇರೆಯವರಿಗೆ ಉಪದೇಶಿಸಿರಿ ಎಂದು ಹೇಳಿದನು (ಮತ್ತಾಯ 28:20). ಯೇಸುವಿನ ಹಿಂಬಾಲಕರಿಗೆ ಧರ್ಮಶಾಸ್ತ್ರವನ್ನಲ್ಲ, ಆದರೆ ಯೇಸುವಿನ ಬೋಧನೆಯನ್ನು ಉಪದೇಶಿಸತಕ್ಕದ್ದು ಮತ್ತು ಅದನ್ನೇ ಕೈಕೊಂಡು ನಡೆಯತಕ್ಕದ್ದು.

ಕ್ರೈಸ್ತರು ಧರ್ಮಶಾಸ್ತ್ರದ ವಿವಿಧ ಅಂಶಗಳನ್ನು ಕೈಕೊಂಡು ನಡೆಯಬಹುದು, ಆದರೆ ನೀತಿವಂತರೆಂಬ ನಿರ್ಣಯವನ್ನು ಹೊಂದಬೇಕು ಅಥವಾ ನೀತಿವಂತರಾಗಿ ಮಾಡಲ್ಪಡಬೇಕು ಎಂಬ ಉದ್ದೇಶಕ್ಕೆ ಆಗಿರುವದಿಲ್ಲ (ಅಪೊಸ್ತಲರ ಕೃತ್ಯಗಳು 13:39; ಗಲಾತ್ಯ 2:16, 21). ರಕ್ಷಣೆ ಹೊಂದುವದಕ್ಕಾಗಿ ಏನು ಮಾಡಬೇಕೆಂದು ಪೌಲನಿಗೆ ಹೇಳುವದಕ್ಕಾಗಿ ಯೇಸುವಿನಿಂದ ಕಳುಹಿಸಲ್ಪಟ್ಟ ಅನನೀಯನು (ಅಪೊಸ್ತಲರ ಕೃತ್ಯಗಳು 9:10, 11; 22:12-16), "ಧರ್ಮಶಾಸ್ತ್ರದ ಮಾನದಂಡ" ಪ್ರಕಾರ ದೇವಭಕ್ತಿಯುಳ್ಳ ಮನುಷ್ಯನಾಗಿದ್ದನು. ಪೌಲನು ತಾನು "ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುತ್ತಾನೆ" ಎಂದು ತೋರಿಸುವದಕ್ಕಾಗಿ ದೇವಾಲಯದಲ್ಲಿ ತನ್ನನ್ನು ಶುದ್ಧಿಮಾಡಿಕೊಂಡನು (ಅಪೊಸ್ತಲರ ಕೃತ್ಯಗಳು 21:24). ಹೇಗೂ, ವ್ಯತ್ಯಾಸವೇನೆಂದರೆ, ಧರ್ಮಶಾಸ್ತ್ರವು, ಅನ್ಯಜನಾಂಗದ ಕ್ರೈಸ್ತರೂ ಸೇರಿದಂತೆ, ಯಾರ ಮೇಲೆಯೂ ಕಡ್ಡಾಯಗೊಳಿಸಲ್ಪಡಕೂಡದು. ಅಪೊಸ್ತಲರು ಮತ್ತು ಯೆರೂಸಲೇಮಿನಲ್ಲಿದ್ದ ಹಿರಿಯರು ಸಮಸ್ಯೆಯ ಬಗ್ಗೆ ಸಮಾಲೋಚನೆ ಮಾಡುವದಕ್ಕೆ ಕೂಡಿ ಬಂದ ವೇಳೆಯಲ್ಲಿ ಇದು ಇತ್ಯರ್ಥಗೊಳಿಸಲ್ಪಟ್ಟಿತು (ಅಪೊಸ್ತಲರ ಕೃತ್ಯಗಳು 15:19, 24).

ಧರ್ಮಶಾಸ್ತ್ರವು ಈಗಲೂ ಜಾರಿಯಲ್ಲಿದೆ ಎಂದು ನಂಬುವ ಅನೇಕರು, ಅದು ರದ್ದುಗೊಳಿಸಲ್ಪಡಲಿಲ್ಲ ಎಂಬುದನ್ನು ಸಾಭಿತುಪಡಿಸುವದಕ್ಕಾಗಿ ಮತ್ತಾಯ 5:17, 18 ವಚನಗಳನ್ನು ಬಳಸುತ್ತಾರೆ. ಆ ವಾಕ್ಯಭಾಗದಲ್ಲಿ ಯೇಸು ಧರ್ಮಶಾಸ್ತ್ರ ಮಾತ್ರವಲ್ಲದೆ, ಪ್ರವಾದಿಗಳ ಕುರಿತು ಸಹ ಮಾತಾಡಿದನು. ಆತನು ಧರ್ಮಶಾಸ್ತ್ರದಲ್ಲಾಗಲಿ ಪ್ರವಾದಿಗಳ ಪುಸ್ತಕದಲ್ಲಾಗಲಿ ಇರುವ ಪ್ರವಾದನೆಗಳೆಲ್ಲಾ ನೆರವೇರುವ ಹೊರತು ಅದರಲ್ಲಿ ಯಾವದೂ ಅಳಿದು ಹೋಗುವದಿಲ್ಲ ಎಂದು ಹೇಳುತ್ತಾನೆ. ಯೇಸು ತನ್ನ ವಿಷಯವಾದ ಪ್ರವಾದನೆಗಳನ್ನು ನೆರವೇರಿಸಿದಾಗ, ಆತನು ಪುನಃ ಅವುಗಳನ್ನು ನೆರವೇರಿಸಬೇಕೆಂಬ

ಹಂಗಿನಲ್ಲಿರಲಿಲ್ಲ; ಹೀಗೆ ಅವು ಅಳಿದು ಹೋದವು, ಪೂರ್ತಿಗೊಂಡವು. ಯೇಸು ತನ್ನ ವಿಷಯವಾಗಿದ್ದ ಎಲ್ಲಾ ಪ್ರವಾದನೆಗಳನ್ನು ನೆರವೇರಿಸಿದನು (ಲೂಕ 24:44-48).

ಯೇಸುವಿನ ತಾತ್ಪರ್ಯವು ಏನಾಗಿತ್ತೆಂಬುದನ್ನು ಈ ಕೆಳಗಿನದು ದೃಷ್ಟಾಂತಪಡಿಸುತ್ತದೆ. ಒಬ್ಬ ಮನುಷ್ಯನು ಅಂಗಡಿಯೊಂದರಿಂದ ಕೆಲವು ಸಾಮಗ್ರಿಗಳನ್ನು ಸಾಲವಾಗಿ ಖರೀದಿಸುತ್ತಾನೆಂದು ಆಲೋಚಿಸಿರಿ. ಆತನು ಬಿಲ್ಲಿನ ಮೊತ್ತವನ್ನು ಕಟ್ಟುವದಕ್ಕೆ ಬಂದ ಬಳಿಕ, ಹೀಗೆ ಹೇಳಬಹುದು, "ನಾನು ಬಿಲ್‌ನ್ನು ನಾಶಮಾಡುವದಕ್ಕೆ ಬಂದಿಲ್ಲ, ಆದರೆ ಅದನ್ನು ಪಾವತಿಸುವದಕ್ಕೆ ಬಂದಿದ್ದೇನೆ. ನಾನು ಬಿಲ್‌ನಲ್ಲಿರುವದನ್ನೆಲ್ಲಾ ತೀರಿಸುವ ತನಕ ಅದರಲ್ಲಿ ಒಂದು ಸಾಮಗ್ರಿಯೂ ಪಾವತಿಸಲ್ಪಡದೇ ಹೋಗುವದಿಲ್ಲ." ಅಂಥ ಹೇಳಿಕೆಯನ್ನು ನೀಡಿದ ಬಳಿಕ, ಆತನು ಬಿಲ್‌ನಲ್ಲಿರುವ ಎಲ್ಲದಕ್ಕೂ ಹಣವನ್ನು ಪಾವತಿಸುತ್ತೇನೆಂದು ಪ್ರತಿಜ್ಞೆ ಮಾಡುವನು. ಒಮ್ಮೆ ಬಿಲ್‌ನ ಮೊತ್ತವು ಪಾವತಿಸಲ್ಪಟ್ಟರೆ, ಅದು ಹಿಂದಿನ ಸಾಲದ ಬಾಕಿಯ ದಾಖಲೆಯಲ್ಲಿ ಉಳಿದುಕೊಳ್ಳಬಹುದು, ಆದರೆ ಅದು ಇನ್ನು ಮೇಲೆ ಜಾರಿಯಲ್ಲಿರುವದಿಲ್ಲ; ಅದು ನೆರವೇರಿಸಲ್ಪಟ್ಟಿದೆ. ಅದನ್ನು ಪುನಃ ಪಾವತಿಸಬೇಕಾದ ಅಗತ್ಯವಿರುವದಿಲ್ಲ.

ಯೇಸುವಿನ ಮಾತುಗಳಿಗೆ ಸಹ ಅದೇ ಸೂತ್ರವು ಅನ್ವಯವಾಗುತ್ತದೆ. ಆತನ ಕುರಿತಾಗಿ ಧರ್ಮಶಾಸ್ತ್ರದಲ್ಲಿ ಅಥವಾ ಪ್ರವಾದಿಗಳ ಗ್ರಂಥಗಳಲ್ಲಿ ಪ್ರವಾದಿಸಲ್ಪಟ್ಟಿದ್ದರಲ್ಲಿ ಎಲ್ಲವೂ ನೆರವೇರಿದ ಹೊರತು ಅದರಲ್ಲಿ ಯಾವದೂ ಅಳಿದು ಹೋಗುವದಿಲ್ಲ. ಕ್ರಿಸ್ತನಲ್ಲಿ ನೆರವೇರಿದ ಬಳಿಕ, ಈ ಪ್ರವಾದನೆಗಳು ಇನ್ನು ಮೇಲೆ ಜಾರಿಯಲ್ಲಿರುವದಿಲ್ಲ. ಅವುಗಳು ಕೇವಲ ದಾಖಲೆಯಲ್ಲಷ್ಟೆ ಉಳಿಯುವವು; ಆತನು ಅವುಗಳನ್ನು ಪದೇ ಪದೇ ನೆರವೇರಿಸಬೇಕಾಗಿರುವದಿಲ್ಲ.

ಧರ್ಮಶಾಸ್ತ್ರವು ಅಳಿಸಿ ಹಾಕಲ್ಪಟ್ಟಿದೆ ಎಂಬುದನ್ನು ತೋರಿಸುವದಕ್ಕಾಗಿ ಪೌಲನು ಈ ಹೇಳಿಕೆಗಳನ್ನು ನೀಡುತ್ತಾನೆ. ಅದು "ಕೆಡಿಸಿ" ಹಾಕಲ್ಪಟ್ಟಿದೆ, "ಇಲ್ಲದಂತಾಗ ಮಾಡಲ್ಪಟ್ಟಿದೆ," ಮತ್ತು "ಶಿಲುಬೆಗೆ ಜಡಿಯಲ್ಪಟ್ಟಿದೆ" ಎಂದು ಹೇಳಿದನು. ಈ ಮಾತುಗಳೆಲ್ಲಾ ಒಂದೇ ಸತ್ಯವನ್ನು ವ್ಯಕ್ತಪಡಿಸುತ್ತವೆ. "ಕೆಡಿಸಿ" (ἐξαλείψας, *exaleipsas*) ಎಂಬುದರ ಅರ್ಥವು "ತೊಡೆದು ಹಾಕಲ್ಪಟ್ಟಿತು, ಅಳಿಸಿಹಾಕಲ್ಪಟ್ಟಿತು." Bauer ಶಬ್ದಕೋಶವು ಇದನ್ನು ಈ ವಚನಗಳಲ್ಲಿ, "ಯಾವ ಕುರುಹು ಸಹ ಇಲ್ಲದಂತೆ ತೆಗೆದು ಹಾಕುವದು, ತೆಗೆದು ಬಿಡುವದು, ನಿರ್ನಾಮ ಮಾಡುವದು, ಗುರುತುಳಿಯದಂತೆ ಮಾಡುವದು" ಎಂದು ಅರ್ಥನಿರೂಪಿಸುತ್ತದೆ.[64]" ಇಲ್ಲದಂತಾಗ ಮಾಡಿದನು" (ἦρκεν, *ērken*, ಇದು, αἴρω, *airō*) *ಎಂಬದರಿಂದ ಬಂದದ್ದು* ಎಂಬುದರ ಅರ್ಥವು "ತೆಗೆದು ಹಾಕು, ತೊಲಗಿಸು, ಅಥವಾ ಬಿಟ್ಟು ಕೊಡುವ ಸೂಚನೆಯಿಲ್ಲದಂತೆ ನಿಯಂತ್ರಣಕ್ಕೆ ತೆಗೆದುಕೋ . . . ನಾಶಗೊಳಿಸು [ವ. 14ಕ್ಕೆ ಅನ್ವಯಿಸಿದಾಗ]" ಎಂದಾಗಿರುತ್ತದೆ.[65] ಅದರರ್ಥವು ಸಂಪೂರ್ಣವಾಗಿ ನಿರ್ನಾಮಗೊಳಿಸುವದು ಎಂದಾಗಿದೆ. "ಶಿಲುಬೆಗೆ ಜಡಿದು" ಎಂಬುದು ಧರ್ಮಶಾಸ್ತ್ರದ ಮರಣ ಎಂಬ ಸೂಚ್ಯಾರ್ಥವನ್ನು ಕೊಡುತ್ತದೆ. ಈ ಮೂರು ಹೇಳಿಕೆಗಳು ಧರ್ಮಶಾಸ್ತ್ರವು ಇನ್ನು ಮೇಲೆ ಒಂದು ಜಾರಿಯಲ್ಲಿರುವ ದಸ್ತಾವೇಜು ಅಲ್ಲ, ಅದು ಅಳಿಸಿ ಹಾಕಲ್ಪಟ್ಟಿದೆ ಅಥವಾ ತಳ್ಳಿ ಹಾಕಲ್ಪಟ್ಟಿದೆ ಎಂಬದನ್ನು ತಿಳಿಯಪಡಿಸುತ್ತವೆ.

14ನೇ ವಚನದಲ್ಲಿನ "ಶಿಲುಬೆಗೆ ಜಡಿದು" ಎಂಬ ಮಾತುಗಳನ್ನು ಅಕ್ಷರಶಃ ತೆಗೆದುಕೊಳ್ಳಬಾರದು. ಧರ್ಮಶಾಸ್ತ್ರವು ಬರೆಯಲ್ಪಟ್ಟಿದ್ದ ಪುಟಗಳು ಶಿಲುಬೆಗೆ

ಜಡಿಯಲ್ಪಡಲಿಲ್ಲ. ಬದಲಾಗಿ, ಇದು ಯಾವದರಿಂದ ಧರ್ಮಶಾಸ್ತ್ರವು ಇಲ್ಲದಂತಾಗ ಮಾಡಲ್ಪಟ್ಟಿತೋ ಆ *ಪ್ರಕ್ರಿಯೆಯನ್ನು* ಸೂಚಿಸುವ ಒಂದು ಸಾದೃಶ್ಯವಾಗಿದೆ ಮತ್ತು ಅದು ಇಲ್ಲದಂತಾಗ *ಮಾಡಲ್ಪಟ್ಟ ಕಾಲವನ್ನು* ಗುರುತಿಸುವದಾಗಿರುತ್ತದೆ. ಯೇಸುವು ಶಿಲುಬೆಗೆ ಜಡಿಯಲ್ಪಟ್ಟಾಗ, ಧರ್ಮಶಾಸ್ತ್ರವು ಮರಣಿಸಿತು, ಅಂತ್ಯಗೊಂಡಿತು, ಮತ್ತು ಅದು ಇನ್ನು ಮೇಲೆ ಜಾರಿಯಲ್ಲಿರಲಿಲ್ಲ. ಅದು ಯೇಸುವಿನ ಮರಣ ಮೂಲಕ ಹೊಸ ಒಡಂಬಡಿಕೆಯು ಸಮರ್ಪಣೆ ಮಾಡಲ್ಪಟ್ಟ ಅದೇ ಗಳಿಗೆಯಲ್ಲಿಯೇ ಇಲ್ಲದಂತಾಗ ಮಾಡಲ್ಪಟ್ಟಿತು (ಇಬ್ರಿಯ 9:16-18; ಮತ್ತಾಯ 26:28ನ್ನು ಸಹ ನೋಡಿರಿ). "ಆತನು ಎರಡನೆಯದನ್ನು ಸ್ಥಾಪಿಸುವದಕ್ಕಾಗಿ ಮೊದಲನೆಯದನ್ನು ತೆಗೆದುಬಿಡುತ್ತಾನೆ" (ಇಬ್ರಿಯ 10:9).

ಎಫೆಸದವರಿಗೆ ಬರೆದ ಪತ್ರಿಕೆಯಲ್ಲಿ, ಪೌಲನು ಇದೇ ಸಿದ್ಧಾಂತದ ಮೇಲೆ ಮುಖ್ಯ ಗಮನವನ್ನು ಹರಿಸಿರುತ್ತಾನೆ. ಯೆಹೂದ್ಯರು ಮತ್ತು ಅನ್ಯಜನರ ನಡುವಿದ್ದ ಗೋಡೆಯನ್ನು ಕೆಡವಿ ಹಾಕುವ ಮೂಲಕ, ಯೇಸು "ವಿಧಿರೂಪವಾದ ಆಜ್ಞೆಗಳುಳ್ಳ ಧರ್ಮಶಾಸ್ತ್ರವನ್ನು" ತೆಗೆದು ಹಾಕಿದನು ಎಂದು ಆತನು ಹೇಳುತ್ತಾನೆ (ಎಫೆಸ 2:14, 15). "ವಿಧಿಗಳು" ಎಂಬುದಕ್ಕಾಗಿರುವ ಪದವು δόγματα (*dogmata*), ಅದೇ ಪದವು ಕೊಲೊಸ್ಸೆ 2:14ರಲ್ಲಿ "ಶಾಸನಗಳು" ಎಂದು ಅನುವಾದಿಸಲ್ಪಟ್ಟಿದೆ. ಪೌಲನು ಎಫೆಸದವರಿಗೆ ಮತ್ತು ಕೊಲೊಸ್ಸೆಯವರಿಗೆ ಬರೆದ ಎರಡೂ ಪತ್ರಿಕೆಗಳಲ್ಲಿ *dogmata* ಎಂಬ ಪದವನ್ನು ಬಳಸುವದರಿಂದ ಆತನು ಎರಡೂ ವಾಕ್ಯಭಾಗಗಳಲ್ಲಿ ಒಂದೇ ಯೋಚನೆಯನ್ನು ವ್ಯಕ್ತಪಡಿಸುವ ಉದ್ದೇಶ ಹೊಂದಿದ್ದನೆಂಬುದಕ್ಕೆ ಇನ್ನಷ್ಟು ಪುಷ್ಠಿಯನ್ನು ಕೊಡುತ್ತದೆ. ಧರ್ಮಶಾಸ್ತ್ರವು, ಶಿಲುಬೆಗೆ ಜಡಿಯಲ್ಪಟ್ಟದ್ದಾಗಿ, ಕೆಡಿಸಲ್ಪಟ್ಟದ್ದು, ಮತ್ತು ತೆಗೆದಿಡಲ್ಪಟ್ಟದ್ದಾಗಿ, ಈಗ ಮರಣಿಸಿರುತ್ತದೆ.

ಈ ಎರಡು ವಾಕ್ಯಭಾಗಗಳಲ್ಲಿ ಸಮಾನಾರ್ಥಕ ಯೋಚನೆಗಳನ್ನು ಗಮನಿಸಿರಿ:

| **ಎಫೆಸ 2:14, 15** | **ಕೊಲೊಸ್ಸೆ 2:14** |
| --- | --- |
| "ಆತನೇ . . . ಅಗಲಿಸಿದ ಅಡ್ಡಗೋಡೆಯನ್ನು ಕೆಡವಿಹಾಕಿದನು" | "ಆಜ್ಞಾರೂಪವಾಗಿದ್ದಂಥ ಪತ್ರವನ್ನು ಕೆಡಿಸಿ" ("ಅದನ್ನು . . . ಇಲ್ಲದಂತಾಗ ಮಾಡಿದನು") |
| "ತನ್ನ ಶರೀರವನ್ನ ಸಮರ್ಪಿಸಿದ್ದರಲ್ಲಿ . . . ಇದ್ದ ದ್ವೇಷವನ್ನು ಮುಗಿಸಿ" | "ಅದನ್ನು ಶಿಲುಬೆಗೆ ಜಡಿದು" |
| "ವಿಧಿರೂಪವಾದ ಆಜ್ಞೆಗಳುಳ್ಳ ಧರ್ಮಶಾಸ್ತ್ರ [*dogmasin*]" | "ನಮ್ಮ ಮೇಲೆ ದೋಷಾರೋಪಣೆಮಾಡಿದಂಥ ಆಜ್ಞಾರೂಪವಾಗಿದ್ದಂಥ ಪತ್ರ [*dogmasin*]" |

(ಪ್ರಕ್ಷೇಪ ಚಿಹ್ನೆಯಲ್ಲಿರುವ ಪದಗುಚ್ಛಗಳು ಹೋಲಿಕೆಗಳನ್ನು ಒತ್ತಿ ಹೇಳುವದಕ್ಕಾಗಿ ತಕ್ಕ ಹಾಗೆ ಬದಲಿ ಸ್ಥಾನದಲ್ಲಿರಿಸಲ್ಪಟ್ಟಿರುತ್ತವೆ.)

"ತನ್ನ ಶರೀರವನ್ನು ಸಮರ್ಪಿಸಿದ್ದರಲ್ಲಿ" ಎಂಬ ಪದಗುಚ್ಛವು (ಎಫೆಸ 2:15) "ಶಿಲುಬೆಗೆ ಜಡಿದು" (ಕೊಲೊಸ್ಸೆ 2:14) ಎಂಬದಕ್ಕೆ ಸೂಚ್ಯಾರ್ಥ ಹೊಂದಿದೆ. ಆತನ ಶರೀರವು ಶಿಲುಬೆಗೆ ಜಡಿಯಲ್ಪಟ್ಟ ಹಾಗೆ, ಧರ್ಮಶಾಸ್ತ್ರವು ಆತನ ಜೊತೆಯಲ್ಲಿ ಶಿಲುಬೆಗೆ ಜಡಿಯಲ್ಪಟ್ಟಿತು. ಆತನು ಪಾಪಕ್ಕಾಗಿ ಯಜ್ಞ ಅರ್ಪಿಸಬೇಕೆಂಬ ಧರ್ಮಶಾಸ್ತ್ರದ ಬೇಡಿಕೆಯನ್ನು ಆತನು ಶಿಲುಬೆಯ ಮೇಲೆ ಮರಣಿಸುವ ಮೂಲಕ ಪೂರ್ತಿಗೊಳಿಸಿದನು. ಈ ವಿಧದಲ್ಲಿ – ಅಂದರೆ, "ತನ್ನ ಶರೀರವನ್ನು ಸಮರ್ಪಿಸಿದ್ದರಲ್ಲಿ" – ಆತನು ಶಿಲುಬೆಯೆ ಮೇಲೆ ಮರಣಿಸಿದಾಗ, ಧರ್ಮಶಾಸ್ತ್ರವು ನೆರವೇರಿತು, ಕೆಡಿಸಲ್ಪಟ್ಟಿತು, ಮತ್ತು ತೆಗೆದು ಹಾಕಲ್ಪಟ್ಟಿತು. ಹೀಗೆ ಯೇಸು ಶಿಲುಬೆಯ ಮೇಲೆ ಮರಣಿಸಿದಾಗ ಧರ್ಮಶಾಸ್ತ್ರದ ಆಳ್ವಿಕೆ ಅಂತ್ಯಗೊಂಡಿತು.

ಧರ್ಮಶಾಸ್ತ್ರವು ತೆಗೆದಿಡಲ್ಪಟ್ಟಿತು ಎಂದು ಈ ವಚನಗಳಲ್ಲಿ ಸೂಚಿಸುವ ಪದಗಳೆಂದರೆ "ಅಡ್ಡಗೋಡೆಯನ್ನು ಕೆಡವಿಹಾಕಿದನು," "ತನ್ನ ಶರೀರವನ್ನು ಸಮರ್ಪಿಸಿದ್ದರಲ್ಲಿ . . . ತೆಗೆದುಹಾಕಿ," "ಕೆಡಸಿ," "ಇಲ್ಲದಂತಾಗ ಮಾಡಿದನು," ಮತ್ತು "ಅದನ್ನು ಶಿಲುಬೆಗೆ ಜಡಿದು." ಕ್ರಿಸ್ತನು ಮೂಲಕ ಅವರು ಧರ್ಮಶಾಸ್ತ್ರದಿಂದ ವಿಮುಕ್ತಗೊಳಿಸಲ್ಪಟ್ಟಿದ್ದಾರೆ ಮತ್ತು ಮುಂದೆಯೂ ವಿಮುಕ್ತರಾಗಿಯೇ ಇರುವರು ಎಂಬದನ್ನು ಕೊಲೊಸ್ಸೆಯವರು ತಿಳಿದುಕೊಳ್ಳಬೇಕೆಂದು ಪೌಲನ ಬಯಕೆಯಾಗಿತ್ತು. ಆದ್ದರಿಂದಲೇ ಆತನು ಅವರಿಗೆ ಜ್ಞಾನವಿದ್ಯಾಸಂಬಂಧವಾದ ನಿಕ್ಷೇಪಗಳೆಲ್ಲಾ ಕ್ರಿಸ್ತನಲ್ಲಿಯೇ (ಕೊಲೊಸ್ಸೆ 2:3) ಇರುತ್ತವೆ, ಹೊರತು ಧರ್ಮಶಾಸ್ತ್ರದಲ್ಲಿ ಅಲ್ಲ ಎಂಬದಾಗಿ ಹೇಳಿದನು. ಅವರು ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯಬೇಕೆಂಬ ನಿರ್ಬಂಧವಿಲ್ಲದವರಾಗಿ ಯೇಸುವನ್ನೇ ಹಿಂಬಾಲಿಸಬೇಕಿತ್ತು.

ಕ್ರೈಸ್ತರು ಧರ್ಮಶಾಸ್ತ್ರದಿಂದ ಸ್ವತಂತ್ರರು ಎಂದು ಪೌಲನು ಮುಕ್ತಾಯಕ್ಕೆ ಬಂದದ್ದರಿಂದ, ಮನುಷ್ಯನಿಂದ ಪ್ರತಿಷ್ಠಾಪಿಸಲ್ಪಟ್ಟ ಇತರ ಧಾರ್ಮಿಕ ನೇಮನಿಷ್ಠೆಗಳಿಗೆ ಯಾವದೇ ಅಧಿಕಾರವಿಲ್ಲವೆಂಬುದನ್ನು ಆತನು ಹೇಳುವ ಅಗತ್ಯವಿರಲಿಲ್ಲ. ಎಸ್ಸೇನರು ಮತ್ತು ಕೊಲೊಸ್ಸೆಯವರ ಕಾಲದಲ್ಲಿದ್ದ ಇತರರು ವಿವಾಹ ಮತ್ತು ಪ್ರಾಣಿಗಳ ಮಾಂಸವೂ ಸೇರಿದಂತೆ ಕೆಲವೊಂದು ಆಹಾರವನ್ನು ನಿಷೇಧಿಸುವ ವಿಧಿಗಳನ್ನು ಹೊಂದಿದವರಾಗಿದ್ದರು. ಕ್ರಿಸ್ತನ ಬಳಿಗೆ ಬಂದವರ ಧಾರ್ಮಿಕ ನೇಮನಿಷ್ಠೆಗಳ ಹಿನ್ನಲೆ ಏನೇ ಆಗಿದ್ದಾಗ್ಯೂ ಸರಿಯೇ, ಕೊಲೊಸ್ಸೆಯವರಿಗಿದ್ದ ಏಕೈಕ ನಿರ್ಬಂಧವು ಯೇಸುವನ್ನು ದೃಷ್ಟಿಸುವದೇ ಆಗಿತ್ತು. ಅವರಿಗೆ ಮನುಷ್ಯ ವಿಧಿಗಳನ್ನಾಗಲಿ ಅಥವಾ ಧರ್ಮಶಾಸ್ತ್ರವನ್ನಾಗಿ ಅನುಸರಿಸುವ ಅಗತ್ಯವಿರಲಿಲ್ಲ, ಯಾಕೆಂದರೆ ಯೇಸು ಅವುಗಳೊಳಗಿಂದ ತನ್ನ ಹಿಂಬಾಲಕರನ್ನು ವಿಮುಕ್ತಗೊಳಿಸಿದ್ದನು.

## ಕ್ರಿಸ್ತನಿಂದ ಎದುರಾಳಿ ಮೆರಸುತ್ತಾ ತೋರಿಸಲ್ಪಟ್ಟದ್ದು (2:15)

**[15]ಆತನು ಧೊರೆತನಗಳನ್ನೂ ಅಧಿಕಾರಗಳನ್ನೂ ನಿರಾಯುಧರನ್ನಾಗಿ ಮಾಡಿ ಜಯೋತ್ಸಾವ ಮಾಡುತ್ತಾನೋ ಎಂಬಂತೆ ಶಿಲುಬೆಯ ಮೇಲೆ ಅವುಗಳನ್ನು ಜಯಿಸಲ್ಪಟ್ಟವುಗಳನ್ನಾಗಿ ಮೆರಸುತ್ತಾ ತೋರಿಸಿದನು.**

### "ಆತನು ದೊರೆತನಗಳನ್ನೂ ಅಧಿಕಾರಗಳನ್ನೂ ನಿರಾಯುಧರನ್ನಾಗಿ ಮಾಡಿ"

ಯೇಸು "ದೊರೆತನಗಳನ್ನೂ ಅಧೀಕಾರಗಳನ್ನೂ" **ನಿರಾಯುಧರನ್ನಾಗಿ ಮಾಡಿದನು** ಎಂಬದಾಗಿ ಹೇಳುವ ಮೂಲಕ ಒಂದು ಹೊಸ ಪದವನ್ನು ಸೃಷ್ಟಿಸಿರಬಹುದಾಗಿದೆ,

ಯಾಕೆಂದರೆ ಗ್ರೀಕ್ ಸಾಹಿತ್ಯದಲ್ಲಿ ಈ ಪದವು ಕಾಣಿಸಿಕೊಂಡಿದ್ದು ಇದೇ ಮೊಟ್ಟಮೊದಲ ಬಾರಿಗೆ ಆಗಿರುತ್ತದೆ. ಇದರ ಕಾರಣದಿಂದ, ಇದರ ಅರ್ಥವೇನೆಂದು ನಿರ್ಧರಿಸುವದಕ್ಕೆ ಸಹಾಯವಾಗುವಂಥ ಯಾವ ಸಮಕಾಲೀನ ಸನ್ನಿವೇಶವು ಲಭ್ಯವಿರುವದಿಲ್ಲ. ಅಪೊಸ್ತಲನು ಈ ಪದವನ್ನು ಇನ್ನೊಂದು ಸಾರಿ ಒಂದು ಕೃದಂತವಾಗಿ ಬಳಸಿರುತ್ತಾನೆ, ಅದು "ತೆಗೆದಿಟ್ಟು" ಎಂದು ಅನುವಾದಿಸಲ್ಪಟ್ಟಿದೆ (3:9), ಮತ್ತು ಆತನು ಅದನ್ನು ಒಂದು ಸಾರಿ ನಾಮಪದ ರೂಪದಲ್ಲಿ ("ವಿಸರ್ಜಿಸುವದೇ"; 2:11) ಬಳಸಿದನು. "ನಿರಾಯುಧರನ್ನಾಗಿ ಮಾಡಿ" (ἀπεκδύομαι, *apekduomai*) ಎಂಬುದರ ಅರ್ಥವು, ಉಡುಪುಗಳನ್ನು ಕಳಚುವ ರೀತಿಯಲ್ಲಿ, "ತೆಗೆದು ಬಿಡು, ಬೆತ್ತಲೆಗೊಳಿಸು" ಎಂದಾಗಿರಬಲ್ಲದು. ಹೇಗೂ, ಈ ಸನ್ನಿವೇಶದಲ್ಲಿ, "ನಿರಾಯುಧರನ್ನಾಗಿ ಮಾಡಿ" ಎಂಬುದು ಉತ್ತಮ ಭಾವಾನುವಾದವಾಗಿರುತ್ತದೆ, ಅದು ದುಷ್ಟಶಕ್ತಿಗಳನ್ನು ನಿಷ್ಪರಿಣಾಮಕಾರಿ ಮಾಡುವದಕ್ಕಾಗಿ ದೇವರು ಯೇಸುವಿನ ಮೂಲಕ ಮಾಡಿದ ಕಾರ್ಯವನ್ನು ಸೂಚಿಸುವದಾಗಿದೆ.

**ದೊರೆತನಗಳಲಲ್ಲೂ ಅಧಿಕಾರಗಳನ್ನೂ** ಅಂದರೆ ಯಾರು? ಅವರನ್ನು ಹೇಗೆ ನಿರಾಯುಧಗೊಳಿಸಲಾಯಿತು? H. Dermot McDonald ಈ ಅಭಿಪ್ರಾಯ ಪಡುತ್ತಾನೆ, "ಇದು ಸ್ಪಷ್ಟೀಕರಣ ಮಾಡುವದಕ್ಕೆ ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಗಳಲ್ಲಿರುವ ವಾಕ್ಯಭಾಗಗಳಲ್ಲಿಯೇ ಅತ್ಯಂಥ ಕಠಿಣವಾದ ವಾಕ್ಯಭಾಗವಾಗಿರುತ್ತದೆ,"[66] ಮತ್ತು ಮೂರು ಪ್ರಶ್ನೆಗಳು ಉದ್ಭವವಾಗುತ್ತವೆ: (1) ಪೌಲನು ಏಕೆ ಮಧ್ಯಮ ಕರ್ಮಣಿಯನ್ನು (ἀπεκδυσάμενος, *apekdusamenos*, "ನಿರಾಯುಧರನ್ನಾಗಿ ಮಾಡಿ") ಬಳಸಿದನು? ಅಪೂರ್ವ ಪ್ರಯೋಗವು "ನಾನು ನನ್ನನ್ನು ತೊಳೆದುಕೊಂಡೆನು" ಎಂಬಂತಹ ಅರ್ಥವನ್ನು ವ್ಯಕ್ತಪಡಿಸುವದಾಗಿದ್ದು, "ನಾನು ಆತನನ್ನು ತೊಳೆದೆನು" ಎಂಬ ಕರ್ತರಿ ಪ್ರಯೋಗಕ್ಕೆ ವಿರುದ್ಧವಾಗಿರುತ್ತದೆ. ಇದರರ್ಥವು ದೇವರು ಮತ್ತು ಯೇಸು ತಮ್ಮೊಳಗಿಂದ ಏನನ್ನೋ ತೆಗೆದುಹಾಕಿಕೊಂಡರೆಂದು, ಅಥವಾ ಇತರರನ್ನು ನಿರಾಯುಧರನ್ನಾಗಿ ಮಾಡಿಕೊಂಡರು ಎಂದು ಅರ್ಥವೋ? (2) ದೇವರು ಅಥವಾ ಯೇಸು ಕರ್ತೃವೋ? (3) ಯಾವ ಅಧಿಕಾರಗಳು ಮತ್ತು ಧೊರೆತನಗಳು ನಿರಾಯುಧಗೊಳಿಸಲ್ಪಟ್ಟವು?

McDonald ಹೀಗೆ ಸಾರಾಂಶಗೊಳಿಸುತ್ತಾನೆ:[67]

ಕ್ರಿಸ್ತನು ತನ್ನ ದೇಹವನ್ನು ಪದಚ್ಯುತಿಗೊಳಿಸಿಕೊಳ್ಳುವ ಮೂಲಕ ತನ್ನನ್ನು ಬೆತ್ತಲೆಗೊಳಿಸಿಕೊಂಡು ದೊರೆತನಗಳನ್ನು ಮತ್ತು ಅಧಿಕಾರಗಳನ್ನು ನಿರಾಯುಧರನ್ನಾಗಿ ಮಾಡಿದನು.

ಹಿಂದೆ ತನ್ನನ್ನು ಸುತ್ತುವರೆದುಕೊಂಡಿದ್ದಂಥ ದುಷ್ಟ ವಿರೋಧಿ ಅಧಿಕಾರಗಳಿಂದ ತನ್ನನ್ನು ಬೆತ್ತಲೆಗೊಳಿಸಿಕೊಂಡವನಾಗಿ, ಕ್ರಿಸ್ತನು ತನ್ನ ಶಿಲುಬೆಯಲ್ಲಿ ಅಂತಿಮವಾಗಿಯೂ ಶಾಶ್ವತವಾಗಿಯೂ ಅವುಗಳನ್ನು ತನ್ನಿಂದ ದೂರಕ್ಕೆ ಎಸೆದು ಬಿಟ್ಟನು.

ದೇವರು ಶಿಲುಬೆಯ ಕಾರ್ಯದ ಮೂಲಕವಾಗಿ ನಮ್ಮಿಂದ ನಮಗೆ ವಿರೋಧವಾಗಿದ್ದ ಅಧಿಕಾರಗಳನ್ನು ಬೆತ್ತಲೆಗೊಳಿಸಿದನು.

ಈ ಮುಂಚೆ ಯಾವವುಗಳ ಮೂಲಕ ತನ್ನ ಚಿತ್ತವನ್ನು ತಿಳಿಯಪಡಿಸಿದ್ದನೋ (ನೋಡಿರಿ

1 ಪೇತ್ರ 3:22) ಆ ಪ್ರಭುತ್ವಗಳನ್ನು ಮತ್ತು ಅಧಿಕಾರಗಳನ್ನು ತೆಗೆದುಬಿಟ್ಟವನಾಗಿ, ದೇವರು ಅವುಗಳನ್ನು ಕ್ರಿಸ್ತನಿಗೆ ಅಧೀನಪಡಿಸುವ ಮೂಲಕ ಅವುಗಳನ್ನು ಜಯೋತ್ಸವದಲ್ಲಿ ಮೆರಸುತ್ತಾ ಬಹಿರಂಗವಾಗಿ ಪ್ರದರ್ಶಿಸಿದನು.

ಮನುಷ್ಯರನ್ನು ದೇವರಿಂದ ಹೊಡೆದುಕೊಂಡ ಕೊಳ್ಳೆ ಎಂಬಂತೆ ಹಿಡಿದಿಟ್ಟುಕೊಂಡಿದ್ದ ದುಷ್ಟ ಪ್ರಭುತ್ವಗಳು ಮತ್ತು ಅಧಿಕಾರಗಳ ಭಯಾನಕವಾದ ಆಡಳಿತ ವ್ಯವಸ್ಥೆಯಿಂದ ತನ್ನನ್ನು ದೋಚಿಕೊಂಡವನಾಗಿ, ಕ್ರಿಸ್ತನು ತನ್ನ ಶಿಲುಬೆಯ ಜಯದ ಮುಖಾಂತರ ಅವುಗಳನ್ನು ಬಹಿರಂಗವಾಗಿ ಅಪಕೀರ್ತಿಗೊಳಿಸಿ ಪ್ರದರ್ಶಿಸಿದನು.

ಕೆಲವರು "ನಿರಾಯುಧರನ್ನಾಗಿ ಮಾಡಿ" ಎಂಬುದು, ಒಂದು ಕೃದಂತವಾಗಿ, "ಒಬ್ಬನಿಂದ ಏನೋ ಒಂದನ್ನು ಕಸಿದುಕೊಳ್ಳುವದು" ಎಂದರ್ಥವಾಗುವ, ಅಪೂರ್ವ ಪ್ರಯೋಗಕ್ಕೆ ಒತ್ತು ಕೊಡತಕ್ಕದ್ದು ಎಂಬ ನಿರ್ಧಾರಕ್ಕೆ ಬಂದಿರುತ್ತಾರೆ. ಈ ಕಾರಣಕ್ಕಾಗಿ, ಈ ಮೇಲ್ಗಡೆಯಲ್ಲಿ McDonaldನ (1) ಮತ್ತು (2) ವಿವರಣೆಗಳಲ್ಲಿ ಸೂಚಿಸಲ್ಪಟ್ಟಿರುವ ಪ್ರಕಾರ, ಪೌಲನು ಇಲ್ಲಿ ಕ್ರಿಸ್ತನು ತನ್ನಿಂದ ತನ್ನ ದೇಹವನ್ನು, ವಿರೋಧವಾಗಿದ್ದ ದುಷ್ಟ ಅಧಿಕಾರಗಳು, ಅಥವಾ ದೇವದೂತರು, ಅವರಿಂದ ಮಧ್ಯಸ್ಥಿಕೆ ವಹಿಸಲ್ಪಟ್ಟ ಧರ್ಮಶಾಸ್ತ್ರವು ಸೇರಿದಂತೆ ಎಲ್ಲದರಿಂದ ತನ್ನನ್ನು ಕಳಚಿಕೊಳ್ಳುವ ಕಾರ್ಯವನ್ನು ಸೂಚಿಸಿ ಹೇಳಿದನು ಎಂದು ಕೆಲವರು ಭಾವಿಸುತ್ತಾರೆ (ನೋಡಿರಿ ಅಪೊಸ್ತಲರ ಕೃತ್ಯಗಳು 7:35; ಗಲಾತ್ಯ 3:19; ಇಬ್ರಿಯ 2:2). Clinton E. Arnoldನು ಗಮನಕ್ಕೆ ತರುವ ಪ್ರಕಾರ, ಇದು ಅವಶ್ಯಕವಾದ ಮುಕ್ತಾಯಕ್ಕೆ ಬರುವಿಕೆಯಾಗಿರುವದಿಲ್ಲ:

> ಕೃದಂತದ ಉತ್ತಮ ಅರ್ಥನಿರೂಪಣೆಯೆಂದರೆ ಅದನ್ನು ದೇವರು ಕರ್ತೃವಾಗಿ ಮತ್ತು ದುಷ್ಟ ಪ್ರಭುತ್ವಗಳು ಹಾಗೂ ಅಧಿಕಾರಗಳು ಕರ್ಮವೆಂಬ ಮಹತ್ವಪೂರ್ಣತೆಯಲ್ಲಿ ಒಂದು ಕರ್ತರಿ ಎಂದು ಅರ್ಥೈಸಿಕೊಳ್ಳುವದೇ. ಇದು ಕೆಳಗಿನ ಜಯೋತ್ಸವದ ಮೆರವಣಿಗೆಯ ಚಿತ್ರಣಕ್ಕೆ ಹೆಚ್ಚು ಸೂಕ್ತವಾಗಿ ಸರಿಹೊಂದುತ್ತದೆ, ಅದು ವೈರಿಗಳ ಪರಾಜಯವನ್ನು ಮಾತ್ರವಲ್ಲದೆ, ಅವರನ್ನು ನಿರಾಯುಧರನ್ನಾಗಿಸುವದನ್ನು ಸಹ ಸೂಚಿಸುತ್ತದೆ. ಇದು 3:9ರಲ್ಲಿ ಇದೇ ಕೃದಂತದ ಬಳಕೆಗೆ ಉತ್ತಮವಾಗಿ ಹೊಂದಾಣಿಕೆಯಾಗುತ್ತದೆ . . . ಅದು ಸಹ ಒಂದು ಕರ್ತರಿಯಾಗಿ ಉತ್ತಮ ವಿವರಣೆಯಾಗಿರುತ್ತದೆ: "ಪೂರ್ವಸ್ವಭಾವವನ್ನು . . . ತೆಗೆದಿಟ್ಟು."[68]

ಪೌಲನು ವಿಷಯವನ್ನು ಬದಲಾಯಿಸುತ್ತಿರುವ ಹೊರತು ಈ ಸಂದರ್ಭದಲ್ಲಿ ಕ್ರಿಯೆಮಾಡುತ್ತಿರುವವನು ದೇವರೇ ಆಗಿರುತ್ತಾನೆ. ಪೌಲನ ವಿಚಾರಧಾರೆಯ ಪ್ರಗತಿಯನ್ನು ಪರಿಗಣಿಸುವದಾದರೆ, 13ರಿಂದ 15 ವಚನಗಳಲ್ಲಿ "ಆತನು" ಎಂಬ ಸರ್ವನಾಮವು ದೇವರನ್ನು ಸೂಚಿಸಿದರೆ (ವ. 12), ಇನ್ನೊಂದು "ಆತನು" ಎಂಬುದು ಯೇಸುವನ್ನು ಸೂಚಿಸುತ್ತದೆ:

"*ದೇವರ* ಸಾಮರ್ಥ್ಯದಲ್ಲಿ ನಂಬಿಕೆಯಿಡುವದರ ಮೂಲಕ" (ವ. 12; ಒತ್ತಿ ಹೇಳಿದ್ದು ನನ್ನದು).

"ಸತ್ತವರಾಗಿದ್ದ ನಿಮ್ಮನ್ನು ಸಹ [ದೇವರು] ಕ್ರಿಸ್ತನೊಂದಿಗೆ ಬದುಕಿಸಿದ್ದಾನೆ" (ವ. 13).

"ಆತನು [ದೇವರು] . . . ಅದನ್ನು . . . ಇಲ್ಲದಂತಾಗ ಮಾಡಿದನು" (ವ. 14).
"ಆತನು [ದೇವರು] ದೊರೆತನಗಳನ್ನೂ . . . ನಿರಾಯುಧರನ್ನಾಗಿ ಮಾಡಿ. . . ಶಿಲುಬೆಯ [ಯೇಸು] ಅವುಗಳನ್ನು ಜಯಿಸಲ್ಪಟ್ಟವುಗಳನ್ನಾಗಿ" (ವ. 15).

"ದೊರೆತನಗಳನ್ನೂ" ಎಂಬುದು ἀρχή (*archē*) ಎಂಬ ಪದದಿಂದ ಅನುವಾದಿಸಲ್ಪಟ್ಟಿರುತ್ತದೆ, ಅದು ಕೆಲವು ಸಾರಿ "ಆರಂಭ," "ಸರ್ವೋಚ್ಚತೆ," ಅಥವಾ "ಮೂಲ" ಎಂಬ ಅರ್ಥವನ್ನು ಕೊಡುತ್ತದೆ. "ಅಧಿಕಾರಗಳನ್ನೂ" (ἐξουσία, *exousia*) ಎಂಬ ಪದವು ಅಧಿಕಾರವನ್ನು ಚಲಾಯಿಸುವದಕ್ಕಿರುವ ಹಕ್ಕನ್ನು ಸೂಚಿಸುತ್ತದೆ (1:11ರ ಮೇಲಿನ ಚರ್ಚೆಯನ್ನು ನೋಡಿರಿ). ಈ ಗ್ರೀಕ್ ಪದಗಳು ಪೌಲನ ಬರಹಗಳಲ್ಲಿ ಒಟ್ಟಾಗಿ ಬೇರೆ ಕಡೆಗಳಲ್ಲಿ ಕಾಣಿಸಿಕೊಳ್ಳುತ್ತವೆ (1 ಕೊರಿಂಥ 15:24; ಎಫೆಸ 1:21; 3:10; 6:12; ಕೊಲೊಸ್ಸೆ 1:16; 2:10; ತೀತನಿಗೆ 3:1). ಈ ವಾಕ್ಯಭಾಗಗಳಲ್ಲಿ ಆತನು ಮನುಷ್ಯರ ಮೇಲೆ ತಮ್ಮ ಅಧಿಕಾರವನ್ನು ಬಳಸುವ ಅಸ್ತಿತ್ವದಲ್ಲಿರುವ ಶಕ್ತಿಗಳು ಅಥವಾ ಅಧಿಕಾರಗಳು ಎಂಬರ್ಥದಲ್ಲಿ ಹೇಳಿದನು. (ಎಫೆಸ 6:12ರಲ್ಲಿ ಭ್ರಷ್ಟ ಸರ್ಕಾರಗಳು ಮತ್ತು ದುಷ್ಟ ಅಧಿಕಾರಗಳನ್ನು ಸೇರಿರುತ್ತವೆ.) ಅವುಗಳು ದೇವರಿಗೆ ವಿರುದ್ಧವಾಗಿ ಕೆಲಸ ಮಾಡುತ್ತವೆ, ಮನುಷ್ಯರಿಗೆ ಅಪರಾಧ ನಿರ್ಣಯವಾಗಬೇಕೆಂದು ಅಪೇಕ್ಷಿಸುತ್ತವೆ, ಮತ್ತು ಅವುಗಳು ರಕ್ಷಣೆಗೆ ಮತ್ತು ರಕ್ಷಕನಿಗೆ ವೈರಿಗಳಾಗಿರುತ್ತವೆ. ಇವುಗಳನ್ನು ಯಾರ ಮೂಲಕ ಧರ್ಮಶಾಸ್ತ್ರ ಕೊಡಲ್ಪಟ್ಟಿತೋ ಆ ದೇವದೂತ ಅಧಿಕಾರಗಳೆಂದು ಅರ್ಥನಿರೂಪಣೆ ಮಾಡುವವರು (ಅಪೊಸ್ತಲರ ಕೃತ್ಯಗಳು 7:38; ಗಲಾತ್ಯ 3:19) ಪೌಲನು ಸಾಮಾನ್ಯವಾಗಿ ಬಳಸಿದ್ದಕ್ಕಿಂತಲೂ ಈ ಪದಗಳನ್ನು ವ್ಯತ್ಯಾಸವಾಗಿ ಅನ್ವಯಿಸುತ್ತಾರೆ.

ದೇವರು ಈ ಅಧಿಕಾರಗಳನ್ನು ಹೇಗೆ ನಿರಾಯುಧರನ್ನಾಗಿ ಮಾಡಿದನು, ಅವುಗಳ ಮೇಲೆ ಜಯಗೊಂಡನು, ಮತ್ತು ಅವುಗಳನ್ನು ಬಹಿರಂಗವಾಗಿ ಮೆರಸುತ್ತಾ ಪ್ರದರ್ಶಿಸಿದನು ಎಂಬ ವಿಷಯದಲ್ಲಿ ಮತ್ತೊಂದು ಸಮಸ್ಯೆಯು ಉದ್ಭವವಾಗುತ್ತದೆ. ಆತನು ಅವುಗಳನ್ನು ಯೇಸುವಿನ ಮರಣ ಹಾಗೂ ಪುನರುತ್ಥಾನಗಳ ಮುಖಾಂತರ ಜಯಿಸುವ ಮತ್ತು ಪರಾಜಯಗೊಳಿಸುವ ಮೂಲಕ ಇದನ್ನು ಸಾಧಿಸಿದನು. ಅಂಥ ಶಕ್ತಿಗಳನ್ನು ಪರಾಜಯಗೊಳಿಸುವದರಲ್ಲಿ ಯಾವ ಅರ್ಥದಲ್ಲಿಯೂ, ಒಳ್ಳೇ, ಬಂಡಾಯವೇಳದ ದೇವದೂತ ಜೀವಿಗಳನ್ನು ನಿರಾಯುಧಗೊಳಿಸುವದಕ್ಕೆ ಅನ್ವಯವಾಗುವದಿಲ್ಲ.

ಯೇಸುವಿನ ಮರಣ ಹಾಗೂ ಪುನರುತ್ಥಾನಗಳ ಮೂಲಕ, ದೇವರು ತನ್ನ ಯೋಜನೆಗೆ ವಿರೋಧಿಗಳಾಗಿದ್ದವರನ್ನೆಲ್ಲಾ ಪರಾಜಯಗೊಳಿಸಿದನು. ಯೇಸು ತನ್ನ ಪುನರುತ್ಥಾನದ ಮೂಲಕ, ತನ್ನನ್ನು ಮರಣಕ್ಕೆ ಒಪ್ಪಿಸಿದ ಯೆಹೂದಿ ನಾಯಕರ ಮೇಲೆ, ಪಿಶಾಚನ ಶಕ್ತಿಗಳ ಮೇಲೆ, ಮತ್ತು ಇತರ ಎಲ್ಲಾ ವಿರೋಧಿ ಶಕ್ತಿಗಳ ಮೇಲೆ ಜಯವನ್ನು ಸಾಧಿಸಿದನು. ಯೇಸು ಪೇತ್ರನಿಗೆ ತನ್ನನ್ನು ಬಂಧಿಸುವದಕ್ಕೆ ಬಂದಿರುವ ಯೆಹೂದಿ ಸಿಪಾಯಿಗಳಿಗೆ ಆತನ ಮೇಲೆ ಯಾವ ಅಧಿಕಾರವೂ ಇರುವದಿಲ್ಲ ಎಂಬದಾಗಿ ಹೇಳಿದನು (ಮತ್ತಾಯ 26:53). ಪ್ರಪಂಚದಲ್ಲಿಯೇ ಅತ್ಯಂಥ ಶಕ್ತಿಶಾಲಿ ಸಾಮ್ರಾಜ್ಯಶಾಹಿ ಅಧಿಕಾರಕ್ಕೆ ತನ್ನ ಮೇಲೆ ಯಾವ ಅಧಿಕಾರವೂ ಇರುವದಿಲ್ಲ ಎಂಬದಾಗಿ ಯೇಸು ಪಿಲಾತನಿಗೆ ಹೇಳಿದನು (ಯೋಹಾನ 19:11). ಆತನು ತನ್ನ ಮರಣ ಹಾಗೂ ಪುನರುತ್ಥಾನಗಳ ಮೂಲಕ, ತನ್ನ ಮೇಲೆ ಮರಣಕ್ಕೆ

ಯಾವದೇ ಅಧಿಕಾರವಿಲ್ಲ ಎಂಬುದನ್ನು ತೋರಿಸಿದನು (ಅಪೊಸ್ತಲರ ಕೃತ್ಯಗಳು 2:24). ಆತನು ತನ್ನ ಮರಣದ ಮೂಲಕ ಪಿಶಾಚನ ಅಧಿಕಾರವನ್ನು ನಾಶಗೊಳಿಸಿದನು (ಇಬ್ರಿಯ 2:14; ಅಲ್ಲದೆ 1 ಕೊರಿಂಥ 15:55-57 ಸಹ ನೋಡಿರಿ) ಮತ್ತು ದುರಾತ್ಮ ಶಕ್ತಿಗಳಾದ ಆತನ ದುಷ್ಟ ದೂತರ ಅಧಿಕಾರವನ್ನು ನಾಶಗೊಳಿಸಿದನು (ಮತ್ತಾಯ 25:41).

ಈ ವಾಕ್ಯಭಾಗದಲ್ಲಿ "ಅಧಿಕಾರಗಳನ್ನೂ" ಎಂಬುದು, ಈ ಮುಂಚೆ ಕೊಲೊಸ್ಸೆಯವರು "ಅಂಧಕಾರದ ದೊರೆತನಗಳಿಂದ [ἐξουσία, *exousia*, ಇದೇ ಪದವು ವ. 15ರಲ್ಲಿ "ಅಧಿಕಾರಗಳು" ಎಂದು ಅನುವಾದಿಸಲ್ಪಟ್ಟಿದೆ] ಬಿಡಿಸಲ್ಪಟ್ಟಿದ್ದಾರೆಂದು ಹೇಳುವಾಗ ಪ್ರಸ್ತಾಪಿಸಿದ ಅದೇ ಪದವಾಗಿರುತ್ತದೆ (1:13; ಅಲ್ಲದೆ ಲೂಕ 22:53ನ್ನು ಸಹ ನೋಡಿರಿ). ಹೀಗೆ, ಯೇಸುವಿನ ಮೂಲಕ, ದೇವರು ಅಂಧಕಾರದ "ದೊರೆತನ" ಅಥವಾ "ಅಧಿಕಾರಗಳನ್ನು" ನಿರಾಯುಧರನ್ನಾಗಿ ಮಾಡುವ ಮೂಲಕ ಮತ್ತು ಕೊಲೊಸ್ಸೆಯವರನ್ನು ಅವುಗಳಿಂದ ಬಿಡಿಸುವ ಮೂಲಕ ಅವುಗಳನ್ನು ಪರಾಜಯಗೊಳಿಸಿದನು. ಶಿಲುಬೆಯ ಮೇಲಿನ ತನ್ನ ಮರಣ ಹಾಗೂ ತನ್ನ ಪುನರುತ್ಥಾನದ ಮೂಲಕ, ತಾನು ಎಲ್ಲಾ ವಿರೋಧಿ ಶಕ್ತಿಗಳನ್ನು ವಿಜಯೋತ್ಸವದಿಂದ ಪರಾಜಯಗೊಳಿಸಿದ್ದನ್ನು ಮೆರಸುತ್ತಾ ತೋರಿಸಿದನು (ಯೋಹಾನ 12:31). ಆತನ ವಿಜಯವು ಆತನ ಎಲ್ಲಾ ಹಿಂಬಾಲಕರಿಗೆ ವಿಜಯವನ್ನು ಒದಗಿಸಿರುತ್ತದೆ (1 ಕೊರಿಂಥ 15:57; 2 ಕೊರಿಂಥ 2:14).

ಯೇಸುವನ್ನು ವಿರೋಧಿಸುವಂತೆ ಸೈತಾನನು ಜನರನ್ನು ಪ್ರೇರಣೆಗೊಳಿಸುತ್ತಾನೆ. ಬಿತ್ತುವವನ ಸಾಮ್ಯದಲ್ಲಿ, ವಾಕ್ಯವನ್ನು ಕೇಳಿದವರು ಅದನ್ನು ನಂಬದ ಹಾಗೆ ಸೈತಾನನು ಅವರ ಹೃದಯಗಳಿಂದ ವಾಕ್ಯವನ್ನು ಕಸಿದುಕೊಂಡು ಬಿಡುತ್ತಾನೆಂದು ಯೇಸು ಕಲಿಸಿದನು (ಮತ್ತಾಯ 13:19; ಮಾರ್ಕ 4:15; ಲೂಕ 8:12). ಯೇಸುವಿನ ವಿಷಯದಲ್ಲಿ ತಪ್ಪು ಹೇಳಿಕೆಯನ್ನು ನೀಡುವಂತೆ ಆತನು ಪೇತ್ರನನ್ನು ಪ್ರಭಾವಗೊಳಿಸಿದನು (ಮತ್ತಾಯ 16:22, 23) ಮತ್ತು ಆತನನ್ನು ಗೋಧಿಯಂತೆ ಒನೆಯಬೇಕೆಂದು ಪ್ರಯತ್ನಿಸಿದನು (ಲೂಕ 22:31). ಯೂದನು ಯೇಸುವನ್ನು ಹಿಡುಕೊಡುವಂತೆ ಸೈತಾನನು ಆತನಲ್ಲಿ ಕ್ರಿಯೆ ಮಾಡಿದನು ಮತ್ತು ಆತನಲ್ಲಿ ಸೇರಿಕೊಂಡನು (ಲೂಕ 22:3; ಯೋಹಾನ 13:2, 27). ಯೇಸುವು ತನ್ನನ್ನು ವಿರೋಧಿಸುವ ಯೆಹೂದ್ಯರಿಗೆ ಅವರ ತಂದೆಯು ಸೈತಾನನೆಂದೂ ಅವರು ಪಿಶಾಚನ ಇಚ್ಛೆಗಳನ್ನು ನೆರವೇರಿಸುವವರೆಂದೂ ಹೇಳಿದನು (ಯೋಹಾನ 8:44). ಆತನು ತನ್ನ ಚಿತ್ತವನ್ನು ಮಾಡುವವರನ್ನು ತನ್ನ ಬಂಧಿಗಳಾಗಿಟ್ಟುಕೊಳ್ಳುತ್ತಾನೆ (2 ತಿಮೊಥೆ 2:26).

ಯೋಹಾನನು ಹೀಗೆ ಬರೆಯುತ್ತಾನೆ, "ಸೈತಾನನ ಕೆಲಸಗಳನ್ನು ಲಯಮಾಡುವದಕ್ಕೋಸ್ಕರವೇ ದೇವಕುಮಾರನು ಪ್ರತ್ಯಕ್ಷನಾದನು" (1 ಯೋಹಾನ 3:8). ಯೇಸು ಸನ್ನಿಹಿತವಾಗಿದ್ದ ತನ್ನ ಶಿಲುಬೆಗೇರಿಸಲ್ಪಡುವಿಕೆಯನ್ನು ಮತ್ತು ನಂತರದಲ್ಲಿ ಸಾಧಿಸಲಿದ್ದ ಲೋಕದ ಪ್ರಭುತ್ವಗಳ ಮೇಲಿನ ತನ್ನ ವಿಜಯವನ್ನು ನೋಡುವವನಾಗಿ, ಹೀಗೆ ಹೇಳಿದನು, "ಈಗ ಈ ಲೋಕಕ್ಕೆ ತೀರ್ಪು ಆಗುತ್ತದೆ; ಈಗ ಇಹಲೋಕಾಧಿಪತಿಯು ಹೊರಗೆ ನೂಕಲ್ಪಡುವನು" (ಯೋಹಾನ 12:31). ಯೇಸು ಬೇರೆ ಕಡೆಗಳಲ್ಲಿ ಸಹ ಸೈತಾನನನ್ನು "ಇಹಲೋಕಾಧಿಪತಿ" ಎಂದು ಕರೆಯುತ್ತಾನೆ (ಯೋಹಾನ 16:11; ನೋಡಿರಿ 14:30). ಯೇಸು ಸೈತಾನನ ಮತ್ತು ಸೈತಾನನ ಚಿತ್ತವನ್ನು ನೆರವೇರಿಸುತ್ತಿದ್ದ ಲೋಕದ ದೊರೆತನಗಳ ಪ್ರತಿಯೊಂದು ಪ್ರಯತ್ನಗಳನ್ನು ಸೋಲಿಸಿದನು.

ಸೈತಾನನು ಎಲ್ಲಾ ದೆವ್ವಗಳ ಅಥವಾ ದುರಾತ್ಮಗಳಿಗೆ ದೊರೆಯಾಗಿರುತ್ತಾನೆ (ಮತ್ತಾಯ 9:34; 12:24; ಮಾರ್ಕ 3:22; ಲೂಕ 11:15), ಅವರು "ದೇವದೂತರು," ಅಥವಾ ಸಂದೇಶವಾಹಕರು (ἄγγελοι, *angeloi*; ಮತ್ತಾಯ 25:41), ಅವರ ಮೂಲಕವಾಗಿ ಆತನು ಕ್ರಿಯೆ ಮಾಡುವವನಾಗಿದ್ದಾನೆ. ಆತನು ವಾಯುಮಂಡಲದಲ್ಲಿ ಅಧಿಕಾರ ನಡಿಸುವ ಅಧಿಪತಿ ಆಗಿದ್ದಾನೆ (ಎಫೆಸ 2:2) ಮತ್ತು ಈ ಲೋಕದ ಅಧಿಪತಿ ಅಥವಾ ದೇವರಾಗಿದ್ದಾನೆ (ಯೋಹಾನ 12:31; 2 ಕೊರಿಂಥ 4:4). ಪೌಲನು ಸೈತಾನನ ಶಕ್ತಿಗಳನ್ನು "ಈ ಅಂಧಕಾರದ ಲೋಕಾಧಿಪತಿಗಳ ಮೇಲೆಯೂ ಆಕಾಶ ಮಂಡಲದಲ್ಲಿರುವ ದುರಾತ್ಮಗಳ ಸೇನೆಯ ಮೇಲೆಯೂ" ಎಂದು ಕರೆದನು (ಎಫೆಸ 6:12). ದೇವರು ಯೇಸು ಕ್ರಿಸ್ತನ ಮೂಲಕ ಜಯಿಸಿದಂಥ "ದೊರೆತನಗಳು ಮತ್ತು ಅಧಿಕಾರಗಳು" ಇವೇ ಆಗಿರುತ್ತವೆ.

ದೇವರು ಯೇಸುವಿನ ಮರಣ, ಪುನರುತ್ಥಾನ ಮತ್ತು ಪರಲೋಕಾರೋಹಣದ ಮೂಲಕ ಮಾಡಿದ ಎಲ್ಲಾ ಕಾರ್ಯದ ಮೂಲಕ, ಆತನು ತನ್ನ ಮೇಲೆ ಅಧಿಕಾರ ಹೊಂದಿದಂತೆ ತೋರಿದ ಮತ್ತು ತಾನು ಬಿಡಿಸಿದವರ ಮೇಲೆ ಅಧಿಕಾರ ಹೊಂದಿದ್ದ ಎಲ್ಲಾ ಶಕ್ತಿಗಳ ಅಧಿಕಾರವನ್ನು ನಿರಾಯುಧಗೊಳಿಸಿದನು – ಅಂದರೆ, ಆತನು "ಕಸಿದುಕೊಂಡನು." ಯೇಸುವಿನ ಮೂಲಕ, ದೇವರು ಅವುಗಳ ದುಷ್ಟತನವನ್ನು ಬಯಲುಗೊಳಿಸಿದನು ಮತ್ತು ತನ್ನ ಸಾಮರ್ಥ್ಯವನ್ನು ಪ್ರಕಟಗೊಳಿಸಿದನು. ಈ ಕಾರಣಕ್ಕಾಗಿ, ಕ್ರೈಸ್ತರು ಭರವಸದಿಂದಿರಬಹುದು. ಕ್ರಿಸ್ತನ ಮೂಲಕ, ನಾವು ಸೈತಾನನ ದೊರೆತನದ ಮೇಲೆ, ಎಲ್ಲಾ ಲೋಕಾಧಿಪತಿಗಳ ಮೇಲೆ, ಮತ್ತು ಆತನ ನಿಯಂತ್ರಣದಲ್ಲಿರುವ ದುಷ್ಕೃತ್ಯ ಮಾಡುವವರ ಮೇಲೆ ಜಯವನ್ನು ಗಳಿಸಬಹುದು.

ಲೋಕವನ್ನು ಜಯಿಸುವ ವಿಜಯವು ನಂಬಿಕೆಯ ಮೂಲಕ ಬರುತ್ತದೆ (1 ಯೋಹಾನ 5:4). ಕೊಲೊಸ್ಸೆಯವರು ದೇವರ ಸಾಮರ್ಥ್ಯದಲ್ಲಿ ನಂಬಿಕೆಯಿಟ್ಟಿದ್ದರ ನಿಮಿತ್ತವಾಗಿ ದುಷ್ಟ ಶಕ್ತಿಗಳ ಮೇಲೆ ಜಯಗೊಂಡವರಾಗಿದ್ದರು. ದೀಕ್ಷಾಸ್ನಾನದಲ್ಲಿ ಅವರು ಯೇಸುವಿನ ಪುನರುತ್ಥಾನದ ಜಯದಲ್ಲಿ ಪಾಲುಗಾರರಾಗಿದ್ದರು. Arnold ಈ ಅಭಿಪ್ರಾಯ ಪಡುತ್ತಾನೆ:

> ಕೊಲೊಸ್ಸೆಯವರು ಆರಂಭದಲ್ಲಿ ಕ್ರಿಸ್ತನಲ್ಲಿ ಐಕ್ಯಗೊಳಿಸಲ್ಪಟ್ಟಾಗಲೇ ದೇವರ ಶಕ್ತಿಯ (ενεργειας του θεου, *energeias tou theou*; 2:12) ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದ ಶಕ್ತಿ – ಕಾರ್ಯಸಾಧಕತೆಯಲ್ಲಿ ನಂಬಿಕೆಯನ್ನು ಚಲಾಯಿಸಿದ್ದರು. ಬರಹಗಾರನು ಈಗ ವಾಚಕರು ತಮಗಿರುವ *stoicheia* ಶಕ್ತಿ ಮತ್ತು ದೊರೆತನಗಳು ಹಾಗೂ ಅಧಿಕಾರಗಳ ಭಯದ ಕಾರಣದಿಂದ ವಿವಿಧ ಆಚಾರಗಳಿಗೆ ತಮ್ಮನ್ನು ಅಧೀನಪಡಿಸಿಕೊಳ್ಳದೆ "ಅಧಿಕಾರಗಳ" ಮೇಲೆ ದೇವರು/ಕ್ರಿಸ್ತನಿಗಿರುವ ಶಕ್ತಿಯ ಮೇಲೆ ಅದೇ ರೀತಿಯ ನಂಬಿಕೆಯನ್ನಿಡುವಂತೆ ಅವರನ್ನು ಪ್ರೋತ್ಸಾಹಿಸುತ್ತಾನೆ.[69]

## "ಜಯೋತ್ಸವ ಮಾಡುತ್ತಾನೋ ಎಂಬಂತೆ ಶಿಲುಬೆಯ ಮೇಲೆ ಅವುಗಳನ್ನು ಜಯಿಸಲ್ಪಟ್ಟವುಗಳನ್ನಾಗಿ ಮೆರಸುತ್ತಾ ತೋರಿಸಿದನು"

ದೇವರು ಯೇಸುವಿನ ಮೂಲಕ ಅವುಗಳ ಮೇಲೆ ಸಾಧಿಸಿದ ಜಯದ ಮುಖಾಂತರ ಎಲ್ಲಾ ವಿರೋಧಿ ಶಕ್ತಿಗಳ ಬಲಹೀನತೆಯನ್ನು ಬಯಲುಗೊಳಿಸಿದನು ಮತ್ತು ಪ್ರದರ್ಶಿಸಿದನು. "ತೋರಿಸಿದನು" ಎಂದು ಹೇಳುವ ಮೂಲಕ, ಪೌಲನ ತಾತ್ಪರ್ಯವು ದೊರೆತನಗಳ ಮತ್ತು

ಅಧಿಕಾರಗಳ ನಿಜಸ್ವರೂಪ, ಸಂಪೂರ್ಣ ಶಕ್ತಿಹೀನತೆಯನ್ನು ಮತ್ತು ಅಸಹಾಯಕತೆಯನ್ನು ಬಯಲುಗೊಳಿಸಿದನು ಎಂದಾಗಿತ್ತು. ಹೀಗೆ ಮಾಡುವ ಮೂಲಕ, ತನ್ನ ಶಕ್ತಿಗೆ ಸಂಬಂಧಿಸಿದಂತೆ ಅವುಗಳು ಎಷ್ಟು ಬಲಹೀನ ಎಂಬುದನ್ನು ಬಹಿರಂಗವಾಗಿ ತೋರಿಸಿದನು. ಯೇಸುವಿನ ಕಾರ್ಯದ ಮೂಲಕವಾಗಿ, ದೇವರು ಸೈತಾನನಿಗೆ ಅಧೀನವಾಗಿರುವ ಶಕ್ತಿಶಾಲಿ ಅಧಿಕಾರಗಳನ್ನು ಶಕ್ತಿಹೀನಗೊಳಿಸಿದನು – ಅವುಗಳನ್ನು ನಾಶಗೊಳಿಸುವ ಮೂಲಕವಲ್ಲ, ಆದರೆ ಅವುಗಳನ್ನು ವಶಪಡಿಸಿಕೊಳ್ಳುವ ಮೂಲಕ ಮತ್ತು ಸರ್ವಶಕ್ತ ದೇವರ ಕಾರ್ಯದ ಮುಂದೆ ನಿಲ್ಲಲು ಅವುಗಳಿಗಿರುವ ಅಸಮರ್ಥತೆಯನ್ನು ತೋರ್ಪಡಿಸುವ ಮೂಲಕ ಮಾಡಿದನು.

ಸೈತಾನನು ಭವಿಷ್ಯವನ್ನು ಮುಂದಾಗಿ ಕಾಣಲಾರನು, ಮತ್ತು ಆತನ ಕೈಗಳಲ್ಲಿ ಸಾಧನಗಳಾಗಿರುವವರು ಸಹ ಭವಿಷ್ಯವನ್ನು ತಿಳಿದುಕೊಳ್ಳಲಾರರು. ಕೊರಿಂಥದವರಿಗೆ ಬರೆಯುವ ವೇಳೆ, ಪೌಲನು "ಇದನ್ನು ಇಹಲೋಕಾಧಿಪತಿಗಳಲ್ಲಿ ಯಾರೂ ಅರಿಯಲಿಲ್ಲ; ಅರಿತಿದ್ದರೆ ಅವರು ಮಹಿಮೆಯುಳ್ಳ ಕರ್ತನನ್ನು ಶಿಲುಬೆಗೆ ಹಾಕಿಸುತ್ತಿರಲಿಲ್ಲ" (1 ಕೊರಿಂಥ 2:8). ಹಿಂದಿನ ಕಾಲದಲ್ಲಿ ಅವರು ಬಲಿಷ್ಠರಂತೆ ತೋರಿದರು, ಆದರೆ ಅವರು ಲೋಕದ ಬಲಹೀನವಾದ ಹಾಗೂ ಬಾಲಬೋಧೆಯ ಸಂಗತಿಗಳ ನಿಯಂತ್ರಣದಲ್ಲಿರುವವರು ಎಂದು ಬಯಲುಗೊಳಿಸಲ್ಪಟ್ಟರು (ಗಲಾತ್ಯ 4:9). ಅವರು ತಮ್ಮ ಪರಾಜಯವನ್ನು ಎದುರು ನೋಡಿರಲಿಲ್ಲ, ಅದನ್ನು ದೇವರು ಜಯೋತ್ಸವದೊಡನೆ ಮೆರಸುತ್ತಾ ತೋರಿಸಿದನು.

ಯೇಸುವಿನ ಮರಣದ ಮೂಲಕ ತಾವು ದೇವರನ್ನು ಪರಾಜಯಗೊಳಿಸಬಲ್ಲೆವೆಂದು ಭೂಲೋಕದ ದುಷ್ಟ ಶಕ್ತಿಗಳು ಮತ್ತು ಸೈತಾನನ ಅಧಿಕಾರಗಳು ಭಾವಿಸಿದ್ದವು. ಆತನು ಶಿಲುಬೆಗೆ ಹಾಕಲ್ಪಡುವಂತೆ ಮಾಡುವ ಮೂಲಕ, ಆತನ ಮೇಲೆ ತಾವು ಜಯ ಗಳಿಸಿದೆವು ಎಂದು ಭಾವಿಸಿದ್ದರು. ಅವರು ಪುನರುತ್ಥಾನವನ್ನು ಎದುರು ನೋಡಿರಲಿಲ್ಲ! ಅವರು ತಮ್ಮ ಸ್ವಂತ ಕೆಡಕಿನ ಕೃತ್ಯಗಳಿಂದಾಗಿ ಪರಾಜಯಗೊಂಡರು.

**ಆತನ ಮೂಲಕ** (ἐν αὐτῷ, *en autō*) ಎಂಬುದು ಈ ಸನ್ನಿವೇಶದಲ್ಲಿ ಬಹುತೇಕವಾಗಿ "ಅದು" (KJV; NKJV; TNIV), "ಶಿಲುಬೆ" (NIV) ಎಂಬುದಕ್ಕಿಂತ ಯೇಸುವನ್ನು ಸೂಚಿಸುತ್ತದೆ (RSV; NASB). ಈ ತರ್ಜುಮೆಗಳಲ್ಲಿ ಅಡಿಟಿಪ್ಪಣಿಗಳು ಇವೆರಡರಲ್ಲಿ ಯಾವದಾದರೊಂದು ವ್ಯಾಕರಣಾತ್ಮಕವಾಗಿ ಸಾಧ್ಯವಿರುತ್ತದೆಂದು ಸೂಚಿಸುತ್ತವೆ. ಹಾಗಾದರೆ, ಸನ್ನಿವೇಶವು ಅರ್ಥವನ್ನು ನಿರ್ಧರಿಸುವದಕ್ಕೆ ತಳಹದಿಯಾಗಿರತಕ್ಕದ್ದು. ಮುಂದಿನ ವಚನಗಳಲ್ಲಿ ಎಲ್ಲವೂ ಯೇಸುವಿನಲ್ಲಿ ಮತ್ತು ಮೂಲಕ ಸಾಧಿಸಲ್ಪಡುತ್ತದಾದ್ದರಿಂದ (2:9–11, 12, 13), ದೇವರು ಆತನ ಮೂಲಕ ಕಾರ್ಯ ಮಾಡುವದನ್ನು ಮುಂದುವರೆಸುತ್ತಿದ್ದಾನೆಂಬುದು ಇಲ್ಲಿನ ಸನ್ನಿವೇಶಕ್ಕೆ ಉತ್ತಮವಾಗಿ ಹೊಂದಾಣಿಕೆಯಾಗುತ್ತದೆ.

**ಮೆರಸುತ್ತಾ ತೋರಿಸಿದನು** ಎಂಬುದಕ್ಕಾಗಿರುವ ಗ್ರೀಕ್ ಪದ (δειγματίζω, *deigmatizō*) ಎಂಬುದು ಬೈಬಲ್ಯೇತರ ಸಾಹಿತ್ಯದಲ್ಲಿ ಸಾರ್ವಜನಿಕವಾಗಿ ಅವಮಾನಗೊಳಿಸುವದನ್ನು ಸೂಚಿಸಲು ಬಳಸಲ್ಪಟ್ಟಿದೆ. ಹೊಸ ಒಡಂಬಡಿಕೆಯಲ್ಲಿ ಇದು ಕಾಣಿಸಿಕೊಳ್ಳುವ ಇನ್ನೊಂದು ಏಕೈಕ ಸ್ಥಳವೆಂದರೆ ಮರಿಯಳಿಗೆ ಕಳಂಕ ಮತ್ತು ಅವಮಾನ ಆಗಬಾರದೆಂದು ಆಕೆಯನ್ನು ಬೈಲಿಗೆ ತರಲು ಯೋಸೇಫನಿಗೆ ಮನಸ್ಸಿಲ್ಲವೆಂಬುದನ್ನು

ಸೂಚಿಸುವ ಸಂದರ್ಭದಲ್ಲಿ ಬಳಸಲಾಗಿದೆ (ಮತ್ತಾಯ 1:19).

ಯೇಸು ಶಿಲುಬೆಯ ಮೇಲೆ ಹೊಂದಿದ ತನ್ನ ಮರಣದ ಮೂಲಕ ಸಾರ್ವಜನಿಕರ ಎದುರು ಅವಮಾನ ಮತ್ತು ನಾಚಿಕೆಗೆ ಗುರಿ ಮಾಡಲ್ಪಟ್ಟಾಗ್ಯೂ (ಇಬ್ರಿಯ 12:2), ದೇವರು ಯಾವುದು ಸೋಲು ಎಂಬಂತೆ ಕಂಡಿತೋ ಅದನ್ನು ಪುನರುತ್ಥಾನದಲ್ಲಿ ಒಂದು ಮಹಿಮೆಯುಳ್ಳ ವಿಜಯವಾಗಿ ಮಾರ್ಪಡಿಸಿದನು. ಮರಣವು ಆತನನ್ನು ಹಿಡಿದಿಟ್ಟುಕೊಳ್ಳುವದಕ್ಕಾಗಲಿಲ್ಲ (ಅಪೊಸ್ತಲರ ಕೃತ್ಯಗಳು 2:24). ಯೇಸುವನ್ನು ಪುನಃ ಬದುಕಿಸುವ ಮೂಲಕ, ದೇವರು ಆತನ ಮರಣಕ್ಕೆ ಪ್ರಚೋದನೆಯನ್ನು ಮಾಡಿದ್ದ ದುಷ್ಟ ಶಕ್ತಿಗಳ ವ್ಯರ್ಥ ಪ್ರಯತ್ನವನ್ನು ಬಯಲುಗೊಳಿಸಿದನು.

"ಜಯೋತ್ಸವ" (θριαμβεύω, *thriambeuō*) ಸಾದೃಶ್ಯವು ಬೇರೊಂದು ಕಡೆ ಕೇವಲ 2 ಕೊರಿಂಥ 2:14ರಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ, ವಿಜಯಿಶಾಲಿಗಳಾದ ರೋಮನ್ ಸೇನಾನಾಯಕರ ಒಂದು ಪದ್ಧತಿಗೆ ಸೂಚ್ಯಾರ್ಥವಾಗಿರುತ್ತದೆ.

> ಪೌಲನು ರೋಮನ್ ಜಯೋತ್ಸವದ ಸ್ಪಷ್ಟವಾದ ಚಿತ್ರಣವನ್ನು ಉಪಯೋಗಿಸುವವನಾಗಿ ಬಹಿರಂಗವಾಗಿ ಮೆರಸುವ ವಿಚಾರವನ್ನು ಸವಿಸ್ತಾರಗೊಳಿಸುತ್ತಾನೆ. ಒಂದು ಯುದ್ಧದಲ್ಲಿ ಸೇನಾನಾಯಕನೊಬ್ಬನು ತನ್ನ ಸೇನೆಯನ್ನು ಜಯದಲ್ಲಿ ನಡಿಸುವಾಗ, ಹಿಂದಿರುಗುವ ಸೇನೆಯು ತಮ್ಮ ಜಯವನ್ನು ಒಂದು "ವಿಜಯೋತ್ಸವದ ಮೆರವಣಿಗೆ" (*thriambeuo*) ಮೂಲಕ ಕೊಂಡಾಡುತ್ತಿದ್ದರು. ಯಶಸ್ಸುಗೊಂಡ ಸೇನಾನಾಯಕನು ಬೀದಿಗಳಲ್ಲಿ ವಿಜಯೋತ್ಸವದ ಮೆರವಣಿಗೆ ಮುಂದೆ ಶಿಸ್ತಿನಿಂದ ನಡೆದು ಹೋಗುತ್ತಿದ್ದರೆ ಆತನ ಹಿಂದೆ ಸೇನೆಯು ಜಯದ ಗೀತೆಗಳನ್ನು ಹಾಡುತ್ತಾ ತಮ್ಮ ವಿಜಯವನ್ನು ಕುಣಿದಾಡುತ್ತಾ ಪ್ರದರ್ಶಿಸುವವರಾಗಿ ಬರುತ್ತಿದ್ದರು. ಸೋಲಿಸಲ್ಪಟ್ಟ ಅರಸನು ಆತನ ಬದುಕುಳಿದ ಸೈನಿಕರೂ ಯುದ್ಧದ ಹೊಡೆದ ಎಲ್ಲಾ ಕೊಳ್ಳೆಗಳ ಸಮೇತ ಎಲ್ಲರೂ ನೋಡುವಂತೆ ಮೆರವಣಿಗೆ ಮಾಡಲಾಗುತ್ತಿತ್ತು.[70]

ದುಷ್ಟಶಕ್ತಿಗಳನ್ನು ಸೋಲಿಸಿದ ಬಳಿಕ, ಪೌಲನು ಅವುಗಳನ್ನು ಒಂದು ಪರಾಜಯಗೊಂಡ ಮತ್ತು ಅವಮಾನಕ್ಕೊಳಗಾದ ಸೇನೆಯಂಬಂತೆ ತೋರಿಸಲ್ಪಡುವ ರೀತಿಯಲ್ಲಿ ಚಿತ್ರಿಸಿದನು. ರೋಮನ್ ಸೇನಾನಾಯಕರು, ಯಶಸ್ವಿಯಾದ ಸೇನಾ ಕಾರ್ಯಾಚಾರಣೆಯ ಬಳಿಕ ತಮ್ಮ ಸೆರೆಯಾಳುಗಳನ್ನು ಬೆತ್ತಲೆಗೊಳಿಸಿ ಅವರನ್ನು ಸಾರ್ವಜನಿಕರ ಎದುರಿನಲ್ಲಿ ದೀನಾವಸ್ಥೆಯಲ್ಲಿ ಮೆರವಣಿಗೆ ಮಾಡುತ್ತಿದ್ದರು. ಸೋಲಿಸಲ್ಪಟ್ಟ ವೈರಿಗಳನ್ನು ನೋಡಿದಾಗ, ಜನರಿಗೆ ತಾವು ಇನ್ನು ಮೇಲೆ ಅವರಿಗೆ ಭಯ ಪಡುವ ಕಾರಣವೇ ಇಲ್ಲ ಎಂದು ಗ್ರಹಿಸಿಕೊಳ್ಳುತ್ತಿದ್ದರು.

ದೇವರು ಯೇಸುವಿನ ಮೂಲಕ ದುಷ್ಟ ಶಕ್ತಿಗಳನ್ನು ಸೋಲಿಸಿದವನಾಗಿ ಚಿತ್ರಿಸಲ್ಪಟ್ಟಿದ್ದಾನೆ. ಒಂದು ವಿಜಯೋತ್ಸವದ ಮೆರವಣಿಗೆಯಲ್ಲಿ, ಆತನು – ಜಯಶಾಲಿ – ಅವರು ಸೋಲಿಸಲ್ಪಟ್ಟಿದ್ದಾರೆಂಬುದನ್ನು ತೋರಿಸುವದಕ್ಕೆ ಅವರನ್ನು ಸಾರ್ವಜನಿಕವಾಗಿ ತೋರ್ಪಡಿಸಿದನು. ಸೋಲಿಸಲ್ಪಟ್ಟವರು ಒಂದು ದೊಡ್ಡ ವಿಜಯೋತ್ಸವದ ಮೆರವಣಿಗೆಯಲ್ಲಿ ಸರಪಣಿಗಳಿಂದ ಬಂಧಿಸಲ್ಪಟ್ಟವರಾಗಿ ನಡಿಸಲ್ಪಟ್ಟರೇನೋ ಎಂಬಂತೆ ಈ ಸಾದೃಶ್ಯವನ್ನು ಅಕ್ಷರಶಃ ತೆಗೆದುಕೊಳ್ಳಕೂಡದು. ಬದಲಾಗಿ, ಇಲ್ಲಿ ಸಾದೃಶ್ಯವು ಸೋಲಿಸಲ್ಪಟ್ಟ ಮತ್ತು ಅಧೀನಪಡಿಸಿಕೊಳ್ಳಲ್ಪಟ್ಟ ದುಷ್ಟ ಶಕ್ತಿಗಳು ಬೈಲಿಗೆ ತರಲ್ಪಡುವ ಕುರಿತಾಗಿರುತ್ತದೆ. "ಆದರೆ

ಈ ವಾಕ್ಯಭಾಗದಲ್ಲಿರುವಂತೆ ಸಾಂಕೇತಿಕ ಬಳಕೆಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಪುನಃ ಈ ವ್ಯಕ್ತಗೊಳಿಸುವಿಕೆಯನ್ನು ಒಂದು ಉಪಮೆ ಎಂದು ಗುರುತಿಸುವದು ಅವಶ್ಯಕವೆಂದು ತೋರಬಹುದು, ಉದಾಹರಣೆಗೆ 'ವಿಜಯೋತ್ಸವದಲ್ಲಿ ಮೆರವಣಿಗೆ ಮಾಡುತ್ತಾನೋ' ಎಂಬಂತೆ."[71]

ಸ್ಪಷ್ಟವಾಗಿ ತೋರುವ ಪ್ರಕಾರ, ಎಫೆಸ 4:8ರಲ್ಲಿ, ಬೇರೆ ಪದಗಳನ್ನು ಬಳಸುವ ಮೂಲಕ, ಪೌಲನು ದುಷ್ಟ ಶಕ್ತಿಗಳ ಅದೇ ಸೋಲನ್ನು ಬಣ್ಣಿಸುತ್ತಾನೆ. ಕ್ರಿಸ್ತನು ದೇವರ ಬಲಗಡೆಯಲ್ಲಿ ಆರೋಹಣಗೊಂಡಾಗ, ಎಲ್ಲಾ ಅಧಿಕಾರಗಳು – ಒಳ್ಳೆಯ ಮತ್ತು ಕೆಟ್ಟ ಎರಡೂ – ಆತನ ಅಧೀನಕ್ಕೊಳಪಡಿಸಲ್ಪಟ್ಟವು (ಎಫೆಸ 1:20-22). ದುಷ್ಟ ಶಕ್ತಿಗಳು ಆತನ ಪುನರುತ್ಥಾನ ಮತ್ತು ಪರಲೋಕಾರೋಹಣದ ಮೂಲಕ ಜಯಿಸಲ್ಪಟ್ಟವು.

## ಹೆಚ್ಚಿನ ಅಧ್ಯಯನಕ್ಕಾಗಿ: 2:11-13ರಲ್ಲಿ ದೀಕ್ಷಾಸ್ನಾನವು ಸಂಪೂರ್ಣವಾಗಿ ಸುನ್ನತಿಗೆ ಸಮಾನವಾಗಿರುತ್ತದೋ?

ಪೌಲನು 2:11-13ರಲ್ಲಿ ದೀಕ್ಷಾಸ್ನಾನ ಮತ್ತು ಸುನ್ನತಿಯ ನಡುವೆ ಹೋಲಿಕೆಯನ್ನು ಮಾಡಿದಾಗ, ದೀಕ್ಷಾಸ್ನಾನವು ಸಂಪೂರ್ಣವಾಗಿ ಸುನ್ನತಿಗೆ ಸಮಾನವಾಗಿರುತ್ತದೆಂದು ಆತನ ತಾತ್ಪರ್ಯವಾಗಿತ್ತೋ? ಇಲ್ಲ, ಆತನು ಕೇವಲ ಒಂದು ಅರ್ಥದಲ್ಲಿ ಮಾತ್ರವೇ ಹೋಲಿಕೆಯನ್ನು ಮಾಡುತ್ತಿದ್ದಾನೆ: ಶಾರೀರಿಕ ಸುನ್ನತಿಯು ಮಾಂಸವನ್ನು ತೆಗೆದು ಹಾಕುವ ಪ್ರಕಾರವೇ, ಆತ್ಮೀಕ ಸುನ್ನತಿಯು ಆತ್ಮದ ಕಲ್ಮಷವನ್ನು ತೆಗೆದು ಹಾಕುತ್ತದೆ. (2:13ರ ಮೇಲಿನ ಚರ್ಚೆಯನ್ನು ನೋಡಿರಿ.)

ಎರಡು ಆಚಾರಗಳಲ್ಲಿ ಹೋಲಿಕೆಗಳ ಅರ್ಥವು ಅವೆರಡೂ ಸಂಪೂರ್ಣ ಸಮಾನವಾದವುಗಳೆಂದಲ್ಲ. ದೀಕ್ಷಾಸ್ನಾನವು ಸುನ್ನತಿಗಿಂತಲೂ ಒಂದು ವ್ಯತ್ಯಾಸವಾದ ಉದ್ದೇಶವನ್ನು ನೆರವೇರಿಸುತ್ತದೆ. ಸುನ್ನತಿಯು ಯೆಹೂದ್ಯರಿಗೆ ಕೊಡಲ್ಪಟ್ಟಿದ್ದ ಒಡಂಬಡಿಕೆಯ ಮುದ್ರೆಯಾಗಿತ್ತು, ದೇವರು ಅವರ ದೇವರೂ ಅವರಿಗೆ ಕಾನಾನ್ ದೇಶವನ್ನು ಕೊಡುವನೂ ಎಂಬುದನ್ನು ಜ್ಞಾಪಿಸುವದಾಗಿತ್ತು (ಆದಿಕಾಂಡ 17:7, 8). ಜನರು ಅಬ್ರಹಾಮನಿಗೆ ವಾಗ್ದಾನ ಮಾಡಲ್ಪಟ್ಟ ಪರಲೋಕದ ಆಶೀರ್ವಾದಗಳಿಗೆ ಬಾಧ್ಯಸ್ಥರಾಗುವಂತಾಗಲು ದೀಕ್ಷಾಸ್ನಾನವು ಜನರನ್ನು ದೇವರ ಮಕ್ಕಳನ್ನಾಗಿಸುತ್ತದೆ, ಅಬ್ರಹಾಮನಿಗೆ ಆತ್ಮೀಕ ಮಕ್ಕಳನ್ನಾಗಿಸುತ್ತದೆ (ಗಲಾತ್ಯ 3:16, 29; 1 ಪೇತ್ರ 1:3, 4). ಹಳೆಯ ಒಡಂಬಡಿಕೆಯು ಹೆಚ್ಚಾಗಿ ಶಾರೀರಿಕ ವಾಸ್ತವಿಕತೆಗಳ ಕುರಿತಾಗಿದ್ದರೆ, ಹೊಸ ಒಡಂಬಡಿಕೆಯು ಅನೇಕ ಸಂದರ್ಭಗಳಲ್ಲಿ ಆತ್ಮೀಕ ವಾಸ್ತವಿಕತೆಗಳಿಗೆ ಸಂಬಂಧಿಸಿದ್ದಾಗಿರುತ್ತದೆ.

ಈ ಹೋಲಿಕೆಯು ಕೆಳಗಿನವುಗಳನ್ನು ಪ್ರಕಟಗೊಳಿಸುತ್ತದೆ: ಮಕ್ಕಳು *ಶರೀರಸಂಬಂಧವಾಗಿ* ಇಬ್ರಿಯ ಕುಟುಂಬವೊಂದರಲ್ಲಿ ಹುಟ್ಟುತ್ತಿದ್ದರು. ದೇವರ ಒಡಂಬಡಿಕೆಯ ಜನರಲ್ಲೊಬ್ಬನಾಗಿ ಮುದ್ರೆ ಹಾಕುವದಕ್ಕೆ ಗಂಡು ಮಗುವಿಗೆ ಸುನ್ನತಿ ಮಾಡಲಾಗುತ್ತಿತ್ತು. ದೀಕ್ಷಾಸ್ನಾನವು ಒಬ್ಬ ವ್ಯಕ್ತಿಯನ್ನು ದೇವರ ಆತ್ಮೀಕ ಕುಟುಂಬದೊಳಗೆ ಸೇರ್ಪಡೆಗೊಳಿಸುವ *ಆತ್ಮೀಕ* ಹುಟ್ಟುವಿಕೆಯಾಗಿರುತ್ತದೆ. ಕ್ರೈಸ್ತರು ಪವಿತ್ರಾತ್ಮನಿಂದ ಮುದ್ರೆ ಹಾಕಲ್ಪಡುತ್ತಾರೆ ಯಾಕೆಂದರೆ ಅವರು ದೇವರ ಮಕ್ಕಳು (ಗಲಾತ್ಯ 4:6).

| ಯೋಚನೆ | ಹಳೆಯ ಒಡಂಬಡಿಕೆ (ಶಾರೀರಿಕ) | ಹೊಸ ಒಡಂಬಡಿಕೆ (ಆತ್ಮೀಕ) |
|---|---|---|
| 1. ದೇವರ ಮಕ್ಕಳಲ್ಲೊಬ್ಬರಾಗಲು ಹುಟ್ಟುವಿಕೆ: | ಇಬ್ರಿಯ ಕುಟುಂಬದಲ್ಲಿ ಶರೀರಸಂಬಂಧವಾಗಿ ಹುಟ್ಟುವದು ಯಾಜಕಕಾಂಡ (ಯಾಜ.12:1, 2) | ಆತ್ಮೀಕ ಜನನ, **ದೀಕ್ಷಾಸ್ನಾನದ ಮೂಲಕ ದೇವರ ಕುಟುಂಬದಲ್ಲಿ ಸೇರ್ಪಡೆ** ಯೋಹಾನ (ಯೋಹಾನ 3:5) |
| 2. ಜನನದ ಬಳಿಕ ಮುದ್ರೆ ಹಾಕಲ್ಪಡುತ್ತದೆ: | ಮುದ್ರೆಯು ಮನುಷ್ಯನಿಂದ ಮಾಡಲ್ಪಡುತ್ತಿದ್ದ ಸುನ್ನತಿಯಾಗಿತ್ತು, ಅದು ಗಂಡು ಮಗುವನ್ನು ದೇವರ ಕುಟುಂಬದ ಲ್ಲೊಬ್ಬನಾಗಿ ಮುದ್ರೆ ಹಾಕುತ್ತಿತ್ತು ನೋಡಿರಿ ರೋಮಾ (ನೋಡಿ ರೋಮಾ 4:11) | ಮುದ್ರೆಯು ದೇವರಿಂದ ಹಾಕಲ್ಪಡುತ್ತಿದ್ದ ಪವಿತ್ರಾತ್ಮನ ಮುದ್ರೆಯಾಗಿತ್ತು,ಅದು ಹೊಸ ಕ್ರೈಸ್ತನನ್ನು ದೇವರ ಕುಟುಂಬದಲ್ಲೊಬ್ಬನಾಗಿ ಮುದ್ರೆ ಹಾಕುತ್ತದೆ ಕೊರಿಂಥ (2 ಕೊರಿಂಥ 1:22). |
| | ಅದು ಅಬ್ರಹಾಮನ ಸಂತತಿಯವರಿಗಾಗಿ ಒಡಂಬಡಿಕೆಯ ಗುರುತು ಆಗಿತ್ತು ಆದಿಕಾಂಡ (ಆದಿ. 17:11). | ದೀಕ್ಷಾಸ್ನಾನದ ಮೂಲಕ ದೇವರ ಮಕ್ಕಳಾಗುವವರಿಗೆ ಪವಿತ್ರಾತ್ಮನು ಮುದ್ರೆಯಾಗಿದ್ದಾನೆ ಅಪೊಸ್ತಲರ ಕೃತ್ಯಗಳು ಗಲಾತ್ಯ (ಅ.ಕೃತ್ಯ 2:38, ಗಲಾತ್ಯ 3:26, 27; 4:6). |

ಸಮಾನತೆಯು ಶಾರೀರಿಕ ಜನನ, ನಂತರ ಮನುಷ್ಯನಿಂದ ಮಾಡಿಸಲ್ಪಡುವ ಸುನ್ನತಿಯ ಮುದ್ರೆ, ಮತ್ತು ದೀಕ್ಷಾಸ್ನಾನದಲ್ಲಿ ಪಡೆಯಲಗುವ ಆತ್ಮೀಕ ಜನನ, ನಂತರ ದೇವರಿಂದ ಮಾಡಲ್ಪಡುವ ಮುದ್ರೆಯಾಗಿ ಪವಿತ್ರಾತ್ಮನ ವರವನ್ನು ಹೊಂದುವದು ಇವುಗಳ ನಡುವಿನದ್ದಾಗಿದೆ. ಸಮಾನತೆಯು ದೀಕ್ಷಾಸ್ನಾನ ಮತ್ತು ಸುನ್ನತಿಯ ನಡುವೆ *ಅಲ್ಲ*. ಬದಲಾಗಿ, ಒಂದು ಸಮಾನತೆಯು ಶಾರೀರಿಕ ಜನನ ಮತ್ತು ದೀಕ್ಷಾಸ್ನಾನದ ನಡುವೆ ಇದ್ದರೆ, ಮತ್ತೊಂದು ಸಮನಾತೆಯು ಸುನ್ನತಿಯ ಮುದ್ರೆ ಮತ್ತು ಪವಿತ್ರಾತ್ಮನ ಮುದ್ರೆ ನಡುವೆ ಇರುವದಾಗಿದೆ.

ಒಂದು ವೇಳೆ ದೀಕ್ಷಾಸ್ನಾನವು ಸಂಪೂರ್ಣವಾಗಿ ಸುನ್ನತಿಯೊಂದಿಗೆ ಸಮಾನತೆಯನ್ನು ಹೊಂದಿದ್ದಲ್ಲಿ, ಸುನ್ನತಿ ಮಾಡಿಸಿಕೊಳ್ಳುವವರ ಕುರಿತಾದ ದೇವರ ಬೋಧನೆಗಳು ದೀಕ್ಷಾಸ್ನಾನ ಮಾಡಿಸಿಕೊಳ್ಳುವವರಿಗೆ ಸಹ ಸಮಾನವಾಗಿ ಅನ್ವಯವಾಗುತ್ತವೆಂದಾಗುತ್ತದೆ. ಹೀಗೆ ಈ ಕೆಳಗಿನವುಗಳು ಸತ್ಯವಾಗಿರಬಹುದಾಗಿದೆ:

1. ದೀಕ್ಷಾಸ್ನಾನವು ಗಂಡಸರಿಗೆ ಮಾತ್ರವೇ ಅವಶ್ಯಕವಾಗಿರುವದು (ಆದಿಕಾಂಡ 17:10).
2. ಗಂಡು ಮಕ್ಕಳಿಗೆ ಹುಟ್ಟಿದ ಎಂಟನೆಯ ದಿನದಲ್ಲಿ ದೀಕ್ಷಾಸ್ನಾನ ಮಾಡಿಸಬೇಕಾಗುವದು (ಆದಿಕಾಂಡ 17:12).
3. ಎದುರು ನೋಡುವ ಆಶೀರ್ವಾದವು ಪರಲೋಕವಲ್ಲ, ಕಾನಾನ್ ದೇಶವಾಗಿರಲಿದೆ (ಆದಿಕಾಂಡ 17:8).
4. "ಒಡಂಬಡಿಕೆಯ ಗುರುತಾಗಿ" ಶಾಶ್ವತವಾದ ಹಾಗೂ ಕಾಣಿಸುವಂಥ ಒಂದು ಪರಿಣಾಮಕರವಾದ ಶಾರೀರಿಕ ಗುರುತು ಇರತಕ್ಕದ್ದು (ಆದಿಕಾಂಡ 17:11).
5. ಹಣದಿಂದ ಖರೀದಿಸಲಾಗುವ ದಾಸರುಗಳ ನಂಬಿಕೆ ಮತ್ತು ಜೀವನಶೈಲಿ ಏನೇ ಆಗಿದ್ದಾಗ್ಯೂ ಅವರಿಗೆ ಸಹ ದೀಕ್ಷಾಸ್ನಾನ ಮಾಡಿಸಬೇಕು (ಆದಿಕಾಂಡ 17:13).
6. ದೀಕ್ಷಾಸ್ನಾನ ಮಾಡಿಸಿಕೊಳ್ಳದವರನ್ನ ಕುಲದಿಂದ ಕಿತ್ತುಹಾಕಬೇಕು (ಆದಿಕಾಂಡ 17:14).
7. ಶಿಶುಗಳಿಗಿಂತ ದೊಡ್ಡ ಗಂಡಸರು ಅಬ್ರಹಾಮನ ಸಂತತಿಯವರು ಅಥವಾ ಹಣದಿಂದ ಖರೀದಿಸಲಾಗಿದ್ದ ದಾಸನಾಗಿದ್ದರೆ ಸಾಕು, ಬೇರೆ ಯಾವ ಪೂರ್ವಭಾವಿ ಶರತ್ತಿಲ್ಲದೆ ಅವರಿಗೆ ದೀಕ್ಷಾಸ್ನಾನ ಮಾಡಿಸಬಹುದು ಎಂದಾಗುತ್ತದೆ (ಆದಿಕಾಂಡ 17:27).

ಒಂದು ವೇಳೆ ದೀಕ್ಷಾಸ್ನಾನವನ್ನು ಸುನ್ನತಿಯ ನಿಯಮಗಳ ಪ್ರಕಾರವಾಗಿಯೇ ಮಾಡುವದಾದಲ್ಲಿ ದೀಕ್ಷಾಸ್ನಾನ ಹೊಂದುವದಕ್ಕೆ ಬೈಬಲ್ ಹೇಳುವ ಅರ್ಹತೆಗಳು ಅನಾವಶ್ಯಕವೆಂದಾಗುತ್ತದೆ. ಹೇಗೂ, ಇಂದು ದೀಕ್ಷಾಸ್ನಾನದ ಮೂಲಕ ದೇವರ ಮಕ್ಕಳಾಗುವವರು ಈ ಕೆಳಗಿನವುಗಳನ್ನು ಮಾಡಬೇಕೆಂದು ಹೊಸ ಒಡಂಬಡಿಕೆಯು ಕಲಿಸುತ್ತದೆ:

1. ದೇವರ ವಾಕ್ಯವನ್ನು ಕೇಳಬೇಕು (ಅಪೊಸ್ತಲರ ಕೃತ್ಯಗಳು 2:41; 18:8).
2. ಕ್ರಿಸ್ತನಲ್ಲಿ ನಂಬಿಕೆಯಿಡಬೇಕು (ಮಾರ್ಕ 16:15, 16; ಅಪೊಸ್ತಲರ ಕೃತ್ಯಗಳು 8:12; 18:8).
3. ದೀಕ್ಷಾಸ್ನಾನಕ್ಕೆ ಮುನ್ನ ಪಶ್ಚಾತ್ತಾಪ ಪಡಬೇಕು (ಅಪೊಸ್ತಲರ ಕೃತ್ಯಗಳು 2:38).
4. ಎಬ್ಬಿಸಲ್ಪಟ್ಟವರಾಗಿ ಹೊಸ ಜೀವನದಲ್ಲಿ ನಡೆಯಬೇಕು (ರೋಮಾ 6:4).

# ಹೆಚ್ಚಿನ ಅಧ್ಯಯನಕ್ಕಾಗಿ: ನಮ್ಮಲ್ಲಿ ಒಂದು ಪಾಪಾಧೀನಸ್ವಭಾವ ಇರುತ್ತದೋ?

"ಪಾಪಾಧೀನಸ್ವಭಾವ" ಎಂಬುದರ ಭಾವನೆಯು ಮನುಷ್ಯರು ಆದಾಮ ಮತ್ತು ಹವ್ವಳರಿಂದ ಭ್ರಷ್ಟವಾದ ಸ್ವಭಾವವನ್ನು ಬಾಧ್ಯತೆಯಾಗಿ ಹೊಂದಿ ಹುಟ್ಟುತ್ತಾರೆಂಬ ದೇವಶಾಸ್ತ್ರೀಕವಾದ ಒಂದು ಕಲ್ಪನೆಯಾಗಿರುತ್ತದೆ. ಅವರು ಒಳ್ಳೇದು ಮತ್ತು ಕೆಟ್ಟದ್ದರ ಅರುಹು ಹುಟ್ಟಿಸುವ ಮರದ ಹಣ್ಣನ್ನು ತಿಂದದ್ದರಿಂದ ಪಾಪಾಧೀನಸ್ವಭಾವವನ್ನು ಪಡೆದುಕೊಂಡರೆಂಬ ನಿರ್ಣಯದ ಮೇಲೆ ರಚಿತಗೊಂಡಿರುತ್ತದೆ (ಆದಿಕಾಂಡ 3:6). ಹೇಗೂ, ಅವರ ಸ್ವಭಾವವು ಭ್ರಷ್ಟಗೊಂಡಿತು ಎಂಬದಾಗಿ ಬೈಬಲಿನ ವಾಕ್ಯದಲ್ಲಿ ಯಾವದೂ ಬೋಧಿಸುವದಿಲ್ಲ. ಅವರು ಒಳ್ಳೇದು ಮತ್ತು ಕೆಟ್ಟದ್ದರ ಅರುಹು ಹುಟ್ಟಿಸುವ ಮರದ ಹಣ್ಣನ್ನು ತಿಂದರೆ ಸಾಯುವರು ಎಂದು ದೇವರು ಹೇಳಿದನು (ಆದಿಕಾಂಡ 2:17), ಹೊರತು ಅವರು ಪಿಶಾಚನ ಹಾಗೆ ಒಂದು ದುಷ್ಟ ಸ್ವಭಾವವನ್ನು ಬೆಳೆಸಿಕೊಳ್ಳುವರೆಂದು ಹೇಳಲಿಲ್ಲ.

ಆದಾಮ ಮತ್ತು ಹವ್ವಳರು ಸ್ವಭಾವದಲ್ಲಿ ಭ್ರಷ್ಟಗೊಳ್ಳಲಿಲ್ಲ ಎಂಬದಾಗಿ ಬೈಬಲಿನ ಎರಡು ಹೇಳಿಕೆಗಳು ಸೂಚಿಸುತ್ತವೆ. (1) *ಆದಿಕಾಂಡ 3:7-10.* ಅವರಿ ತಿನ್ನುವದಕ್ಕೆ ಮುಂಚೆ, ಅವರು ಬೆತ್ತಲೆಯಾಗಿದ್ದರು ಮತ್ತು ನಾಚಿಕೆ ಪಟ್ಟುಕೊಳ್ಳಲಿಲ್ಲ (ಆದಿಕಾಂಡ 2:25). ಅವರು ತಿಂದ ಬಳಿಕ, ತಾವು ಬೆತ್ತಲೆಯಾಗಿದ್ದೇವೆಂಬುದನ್ನು ಗ್ರಹಿಸಿಕೊಂಡರು. ಭ್ರಷ್ಟ ಜನರು ಮಾಡುವ ರೀತಿಯಲ್ಲಿ, ಅವರು ತಮ್ಮ ಬೆತ್ತಲೆಯನ್ನು ಪ್ರದರ್ಶಿಸಿಕೊಳ್ಳುವ ಬದಲಾಗಿ, ಅವರು ನಾಚಿಕೆ ಪಟ್ಟರು; ಅವರು ಅಡಗಿಕೊಂಡರು ಮತ್ತು ತಮ್ಮನ್ನು ಮುಚ್ಚಿಕೊಳ್ಳುವದಕ್ಕೆ ಅಪೇಕ್ಷಿಸಿದರು. ಅವರ ಸ್ವಭಾವವು ಭ್ರಷ್ಟಗೊಂಡಿದ್ದಲ್ಲಿ, ನಾಚಿಕೆ ಪಟ್ಟುಕೊಳ್ಳುವಂತೆ ಅಥವಾ ತಮ್ಮನ್ನು ಮುಚ್ಚಿಕೊಳ್ಳಲು ಉಡುಪನ್ನು ಹುಡುಕಾಡುವಂತೆ ಅವರ ಮನಸ್ಸಾಕ್ಷಿಯು ಅವರನ್ನು ಪ್ರೇರಣೆ ಮಾಡಿರುತ್ತಿದ್ದಿಲ್ಲ. (2) *ಆದಿಕಾಂಡ 3:22.* ದೇವರು ಹೀಗೆ ಹೇಳಿದನು, "ಈ ಮನುಷ್ಯನು ಒಳ್ಳೇದರ ಕೆಟ್ಟದ್ದರ ಭೇದವನ್ನರಿತು ನಮ್ಮಲ್ಲಿ ಒಬ್ಬನಂತಾದನಲ್ಲಾ." ದೇವರಿಗೆ ಒಳ್ಳೇದು ಮತ್ತು ಕೆಟ್ಟದ್ದು ಏನೆಂದು ತಿಳಿದದೆ, ಮತ್ತು ಆತನು ಭ್ರಷ್ಟಗೊಂಡವನಲ್ಲ. ಆದಾಮ ಮತ್ತು ಹವ್ವಳರು ಒಳ್ಳೇದರ ಹಾಗೂ ಕೆಟ್ಟದ್ದರ ಭೇದವನ್ನು ಅರಿತ ತಕ್ಷಣ, ಅವರಿಗೆ ನೈತಿಕ ಆಯ್ಕೆಗಳು ಎದುರಾದವು. ಅವರು ತಿಂದಾಗ, ನೈತಿಕವಾಗಿ ಮುಗ್ಧರಾಗಿದ್ದ ಸ್ಥಿತಿಯನ್ನು ತೊರೆದರು ಮತ್ತು ನೈತಿಕ ಗ್ರಹಿಕೆಯ ಸ್ಥಿತಿಯೊಳಗೆ ಪ್ರವೇಶಿಸಿದರು. ಅಂದಿನಿಂದ ಅವರು ಒಳ್ಳೇದು ಮತ್ತು ಕೆಟ್ಟದ್ದರ ನಡುವೆ ಆಯ್ಕೆಯನ್ನು ಮಾಡಬೇಕಾಗಿತ್ತು. ಹೆಚ್ಚುಕಡಿಮೆ ತಕ್ಷಣದಲ್ಲಿಯೇ, ಅವರು ತಮ್ಮನ್ನು ಉಡುಪುಗಳಿಂದ ಮುಚ್ಚಿಕೊಳ್ಳಬೇಕೆಂಬ ಒಳ್ಳೇ ಆಯ್ಕೆಯನ್ನು ಮಾಡಿದ್ದರು, ಅವರು ಕೆಟ್ಟದ್ದನ್ನಲ್ಲ, ಆದರೆ ಒಳ್ಳೇದನ್ನು ಮಾಡುವದಕ್ಕೆ ಬಯಸಿದರು ಎಂಬುದನ್ನು ಅದು ತೋರಿಸುತ್ತದೆ.

ಆದಾಮ ಮತ್ತು ಹವ್ವಳರು ಕೆಟ್ಟವರಾದರು ಎಂದು ಹೇಳುವ ಬದಲಾಗಿ, ನಾವು ತಾರ್ಕಿಕವಾಗಿ ಅವರು *ಒಳ್ಳೇ* ಸ್ವಭಾವವನ್ನು ಬೆಳೆಸಿಕೊಂಡರು ಎಂದು ಹೇಳಬಹುದಾಗಿದೆ; ಯಾಕೆಂದರೆ ಅವರು *ಒಳ್ಳೇದು* ಮಾತ್ರವಲ್ಲದೆ *ಕೆಟ್ಟದ್ದರ* ಜ್ಞಾನವನ್ನು ಗಳಿಸಿಕೊಂಡಿದ್ದರು. ಹೇಗಿದ್ದರೂ, ಅವರು ನಿಷೇಧಿಸಲ್ಪಟ್ಟ ಮರದ ಹಣ್ಣನ್ನು ತಿಂದದ್ದರ ಫಲಿತವಾಗಿ, ಅವರ ಸಂತತಿಯವರು – ಎಲ್ಲಾ ಜನರು – ಪ್ರಾಯಕ್ಕೆ ಬಂದ ಹಾಗೆ ಒಳ್ಳೇದು ಮತ್ತು ಕೆಟ್ಟದ್ದರ ಜ್ಞಾನವನ್ನು ಪಡೆದುಕೊಳ್ಳುವರು (ಧರ್ಮೋಪದೇಶಕಾಂಡ 1:39) ಮತ್ತು ಕ್ರಮೇಣದಲ್ಲಿ

ಶಾರೀರಿಕ ಮರಣವನ್ನು ಅನುಭವಿಸುವರು. ನಾವು ಆದಾಮ ಮತ್ತು ಹವ್ವಳರ ಪಾಪದ ಪರಿಣಾಮಗಳನ್ನು ಅನುಭವಿಸುತ್ತೇವೆ, ಆದರೆ ಅವರ ಅಪರಧಿತ್ವವನ್ನು ನಾವು ಹೊತ್ತುಕೊಳ್ಳುವದಿಲ್ಲ. ನಮ್ಮ ಮೇಲಾಗಿರುವ ಪರಿಣಾಮಗಳೆಂದರೆ ನಾವು ಸಾಯುವೆವು (1 ಕೊರಿಂಥ 15:22) ಮತ್ತು ನಾವು ನೈತಿಕ ಆಯ್ಕೆಗಳನ್ನು ಮಾಡಬೇಕು (ಯೆಶಾಯ 7:16).

ಕೊಲೊಸ್ಸೆ 2:11ರಲ್ಲಿನ "ಕ್ರಿಸ್ತೀಯ ಸುನ್ನತಿಯು" ಒಂದು ಸ್ವಭಾವತಃ ಬಂದ ಪಾಪಾಧೀನಸ್ವಭಾವವನ್ನು ತೆಗೆದುಹಾಕುವದಿಲ್ಲ ಯಾಕೆಂದರೆ ತೆಗೆದು ಹಾಕುವದಕ್ಕೆ ಮನುಷ್ಯರಲ್ಲಿ ಸ್ವಭಾವತಃ ಹೊಂದಿದ ಪಾಪಾಧೀನಸ್ವಭಾವವು ಇರುವದಿಲ್ಲ. ಬದಲಾಗಿ, ಆತ್ಮೀಕ ಸುನ್ನತಿಯು ತಪ್ಪು ನೈತಿಕ ಮತ್ತು ಆತ್ಮೀಕ ಆಯ್ಕೆಗಳ ಕಾರಣದಿಂದ ಶಾರೀರಿಕ ಅಭಿಲಾಷೆಗಳಿಗೆ ಹಾಗೂ ಪಾಪಕೃತ್ಯಗಳಿಗೆ ಒಪ್ಪಿಸಿಕೊಂಡದ್ದರಿಂದ ಉಂಟಾದ ಹಾಗೂ ಶೇಖರಿಸಿಟ್ಟುಕೊಳ್ಳಲಾದ ಕಲ್ಮಶವನ್ನು ತೆಗೆದು ಹಾಕುತ್ತದೆ.

ಎಲ್ಲರೂ ಪಾಪ ಮಾಡಿದ್ದಾರೆ, ಆದರೆ ರೋಮಾ 3:9, 19, 23 ವಚನಗಳಲ್ಲಿನ "ಎಲ್ಲರೂ" ಎಂಬುದನ್ನು ಚರ್ಚೆಯಲ್ಲಿರುವ ವರ್ಗದೊಳಗಿನವರನ್ನು ಮಾತ್ರವೇ ಒಳಗೊಂಡಿರುತ್ತದೆಂದು ಅರ್ಥೈಸಿಕೊಳ್ಳತಕ್ಕದ್ದು. ಪಾಪ ಮಾಡುವ ಸಾಮರ್ಥ್ಯವುಳ್ಳ "ಎಲ್ಲರೂ" ಪಾಪ ಮಾಡಿದ್ದಾರೆ, ಆದರೆ "ಎಲ್ಲರಿಗೂ" ಪಾಪ ಮಾಡುವ ಸಾಮರ್ಥ್ಯವಿರುವದಿಲ್ಲ (ಯೋಹಾನ 9:41). ಶಿಶುಗಳು ಮತ್ತು ಕೆಲವು ಪ್ರಾಯಸ್ಥರಿಗೆ ಒಳ್ಳೇದು ಹಾಗೂ ಕೆಟ್ಟದ್ದನ್ನು ಅರ್ಥಮಾಡಿಕೊಳ್ಳಲು ಮಾನಸಿಕ ಸಾಮರ್ಥ್ಯದ ಕೊರತೆಯಿರುತ್ತದೆ. ಪರಲೋಕರಾಜ್ಯವು ಮಕ್ಕಳಿಗೆ ಸೇರಿದ್ದಾಗಿದೆ (ಮತ್ತಾಯ 19:14); ಹೀಗಿರುವದರಿಂದ ಅವರು ಪರಲೋಕವನ್ನು ಪ್ರವೇಶಿಸುವದಕ್ಕಾಗಿ ಹೊಸದಾಗಿ ಹುಟ್ಟುವ ಅಗತ್ಯವಿಲ್ಲ (ಯೋಹಾನ 3:5).

ಜೀವನದಲ್ಲಿ ನೈತಿಕ ಪರಿಪಕ್ವತೆಗೆ ಬಂದ ಎಲ್ಲರೂ ಪಾಪ ಮಾಡಿದ್ದಾರೆಂದು (ರೋಮಾ 3:23) ಮತ್ತು "ಕ್ರಿಸ್ತೀಯ ಸುನ್ನತಿ" ಮಾಡಿಸಿಕೊಳ್ಳುವ ಅಗತ್ಯತೆಯಲ್ಲಿದ್ದಾರೆಂದು ಪೌಲನು ಹೇಳುತ್ತಾನೆ. "ಕ್ರಿಸ್ತೀಯ ಸುನ್ನತಿ"ಯನ್ನು ಅರ್ಥಮಾಡಿಕೊಳ್ಳುವ ಮತ್ತು ಭಾಗಿಯಾಗಿರುವವರಿಗಾಗಿ ಮಾತ್ರವೇ ಶಾರೀರಿಕ ಅಭಿಲಾಷೆಗಳು ಮತ್ತು ಅದರ ಫಲಿತವಾದ ಪಾಪಗಳು ತೆಗೆದು ಹಾಕಲ್ಪಡುತ್ತವೆ.

ಮನುಷ್ಯರಿಗೆ ಒಂದು ಸ್ವಭಾವತಃ ಪಾಪಾಧೀನಸ್ವಭಾವ ಇರುತ್ತದೆಂದು ಬೋಧಿಸುವವರು ರೋಮಾ 7:18-23ನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ. ಪಾಪಾಧೀನಸ್ವಭಾವವು ತನ್ನನ್ನು ಪಾಪ ಮಾಡುವಂತೆ ಮಾಡುತ್ತಿದೆ ಎಂಬದಾಗಿ ಪೌಲನು ಹೇಳಲಿಲ್ಲ. ಬದಲಾಗಿ, ಆತನು ಹೀಗೆ ಹೇಳಿದನು, "ಹೀಗಿರಲಾಗಿ ಆ ಅಸಹ್ಯವಾದದ್ದನ್ನು ಮಾಡುವವನು ಇನ್ನು ನಾನಲ್ಲ, ನನ್ನಲ್ಲಿ ನೆಲೆಗೊಂಡಿರುವ ಪಾಪವೇ ಅದನ್ನು ಮಾಡುತ್ತದೆ" (ರೋಮಾ 7:17). ಗ್ರೀಕ್ ವಾಕ್ಯವು ಇಲ್ಲಿ "ನಾನಲ್ಲ . . . ಆದರೆ" ಎಂಬ ಪದವಿನ್ಯಾಸವನ್ನು ಬಳಸುತ್ತದೆ. ಈ ಪದವಿನ್ಯಾಸವು (*mē . . . alla* or *ou . . . alla*) ಹೊಸ ಒಡಂಬಡಿಕೆಯಲ್ಲಿ ಅನೇಕ ಸಾರಿ ಕಾಣಿಸಿಕೊಳ್ಳುತ್ತದೆ (ಯೋಹಾನ 6:27; 1 ತಿಮೊಥೆ 5:23; 1 ಪೇತ್ರ 3:3, 4). ವಾಕ್ಯದ ಎರಡನೆಯ ಭಾಗದ ಮೇಲೆ ಒತ್ತು ಇರುತ್ತದೆ, ಆದರೆ ಮೊದಲ ಭಾಗವನ್ನು ಹೊರಗಿಡುವದರ ಮೇಲಲ್ಲ. ಪೌಲನ ತಾತ್ಪರ್ಯವು ಏನಾಗಿತ್ತೆಂದರೆ, "ಕೇವಲ ನಾನು ಅದನ್ನು ಮಾಡುತ್ತಿಲ್ಲ, ಆದರೆ ನನ್ನಲ್ಲಿ ನೆಲೆಗೊಂಡಿರುವ ಪಾಪವೇ ಅದನ್ನು ಮಾಡುತ್ತಿದೆ."

ತಾನು ಪಾಪ ಮಾಡಿದನೆಂದು ಪೌಲನು ಒಪ್ಪಿಕೊಳ್ಳುತ್ತಾನೆ, ಹೇಗೂ, ಆತನು ಪಾಪ

ಮಾಡುವದಕ್ಕೆ ಬಯಸಲಿಲ್ಲ (ರೋಮಾ 7:15-21). ಆತನಿಗೆ ಭ್ರಷ್ಟಗೊಂಡ ಸ್ವಭಾವ ಇದ್ದಿದ್ದರೆ, ಆತನು ಕೆಟ್ಟದ್ದನ್ನು ಮಾಡುವದಕ್ಕೆ ಇಚ್ಛಿಸಿರುತ್ತಿದ್ದನು. ಅದು ಪಾಪಾಧೀನಸ್ವಭಾವವಾಗಿರಲಿಲ್ಲ ಆದರೆ ಆತನನ್ನು ಪಾಪ ಮಾಡುವಂತೆ ಪ್ರೇರಣೆ ಮಾಡಿದ್ದು *ಪಾಪವೇ* ಆಗಿತ್ತು. ಈ ಮುಂಚೆ, ರೋಮಾ 6:16ರಲ್ಲಿ, ಪಾಪದ ಅಧೀನಪಡಿಸಿಕೊಳ್ಳುವ ಸ್ವಭಾವದ ಕುರಿತು ಪೌಲನು ಮಾತಾಡಿದ್ದನು, ಅದೇ ರೀತಿ ಯೇಸುವು (ಯೋಹಾನ 8:34) ಮತ್ತು ಪೇತ್ರನು ಸಹ ಅದರ ಬಗ್ಗೆ ಮಾತಾಡಿದ್ದರು (2 ಪೇತ್ರ 2:19). ಎಲ್ಲರೂ ಮತ್ತ ಜೀವನದಲ್ಲಿ ಪಾಪಕ್ಕೆ ಅವಕಾಶ ಕೊಟ್ಟದ್ದರಿಂದ, ಪ್ರತಿಯೊಬ್ಬರೂ ಪಾಪದೊಂದಿಗೆ ಹೋರಾಟ ಅನುಭವಿಸಿದ್ದಾರೆ – ಆದರೆ ಪಾಪಾಧೀನಸ್ವಭಾವದೊಂದಿಗೆ ಅಲ್ಲ.

## ಹೆಚ್ಚಿನ ಅಧ್ಯಯನಕ್ಕಾಗಿ: “ಶರೀರ” [*sarx*] ಎಂಬುದರ ಅರ್ಥವು “ಪಾಪಾಧೀನಸ್ವಭಾವ” ಎಂದೋ?

σάρξ (*sarx*) ವಿವಿಧ ರೂಪಗಳು ಗ್ರೀಕ್ ಹೊಸ ಒಡಂಬಡಿಕೆಯಲ್ಲಿ ಸುಮಾರು 150 ಸಾರಿ ಕಾಣಿಸಿಕೊಳ್ಳುತ್ತವೆ. ಈ ಬಹುಪಾಲು ವಾಕ್ಯಭಾಗಗಳಲ್ಲಿ, “ಪಾಪಾಧೀನಸ್ವಭಾವ” ಎಂಬ ಅರ್ಥವಾಗಿರುವದಕ್ಕೆ ಸಾಧ್ಯವಿರದಿರಬಹುದು. ಉದಾಹರಣೆಗೆ, ಯೇಸು *sarx* “ನರಾವತಾರ” ಎತ್ತಿದನು (ಯೋಹಾನ 1:14); ಆತನ “ಮಾಂಸವು” ನಮ್ಮ ಜೀವದ ರೊಟ್ಟಿಯಾಗಿದೆ (ಯೋಹಾನ 6:51), ಜೀವವನ್ನು ಪಡೆದುಕೊಳ್ಳಲು ನಾವು ಅದನ್ನು (ಆತ್ಮೀಕವಾಗಿ) ಸೇವಿಸಬೇಕು (ಯೋಹಾನ 6:53-56). ಯೇಸುವಿನ “ಶರೀರ”ವು ಕೊಳೆಯುವ ಅವಸ್ಥೆಯನ್ನು ಅನುಭವಿಸಲಿಲ್ಲ (ಅಪೊಸ್ತಲರ ಕೃತ್ಯಗಳು 2:31). ಆತನು ದಾವೀದನ ಸಂತತಿಯವನಾಗಿದ್ದನು ಮತ್ತು “ಶರೀರ” ಸಂಬಂಧವಾಗಿ ಮೂಲಪಿತೃವಾಗಿದ್ದನು (ರೋಮಾ 1:3; 9:5). ಯೇಸು “ಶರೀರ”ದಲ್ಲಿ ಪ್ರಕಟಗೊಂಡ ದೇವರಾಗಿದ್ದನು (1 ತಿಮೊಥೆ 3:16) ಮತ್ತು ಆತನು “ಶರೀರ”ದಲ್ಲಿ ಮರಣಕ್ಕೆ ಒಪ್ಪಿಸಲ್ಪಟ್ಟನು (1 ಪೇತ್ರ 3:18). ಈ ಸನ್ನಿವೇಶಗಳಿಗೆ “ಪಾಪಾಧೀನಸ್ವಭಾವ” ಹೊಂದಾಣಿಕೆಯಾಗುವದಿಲ್ಲ.

ಒಬ್ಬ ವ್ಯಕ್ತಿಯ ಶರೀರವನ್ನು ಪವಿತ್ರ ಅಥವಾ ಕೆಟ್ಟ ಉದ್ದೇಶಗಳಿಗಾಗಿ ಉಪಯೋಗಿಸಲ್ಪಡಬಲ್ಲದು ಎಂಬುದನ್ನು ಸೂಚಿಸುವದಕ್ಕೆ *sarx* ಬಳಸಲ್ಪಟ್ಟಾಗ, ಅದರರ್ಥವು ಒಳ್ಳೆಯ ಅಥವಾ ಕೆಟ್ಟ “ಶಾರೀರಿಕ ಅಭಿಲಾಷೆಗಳು” ಎಂದಾಗಿರುತ್ತದೆ. ಸನ್ನಿವೇಶಕ್ಕೆ ಅನುಗುಣವಾಗಿ ಮಾತ್ರವೇ ಅರ್ಥವನ್ನು ನಿರ್ಧರಿಸಬಹುದಾಗಿದೆ (ಅಪೊಸ್ತಲರ ಕೃತ್ಯಗಳು 2:26; ರೋಮಾ 8:7). ಜನರು ನೈತಿಕ ತೀರ್ಮಾನಗಳನ್ನು ಮಾಡಬೇಕಾಗಿ ಬಂದಾಗ, ಅಂಥ ಅಭಿಲಾಷೆಗಳು ಸಾಮಾನ್ಯವಾಗಿ ಕೆಟ್ಟವುಗಳಾಗಿರುತ್ತವೆ; ಹೀಗೆ ಅರ್ಥವು ಬಹಳಷ್ಟು ಸಾರಿ ಸಕಾರಾತ್ಮಕ್ಕಿಂತಲೂ ನಕಾರಾತ್ಮಕವಾಗಿರುತ್ತದೆ.

ಗ್ರೀಕ್‌ನ ಯಾವದೇ ಪ್ರಮುಖ ಶಬ್ದಕೋಶಗಳಲ್ಲಿ, ನಿಘಂಟು, ಅಥವಾ ವಿಶ್ವಕೋಶಗಳಲ್ಲಿಯಾಗಲಿ *sarx* ಎಂಬುದನ್ನು “ಪಾಪಾಧೀನಸ್ವಭಾವ” ಎಂದು ಅರ್ಥನಿರೂಪಿಸಲ್ಪಟ್ಟಿರುವದಿಲ್ಲ. “ಪಾಪಾಧೀನಸ್ವಭಾವ” ಎಂಬುದಕ್ಕೆ ಅತ್ಯಂಥ ಹತ್ತಿರವಾದ ಅರ್ಥನಿರೂಪಣೆಯೆಂದರೆ ರೋಮಾ 7:5ರಲ್ಲಿನ “ದುರಾಶೆಗಳು” ಎಂಬುದು. ಆ ಸನ್ನಿವೇಶದಲ್ಲಿ ಸಹ, ಪೌಲನು ಪಾಪಾಧೀನ “ಶರೀರ” (*sarx*) ವನ್ನು ಸೂಚಿಸಿ ಹೇಳಲಿಲ್ಲ,

ಆದರೆ ಪಾಪಮಯ “ದುರಾಶೆಗಳು” (*pathēmata*) ಎಂದು ಹೇಳುತ್ತಾನೆ. ದೇಹದ ಅಂಗಗಳಲ್ಲಿ ಕಾರ್ಯಮಾಡುತ್ತಾ ಪಾಪದ ದುರಾಶೆಗಳನ್ನು ಹುಟ್ಟಿಸಿದ್ದು “ಧರ್ಮಶಾಸ್ತ್ರ”ವೇ, ಹೊರತು “ಶರೀರ” ಅಲ್ಲ.

ಮನುಷ್ಯನ ಅಭಿಲಾಷೆಗಳಿಗೆ *sarx*ನ್ನು ಸಂಬಂಧಗೊಳಿಸುವದರಲ್ಲಿ, ಶಬ್ದಕೋಶಗಳು ಈ ಕೆಳಗಿನ ಅರ್ಥನಿರೂಪಣೆಗಳನ್ನು ಕೊಡುತ್ತದೆ: [ಶರೀರ]ವು ಎಷ್ಟರ ಮಟ್ಟಿಗೆ ಪಾಪದ ಪ್ರಾಬಲ್ಯತೆಗೊಳಗಾಗಿರುತ್ತದೆಂದರೆ ಶರೀರವು ಎಲ್ಲಿ ಇರುತ್ತದೋ, ಅಲ್ಲಿ ಪಾಪದ ಎಲ್ಲಾ ವಿಧಗಳು ಅದೇ [ರೀತಿಯಾಗಿ] ಹಾಜರಿರುತ್ತವೆ, ಮತ್ತು σάρξ ನಲ್ಲಿ ಒಳ್ಳೇದ್ಯಾವದೂ ಇರಲಾರದು.”[72] “ಪಾಪದಿಂದ ಕೂಡಿದ ಶರೀರ”ವನ್ನು ಒಂದು ಸಂಭಾವ್ಯ ಅನುವಾದವೆಂದು ಅಭಿಪ್ರಾಯ ಪಡಬಹುದು, ಆದರೆ ಎಲ್ಲಿಯೂ “ಪಾಪಾಧೀನಸ್ವಭಾವ” ಎಂಬುದು ಬಳಸಲ್ಪಟ್ಟಿಲ್ಲ.

*Sarx* ಕುರಿತು ತನ್ನ ಚರ್ಚೆಯನ್ನು ಸಾರಾಂಶಗೊಳಿಸುತ್ತಾ, Eduard Schweizer ಹೀಗೆ ಬರೆಯುತ್ತಾನೆ, “ಶರೀರವು ಇತರ ಭೂಲೋಕದ ಸಂಗತಿಗಳಿಂದ ವ್ಯತ್ಯಾಸಗೊಳಿಸಲ್ಪಡುವಂತ ಮತ್ತು ಯಾವದು ಸ್ವಾಭಾವಿಕವಾಗಿ [ಸ್ವಭಾವತಃ] ಕೆಟ್ಟದ್ದು ಅಥವಾ ವಿಶೇಷವಾಗಿ ಅಪಾಯಕರಾಗಿರುತ್ತದೋ ಆ ಮಂಡಲಕ್ಕೆ ಒಳಪಡುವದಿಲ್ಲ. ಒಬ್ಬನು ಅದರ ಮೇಲೆ ತನ್ನ ಜೀವಿತವನ್ನು ಕಟ್ಟಿಕೊಳ್ಳುವಾಗ ಮಾತ್ರವೇ ಅದು ಕೆಟ್ಟದ್ದಾಗುತ್ತದೆ.”[73]

McDonald ಸರಿಯಾದ ಅಭಿಪ್ರಾಯವನ್ನೇ ವ್ಯಕ್ತಪಡಿಸುತ್ತಾನೆ,

> ಆದಾಗ್ಯೂ, ದೇವರ ಸೃಷ್ಟಿಯಾದ ಮನುಷ್ಯನ ಬಲಹೀನತೆಗೆ “ಶರೀರ” – *sarx* — ಕೇವಲ ಒಂದು ಹೆಸರಲ್ಲ. ನಿಜ, ಶರೀರವು ಭ್ರಷ್ಟಗೊಳ್ಳಬಲ್ಲದು (1 ಕೊರಿಂಥ 15:53, KJV) ಮತ್ತು ಮರಣಕ್ಕೆ ಒಳಗಾಗಬಲ್ಲದ್ದು (2 ಕೊರಿಂಥ 10:2). ಹಾಗಿದ್ದರೂ, ಪೌಲನು ತನ್ನ *sarx* ಯೋಚನೆಗೆ ಒಂದು ಹೆಚ್ಚು ಸಕಾರಾತ್ಮಕವಾದ ನೈತಿಕ ಅಂಶವನ್ನು ಒದಗಿಸುತ್ತಾನೆ. ಹೀಗೆ, ಶರೀರವು ಸ್ವತಃ ಪಾಪವುಳ್ಳದ್ದಲ್ಲವಾದಾಗ್ಯೂ, ಅದು ಮನುಷ್ಯನೊಳಗೆ ಪಾಪಕ್ಕೆ ಅವಕಾಶವನ್ನು ಕೊಡುವಂಥ ಒಂದು ಭಾಗವಾಗಿರುತ್ತದೆ. ಅದು ಪಾಪಕ್ಕೆ ಅದರ ಸಿದ್ಧವಾಗಿರುವ ಕಾರ್ಯಾಚರಣೆಯ ನೆಲೆಯನ್ನು ಒದಗಿಸುತ್ತದೆ. ಪಾಪವು ಒತ್ತುವರಿ ಮಾಡಿಕೊಳ್ಳುವಂಥ ಮತ್ತು ತನ್ನನ್ನು ಜೋಡಿಸಿಕೊಳ್ಳುವಂಥ ಒಂದು ಭಾಗವಾಗಿ ಮನುಷ್ಯನಲ್ಲಿರುವದೇ sarx. ಹಾಗಾದರೆ, ವಿಸ್ತಾರತೆಯಲ್ಲಿ ನೋಡುವದಾದರೆ, ಪೌಲನು ಭೌತಿಕವಾದದ್ದು ಸ್ವಭಾವತಃ ಕೆಟ್ಟದ್ದೆಂಬ ಗ್ನಾಸ್ಟಿಕ್ ಅಭಿಪ್ರಾಯವನ್ನು ಬೋಧಿಸುವದಿಲ್ಲವಾದರೂ, ಹೇಗೋ ಶರೀರವು ಕೆಟ್ಟದ್ದರ ಪ್ರಸನ್ನತೆಯಿಂದ ಒಳವ್ಯಾಪಿಸಲ್ಪಟ್ಟಿದ್ದು, ಅದು “ಶರೀರಭಾವದ ಕರ್ಮಗಳು” ಹೊರಹೊಮ್ಮುವ ಸ್ಥಾನವಾಗುತ್ತದೆಂದು ಪರಿಗಣಿಸುತ್ತಾನೆ (cf. ಗಲಾತ್ಯ 5:19; ಇತ್ಯಾದಿ).[74]

ಮಾನವರು ಬಲಹೀನರು ಮತ್ತು ಪಾಪಕ್ಕೊಳಗಾಗುವವರು ಆಗಿದ್ದಾರಾದರೂ, ನಾವು ಕೆಟ್ಟದ್ದನ್ನು ಮಾಡುವಂತೆ ಒಂದು ಪಾಪಾಧೀನಸ್ವಭಾವದಿಂದ ಒತ್ತಾಯಿಸಲ್ಪಡುವದಿಲ್ಲ. ಬಹಳ ಕಾಲದ ಹಿಂದೆ ಯೆಹೋಶುವನು ಕರೆ ನೀಡಿದ ಹಾಗೆಯೇ (ಯೆಹೋಶುವ 24:15), ನಾವು ಯಾರನ್ನು ಸೇವಿಸುತ್ತೇವೆಂಬುದನ್ನು ಆಯ್ಕೆ ಮಾಡಿಕೊಳ್ಳಬೇಕು.

## ಹೆಚ್ಚಿನ ಅಧ್ಯಯನಕ್ಕಾಗಿ: ಶಿಶುಗಳಿಗೆ ದೀಕ್ಷಾಸ್ನಾನ ಮಾಡಿಸಬೇಕೋ?

ಶಿಶುಗಳಿಗೆ ದೀಕ್ಷಾಸ್ನಾನ ಮಾಡಿಸಬಹುದು ಎಂಬುದಕ್ಕೆ ಕೊಲೊಸ್ಸೆ 2:11, 12 ವಚವನಗಳನ್ನು "ಪುರಾವೆ"ಯಾಗಿ ಬಳಸಲಾಗುತ್ತದೆ. ಶಿಶುಗಳಿಗೆ ದೀಕ್ಷಾಸ್ನಾನ ಮಾಡಿಸಬೇಕು ಎಂಬದಾಗಿ ತಾನು ಏಕೆ ಭಾವಿಸುತ್ತೇನೆಂಬುದನ್ನು ವಿವರಿಸುವದಕ್ಕೆ ಪ್ರಯತ್ನಿಸುತ್ತಾ, William Hendriksen ಹೀಗೆ ಬರೆಯುತ್ತಾನೆ,

> ನಾನು ಇಲ್ಲಿ ಒಂದು ಸ್ಪಷ್ಟವಾದ *ಸೂಚ್ಯಾರ್ಥವನ್ನು* ಕುರಿತು ಮಾತಾಡುತ್ತಿದ್ದೇನೆ. ಮೇಲ್ಗಡೆ ತೋರುವ ವಿರುದ್ಧ ಹೋಲಿಕೆಯೆಂದರೆ ವಿವರಿಸಲ್ಪಟ್ಟಿರುವ ಪ್ರಕಾರ, *ಅಕ್ಷರಶಃ* ಸುನ್ನತಿ ಮತ್ತು *ಕೈಗಳಿಂದ ಮಾಡಿದ್ದಲ್ಲದ ಸುನ್ನತಿ,* ಹೆಸರಿಸುವದಾದರೆ, ಹೃದಯದ ಸುನ್ನತಿ ನಡುವೆ ಆಗಿರುತ್ತದೆ. ಆದರೆ ಸೂಚ್ಯಾರ್ಥವು ಸಹ ಸ್ಪಷ್ಟವಾಗಿರುತ್ತದೆ. ಹೀಗಿರುವದರಿಂದ, ಈ ಕೆಳಗಿನ ಹೇಳಿಕೆಯು ಸರಿಯಾಗಿರುತ್ತದೆ: "ಹಾಗಾದರೆ, ದೀಕ್ಷಾಸ್ನಾನವು ಸುನ್ನತಿಯ ಸ್ಥಾನದಲ್ಲಿ ಬಂದಿರುವದರಿಂದ (ಕೊಲೊಸ್ಸೆ 2:11-13), ಮಕ್ಕಳಿಗೆ ಆತನ ರಾಜ್ಯದ ಮತ್ತು ಆತನ ಒಡಂಬಡಿಕೆಯ ಬಾಧ್ಯಸ್ಥರಾಗಿ ದೀಕ್ಷಾಸ್ನಾನ ಮಾಡಿಸತಕ್ಕದ್ದು" (*Form for the Baptism of Infants in Psalter Hymnal of the Christian Reformed Church,* Grand Rapids, Mich., 1959, p. 86). ದೇವರು ಅಬ್ರಹಾಮನ ಸಂಗಡ ಒಡಂಬಡಿಕೆಯನ್ನು ಮಾಡಿಕೊಂಡಾಗ ಅದರಲ್ಲಿ ಮಕ್ಕಳು ಸೇರಿದ್ದರು (ಆದಿಕಾಂಡ 17:1-14). ಈ ಒಡಂಬಡಿಕೆಯು, ತನ್ನ ಆತ್ಮೀಕ ಅಂಶಗಳಲ್ಲಿ, ಹೊಸ ಯುಗದಲ್ಲಿ ಮುಂದುವರೆಯಿತು (ಅಪೊಸ್ತಲರ ಕೃತ್ಯಗಳು 2:38, 39; ರೋಮಾ 4:9-12; ಗಲಾತ್ಯ 3:7, 8, 29). ಆದುದರಿಂದ ಮಕ್ಕಳು ಈಗಲೂ ಅದರಲ್ಲಿ ಸೇರಿದವರಾಗಿದ್ದು ಗುರುತನ್ನು ಸ್ವೀಕರಿಸಿಕೊಳ್ಳತಕ್ಕದ್ದು, ಆ ಗುರುತು ಈಗಿನ ಯುಗದಲ್ಲಿ, ಪೌಲನು ಕೊಲೊಸ್ಸೆ 2:11, 12ರಲ್ಲಿ ಸ್ಪಷ್ಟಗೊಳಿಸುವ ಪ್ರಕಾರ, ದೀಕ್ಷಾಸ್ನಾನ ಆಗಿರುತ್ತದೆ.[75]

ಅಪೊಸ್ತಲರ ಕೃತ್ಯಗಳು 2:39ರ "ಮಕ್ಕಳು" ಶಿಶುಗಳಾಗಿರುವದಿಲ್ಲ ಆದರೆ ಸಂತಾನವಾಗಿದ್ದಾರೆ. ಪೇತ್ರನು ಶಿಶುಗಳೆಂಬ ಅರ್ಥದಲ್ಲಿ ಹೇಳಬೇಕೆಂದಿದ್ದರೆ ಆತನು βρέφος *brephos*, "ಶಿಶು") ಅಥವಾ παιδίον (*paidion*, "ಚಿಕ್ಕ ಮಗು") ಎಂಬ ರೂಪದ ಪದಗಳನ್ನು ಬಳಸಿರುತ್ತಿದ್ದನು. ಪೇತ್ರನು τέκνον (*teknon*) ಪದವನ್ನು ಬಳಸಿದನು, ಅದರರ್ಥವು "ಸಂತತಿ" ಅಥವಾ "ಸಂತಾನ" ಎಂದಾಗಿರುತ್ತದೆ. ಪಾಪಗಳ ಕ್ಷಮಾಪಣೆ ಮತ್ತು ಪವಿತ್ರಾತ್ಮನ ವರದ ವಾಗ್ದಾನಗಳು ಇಸ್ರಾಯೇಲ್ಯರ ಸಂತಾನದವರಿಗೋಸ್ಕರವಾಗಿದ್ದವು. ಈ ಆಶೀರ್ವಾದಗಳಿ ದೀಕ್ಷಾಸ್ನಾನಕ್ಕೆ ಮುಂಚೆ ಪಶ್ಚಾತ್ತಾಪ ಪಡುವವರಿಗೆ ಮಾತ್ರವೇ ಆಗಿರುತ್ತವೆ (ಅಪೊಸ್ತಲರ ಕೃತ್ಯಗಳು 2:38). ಪವಿತ್ರಾತ್ಮನು ಶಿಶುಗಳಿಗಾಗಿ ವಾಗ್ದಾನ ಮಾಡಲ್ಪಟ್ಟಿರಲಿಲ್ಲ.

ಕೊಲೊಸ್ಸೆ 2:11-13 ವಚನಗಳು ಶಿಶು ದೀಕ್ಷಾಸ್ನಾನವನ್ನು ಅನುಮೋದಿಸುವದಿಲ್ಲ. ತದ್ವಿರುದ್ಧವಾಗಿ, ಈ ವಾಕ್ಯಭಾಗವು ಅದನ್ನು ಹೊರಗಿಡುತ್ತದೆ. ದೀಕ್ಷಾಸ್ನಾನದ ಆತ್ಮೀಕ ಸುನ್ನತಿಯ ವೇಳೆಯಲ್ಲಿ ಶಾರೀರಿಕ ಅಭಿಲಾಷೆಗಳು ತೆಗೆದು ಹಾಕಲ್ಪಡುತ್ತವೆ; ಆದರೆ ಶಿಶುಗಳಲ್ಲಿ ಇನ್ನೂ ಶಾರೀರಿಕ ಅಭಿಲಾಷೆಗಳು ಹುಟ್ಟಿರುವದೂ ಇಲ್ಲ, ಅವರು ಶಾರೀರಿಕ ಕೃತ್ಯಗಳನ್ನು ನಡಿಸುವದಕ್ಕೂ ಆಗುವದಿಲ್ಲ (ಗಲಾತ್ಯ 5:19-21). ಅವರ ಆರಂಭಿಕ ನಿಷ್ಕಪಟ

ವರ್ಷಗಳಲ್ಲಿ, ಅವರಿಗೆ ಒಳ್ಳೇದರ ಮತ್ತು ಕೆಟ್ಟದ್ದರ ಜ್ಞಾನವಿರುವದಿಲ್ಲ (ಧರ್ಮೋಪದೇಶಕಾಂಡ 1:39). ಈ ನೈತಿಕ ಕುರುಡುತನದ ನಿಮಿತ್ತವಾಗಿ, ಅವರಲ್ಲಿ ಕ್ಷಮಿಸಲ್ಪಡಬೇಕಾದ ಪಾಪಗಳು ಇರುವದಿಲ್ಲ (ಯೋಹಾನ 9:41). ಈ ಕಾರಣಕ್ಕಾಗಿ, ಅವರು "ಪಾಪದಲ್ಲಿ ಸತ್ತವರಾಗಿ" ಇರುವದಿಲ್ಲ. ಕೆಟ್ಟ ಇಚ್ಛೆಗಳಿಗೆ ಒಳಗಾಗುವದರಿಂದಲೇ ಪಾಫದಲ್ಲಿ ಸಾಯುವಂಥದ್ದು ಸಂಭವಿಸುತ್ತದೆ (ಯಾಕೋಬ 1:13-15). ಅವರು ಪಾಪದಲ್ಲಿ ಸತ್ತವರಾಗಿಲ್ಲವಾದ್ದರಿಂದ, ಅವರು ಬದುಕಿಸಲ್ಪಡುವ ಅಗತ್ಯವಿರುವದಿಲ್ಲ (ಕೊಲೊಸ್ಸೆ 2:13). ಅಷ್ಟುಮಾತ್ರವಲ್ಲದೆ, ದೀಕ್ಷಾಸ್ನಾನದೊಂದಿಗೆ ಸಂಬಂಧ ಹೊಂದಿರುವ "ದೇವರ ಸಾಮರ್ಥ್ಯದಲ್ಲಿ ನಂಬಿಕೆ"ಯಿಡುವದಕ್ಕೆ ಅವರು ಅಶಕ್ತರಾಗಿರುತ್ತಾರೆ (ಕೊಲೊಸ್ಸೆ 2:12).

ದೀಕ್ಷಾಸ್ನಾನಕ್ಕಾಗಿರುವ ಪೂರ್ವಭಾವಿ ಶರತ್ತುಗಳಲ್ಲಿ ಮಕ್ಕಳಿಂದ ನೆರವೇರಿಸಲಿಕ್ಕಾಗದಂಥ ಬೇಡಿಕೆಗಳಿರುತ್ತವೆ. ದೀಕ್ಷಾಸ್ನಾನ ಮಾಡಿಸಿಕೊಳ್ಳುವವರಿಗೆ ಮೊದಲು ಸುವಾರ್ತೆಯನ್ನು ಬೋಧಿಸಬೇಕು (ಮಾರ್ಕ 16:15, 16); ದೇವರ ವಾಕ್ಯವನ್ನು ಕೇಳುವದು ಮತ್ತು ಸ್ವೀಕರಿಸಿಕೊಳ್ಳುವದು (ಅಪೊಸ್ತಲರ ಕೃತ್ಯಗಳು 2:41; 18:8); ನಂಬುವದು (ಮಾರ್ಕ 16:15, 16; ಅಪೊಸ್ತಲರ ಕೃತ್ಯಗಳು 8:12; 18:8); ಪಶ್ಚಾತ್ತಾಪ ಪಡಬೇಕು (ಅಪೊಸ್ತಲರ ಕೃತ್ಯಗಳು 2:38); ಮತ್ತು ಯೇಸುವು ದೇವಕುಮಾರನೆಂದು ಆತನಲ್ಲಿ ತಮ್ಮ ನಂಬಿಕೆಯನ್ನು ಅರಿಕೆ ಮಾಡಬೇಕು (ರೋಮಾ 10:9, 10; 1 ತಿಮೊಥೆ 6:12).

ದಾಖಲಿಸಲ್ಪಟ್ಟಿರುವ ದೀಕ್ಷಾಸ್ನಾನ ಮಾಡಿಸಲ್ಪಟ್ಟವರ ಉದಾಹರಣೆಗಳಲ್ಲಿ ಅವರೆಲ್ಲವೂ ಪುರುಷರು ಮತ್ತು ಸ್ತ್ರೀಯರಾಗಿದ್ದರು, ಹೊರತು ಶಿಶುಗಳಾಗಿರಲಿಲ್ಲ (ಅಪೊಸ್ತಲರ ಕೃತ್ಯಗಳು 8:12). ಇವರು ಒಳ್ಳೇ ಮನಸ್ಸಾಕ್ಷಿ ಬೇಕೆಂದು ದೇವರಿಗೆ ವಿಜ್ಞಾಪಿಸಿಕೊಳ್ಳುವ ಜನರಾಗಿದ್ದರು (1 ಪೇತ್ರ 3:21). ಶಿಶುಗಳು ಈ ಕಾರ್ಯಗಳನ್ನೆಲ್ಲಾ ಮಾಡುವದಕ್ಕೆ ಸಾಧ್ಯವಿಲ್ಲವಾದ್ದರಿಂದ, ಅವರು ದೀಕ್ಷಾಸ್ನಾನ ಮಾಡಿಸಿಕೊಳ್ಳಲು ಅರ್ಹರಾದ ಅಭ್ಯರ್ಥಿಗಳಾಗಿರುವದಿಲ್ಲ.

ಶಿಶು ದೀಕ್ಷಾಸ್ನಾನದ ಬೆಂಬಲವಾಗಿ ಮಾಡಲ್ಪಡುವ ಇನ್ನೊಂದು ವಾದವೆಂದರೆ ಮನೆಯವರೆಲ್ಲಾ ದೀಕ್ಷಾಸ್ನಾನ ಮಾಡಿಸಿಕೊಳ್ಳುವಾಗ ಅದರಲ್ಲಿ ಶಿಶುಗಳು ಸಹ ಸೇರಿದ್ದರು ಎಂಬದೆ. ಇದು ಎಲ್ಲಾ ಮನೆಯವರಲ್ಲಿ ಶಿಶುಗಳಿರುತ್ತವೆಂದು ಪೂರ್ವಕಲ್ಪನೆ ಮಾಡಿದಂತಾಗುತ್ತದೆ. ಮನೆಯವರೆಲ್ಲರು ದೀಕ್ಷಾಸ್ನಾನ ಮಾಡಿಸಿಕೊಂಡ ಬಗ್ಗೆ ದಾಖಲಿಸಲ್ಪಟ್ಟಿರುವ ಸನ್ನಿವೇಶಗಳು ಅದರಲ್ಲಿ ಶಿಶುಗಳು ಸೇರಿರಲಿಲ್ಲ ಎಂಬುದನ್ನು ಸೂಚಿಸುತ್ತವೆ.

1. ಅಪೊಸ್ತಲರ ಕೃತ್ಯಗಳು 2:36-41. ಆ ಇಸ್ರಾಯೇಲ್ ಕುಲದವರಿಗೆ *ಪಶ್ಚಾತ್ತಾಪ* ಪಟ್ಟು ದೀಕ್ಷಾಸ್ನಾನ ಮಾಡಿಸಿಕೊಳ್ಳುವಂತೆ ಬೋಧಿಸಲಾಯಿತು. ಅವರು ಏನು ಮಾಡಬೇಕೆಂದು ಕೇಳಿದರು. ದೀಕ್ಷಾಸ್ನಾನ ಮಾಡಿಸಿಕೊಂಡವರು ವಾಕ್ಯವನ್ನು ಅಂಗೀಕರಿಸಿಕೊಂಡರು. ಶಿಶುಗಳು ಈ ಕಾರ್ಯಗಳನ್ನು ಮಾಡಿರುವದಕ್ಕೆ ಸಾಧ್ಯವಿರಲಿಲ್ಲ ಮತ್ತು ಅದರಲ್ಲಿ ಸೇರ್ಪಡೆಗೊಳಿಸಲ್ಪಟ್ಟಿರಲಾರರು.

2. ಅಪೊಸ್ತಲರ ಕೃತ್ಯಗಳು 10. ಕೊರ್ನೇಲ್ಯನ ಮನೆಯವರು ದೇವರಿಗೆ ಭಯಭಕ್ತಿಯುಳ್ಳವರಾಗಿದ್ದರು ಮತ್ತು ಪೇತ್ರನ ಸಂದೇಶವನ್ನು ಕೇಳುವದಕ್ಕೆ ಕೂಡಿ ಬಂದರು. ಕ್ಷಮಾಪಣೆಯನ್ನು ಹೊಂದಿಕೊಳ್ಳಬೇಕೆಂದರೆ, ನಂಬಬೇಕು ಎಂದು ಅವರಿಗೆ ಹೇಳಲಾಯಿತು.

ಅವರು ವಾಕ್ಯವನ್ನು ಕೇಳಿದರು ಮತ್ತು ಅಂಗೀಕರಿಸಿದರು (ಅಪೊಸ್ತಲರ ಕೃತ್ಯಗಳು 11:1). ಬಳಿಕ ಅವರು ಪವಿತ್ರಾತ್ಮನನ್ನು ಹೊಂದಿಕೊಂಡರು ಮತ್ತು ಅನ್ಯಭಾಷೆಗಳಲ್ಲಿ ಮಾತಾಡಿದರು. ಅಂತಿಮವಾಗಿ, ತಮ್ಮ ಸಂಗಡ ಸ್ವಲ್ಪ ಕಾಲ ಉಳಿದುಕೊಳ್ಳಬೇಕೆಂದು ಅವರು ಪೇತ್ರನನ್ನು ಬೇಡಿಕೊಂಡರು. ಈ ಹೇಳಿಕೆಗಳಲ್ಲಿ ಶಿಶುಗಳನ್ನೊಳಗೊಂಡಿರಲು ಸಾಧ್ಯವಿಲ್ಲ.

3. ಅಪೊಸ್ತಲರ ಕೃತ್ಯಗಳು 16:14, 15. ಬಹುಶಃ ಲುದ್ಯಳ ಮನೆಯವರಲ್ಲಿ ಶಿಶುಗಳು ಸೇರಿರಲಿಲ್ಲ, ಯಾಕೆಂದರೆ ಲೂಕನು "ಆಕೆಯ ಮನೆಯವರು" ಎಂದು ಕರೆಯುತ್ತಾನೆ, ಮತ್ತು ಆಕೆಯು "ನಮ್ಮ ಮನೆ" ಎಂಬುದರ ಬದಲಾಗಿ "ನನ್ನ ಮನೆ" ಎಂದು ಹೇಳುತ್ತಾಳೆ. ಆಕೆಗೆ ಗಂಡನಿರಲಿಲ್ಲ ಎಂಬ ಸೂಚ್ಯಾರ್ಥವು ಇಲ್ಲಿರುತ್ತದೆ. ಹೇಗೂ, ಆಕೆಯ ಮನೆಯವರಲ್ಲಿ ಸೇವಕರು ಅಥವಾ ದಾಸರು ಸೇರಿರಬಹುದಾಗಿದೆ.

4. ಅಪೊಸ್ತಲರ ಕೃತ್ಯಗಳು 16:23-34. ಪೌಲ ಮತ್ತು ಸೀಲರು ಫಿಲಿಪ್ಪಿಯದ ಸೆರೆಮನೆಯ ಅಧಿಕಾರಿಗೆ ರಕ್ಷಣೆ ಹೊಂದಬೇಕಾದರೆ ಆತನು ಮತ್ತು ಆತನ ಮನೆಯವರು ನಂಬಿಕೆಯನ್ನಿಡಬೇಕು ಎಂದು ಹೇಳಿದರು. ಬಳಿಕ, ಆತನ ಮನೆಯವರಿಗೆಲ್ಲಾ ಕರ್ತನ ವಾಕ್ಯವನ್ನು ತಿಳಿಸಿದರು – ಸ್ಪಷ್ಟವಾಗಿರುವ ಪ್ರಕಾರ, ರಕ್ಷಣೆ ಹೊಂದುವದಕ್ಕೆ ಏನು ಮಾಡಬೇಕೆಂಬ ಕುರಿತಾಗಿ ಯೇಸುವಿನ ಬೋಧನೆಯು ಅದರಲ್ಲಿ ಸೇರಿತ್ತು (ಮಾರ್ಕ 16:15, 16). ಇದಾದ ಬಳಿಕ, ಸೆರೆಮನೆ ಅಧಿಕಾರಿ ಮತ್ತು ಆತನ ಮನೆಯವರೆಲ್ಲರೂ ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡರು. ಆಮೇಲೆ ಅವರು ಸಂತೋಷಗೊಂಡರು. ಪೌಲನು ಶಿಸುಗಳಿಗೆ ಕರ್ತನ ವಾಕ್ಯವನ್ನು ಸಾರಿಸುವದಕ್ಕೆ ಸಾಧ್ಯವಿರಲಿಲ್ಲ, ಅವರು ನಂಬಿಕೆಯಿಡುವದಕ್ಕೆ ಶಕ್ತರೂ ಆಗಿರಲಿಕ್ಕೆ ಸಾಧ್ಯವಿಲ್ಲ – ಆದಾಗ್ಯೂ ಆತನು "ಆತನ ಮನೆಯಲ್ಲಿದ್ದವರೆಲ್ಲರಿಗೂ" ವಾಕ್ಯವನ್ನು ತಿಳಿಸಿದನು.

5. ಅಪೊಸ್ತಲರ ಕೃತ್ಯಗಳು 18:8. ಕ್ರಿಸ್ಪನು (ಪೌಲನು ಆತನಿಗೆ ವೈಯಕ್ತಿಕವಾಗಿ ದೀಕ್ಷಾಸ್ನಾನ ಮಾಡಿಸಿದನು; 1 ಕೊರಿಂಥ 1:14) ತನ್ನ ಮನೆಯವರೆಲ್ಲರ ಜೊತೆಯಾಗಿ ವಾಕ್ಯವನ್ನು ಕೇಳಿದನು ಮತ್ತು ಕರ್ತನಲ್ಲಿ ನಂಬಿಕೆಯಿಟ್ಟನು. ಶಿಶುಗಳಿಗೆ ನಂಬಿಕೆಯಿಡುವ ಸಾಮರ್ಥ್ಯವಿರುವದಿಲ್ಲ.

6. 1 ಕೊರಿಂಥ 1:16. ತಾನು ಸ್ತೆಫನನ ಮನೆಯವರಿಗೆ ದೀಕ್ಷಾಸ್ನಾನ ಮಾಡಿಸಿದೆನು ಎಂದು ಪೌಲನು ಬರೆಯುತ್ತಾನೆ. ಇಲ್ಲಿ ಶಿಶುಗಳು ಸೇರಿರಲಿಲ್ಲ, ಯಾಕೆಂದರೆ ಆತನ ಮನೆಯವರು "ದೇವಜನರಿಗೆ ಸೇವೆ ಮಾಡುವದಕ್ಕೆ" ಸಮರ್ಪಿಸಿಕೊಂಡಿದ್ದರು (1 ಕೊರಿಂಥ 16:15).

ಆದಿ ಸಭೆಯಲ್ಲಿ ಶಿಶುಗಳಿಗೆ ದೀಕ್ಷಾಸ್ನಾನ ಮಾಡಿಸಿದ ಯಾವದೇ ಉದಾಹರಣೆಗಳು ಬೈಬಲ್‌ನಲ್ಲಿರುವದಿಲ್ಲ. ದೀಕ್ಷಾಸ್ನಾನಕ್ಕೆ ಇರುವ ಪೂರ್ವಭಾವಿ ಶರತ್ತುಗಳು ದೀಕ್ಷಾಸ್ನಾನದ ಅಗತ್ಯತೆ ಅಥವಾ ಸ್ವೀಕರಿಸಿಕೊಳ್ಳುವದರಿಂದ ಶಿಶುಗಳನ್ನು ಹೊರಗಿಡುತ್ತವೆ.

## ಅನ್ವಯಿಸುವಿಕೆ

### ನಮ್ಮಲ್ಲಿರುವ ಕ್ರಿಸ್ತನು

ಕ್ರೈಸ್ತರ ಜೀವಿತಗಳಲ್ಲಿ ಕ್ರಿಸ್ತನಿಗಿರುವ ಪ್ರಾಮುಖ್ಯತೆಯೊಳಗಿನ ಅಂತರ್ದೃಷ್ಟಿಯು

ಇವುಗಳು ಹೇಗೆ ಒಂದಕ್ಕೊಂದು ಸಂಬಂಧಿಸಿವೆ ಎಂಬುದರಲ್ಲಿ ತೋರಿ ಬರುತ್ತದೆ. ಕ್ರೈಸ್ತರಾಗಿ, ಕ್ರಿಸ್ತನ ಮೂಲಕವಾಗಿ ದೇವರ ಯೋಜನೆಯ ಬಗ್ಗೆ ಜ್ಞಾನವನ್ನು ಪಡೆದುಕೊಳ್ಳತಕ್ಕದ್ದು (2:2). ನಾವು ಕ್ರಿಸ್ತನೊಂದಿಗೆ ಬದುಕಿಸಲ್ಪಟ್ಟವರಾಗಿ (2:13) ಮತ್ತು ಬೆಳೆಯುವದಕ್ಕಾಗಿ ಆತನನ್ನು ನಮ್ಮ ಶಿರಸ್ಸೆಂದು ಹೊಂದಿಕೊಂಡಿರುವವರಾಗಿ (2:19) ಆತನಲ್ಲಿ ನಡೆಯಬೇಕು (2:6). ಯೇಸುವಿನ ವಾಕ್ಯವು ನಮ್ಮೊಳಗೆ ನೆಲೆಗೊಂಡಿರತಕ್ಕದ್ದು (3:16). ಇತರರೊಂದಿಗಿನ ನಮ್ಮ ಸಂಬಂಧವು ಕ್ರಿಸ್ತನ ಸಂಗಡ ನನಮಗಿರುವ ಸಂಬಂಧದ ಮೇಲೆ ಆಧಾರಗೊಳಿಸಲ್ಪಡಬೇಕು: ಹೆಂಡತಿಯರು "ಕರ್ತನಲ್ಲಿರುವವರಿಗೆ ಯೋಗ್ಯವಾಗಿರುವ" ರೀತಿಯಲ್ಲಿ ತಮ್ಮ ಗಂಡಂದಿರಿಗೆ ಅಧೀನರಾಗಿರಬೇಕು (3:18); ಮಕ್ಕಳು ತಂದೆತಾಯಿಗಳಿಗೆ ವಿಧೇಯರಾಗಿರಬೇಕು, ಅದು "ಕರ್ತನ ದೃಷ್ಟಿಯಲ್ಲಿ ಮೆಚ್ಚಿಕೆಯಾಗಿದೆ" (3:20); ದಾಸರು "ಕರ್ತನಿಗೆ ಭಯಪಡುವವರಾಗಿ" ತಮ್ಮ ಯಜಮಾನರಿಗೆ ಸೇವೆ ಮಾಡತಕ್ಕದ್ದು (3:22); ಮತ್ತು ಯಜಮಾನರು "ಪರಲೋಕದಲ್ಲಿ ನಿಮಗೂ ಯಜಮಾನನೊಬ್ಬನಿದ್ದಾನೆ" ಎಂದು ತಿಳಿದು ತಮ್ಮ ದಾಸರನ್ನು ಉತ್ತಮವಾಗಿ ನಡೆಸಿಕೊಳ್ಳತಕ್ಕದ್ದು (4:1). ಎಲ್ಲಾ ಸೇವೆಗಳನ್ನೂ ಕರ್ತನಿಗೋಸ್ಕರವೇ ಎಂದು ಮನಃಪೂರ್ವಕವಾಗಿ ಮಾಡತಕ್ಕದ್ದು (3:23).

## ಮನುಷ್ಯರ ಸಂಪ್ರದಾಯಗಳನ್ನು ಅನುಸರಿಸುವದಕ್ಕೆ ನಿರಾಕರಿಸುವದು (2:8)

ಯೇಸುವೇ ಜ್ಞಾನ ಮತ್ತು ತಿಳುವಳಿಕೆಯ ನಿಜವಾದ ಮೂಲ ಎಂಬುದನ್ನು ನಾವು ನೆನಪಿಟ್ಟುಕೊಳ್ಳಬೇಕು. ಮನುಷ್ಯರ ಸಂಪ್ರದಾಯಗಳು ಮೋಸಕರವಾಗಿರುತ್ತವೆ. ಒಬ್ಬ ಕ್ರೈಸ್ತನು ಮನುಷ್ಯ ಜ್ಞಾನ ಮತ್ತು ತಿಳುವಳಿಕೆಯ ಕಡೆಗೆ ತಿರುಗಿಕೊಳ್ಳುವದಾದರೆ, ಆತನು ಆತ್ಮವನ್ನು ಸಂತೃಪ್ತಿಗೊಳಿಸುವಂಥ ಜೀವಕರವಾದ ನಿರ್ಮಲ ಜಲವನ್ನು ಬಿಟ್ಟು ಕಲುಷಿತವಾದ, ಮನುಷ್ಯನ ಕೆಸರಿನಿಂದ ಕೂಡಿದ ಯೋಚನೆಯ ಕಡೆಗೆ ತಿರುಗಿಕೊಂಡ ಹಾಗಿರುವದು. ಇಸ್ರಾಯೇಲ್ಯರು ಜೀವಜಲದ ಬುಗ್ಗೆಯಾದ ನನ್ನನ್ನು ಬಿಟ್ಟು ನೀರು ನಿಲ್ಲದ ಬಿರಿದ ತೊಟ್ಟಿಗಳ ಕಡೆಗೆ ತಿರುಗಿಕೊಂಡಿದ್ದಾರೆಂದು ದೇವರು ಯೆರೆಮೀಯನಿಗೆ ಪ್ರಕಟಗೊಳಿಸುತ್ತಾನೆ (ಯೆರೆಮೀಯ 2:13).

ಮನುಷ್ಯರ ವಿಶ್ವಾಸಪ್ರಮಾಣಗಳು, ನಿರ್ಣಯಗಳು, ಮತ್ತು ಸಂಪ್ರದಾಯಗಳು ಉತ್ತಮ ಬೆಳೆಯನ್ನು ಪಡೆಯಬೇಕಾದರೆ ಕಿತ್ತು ಹಾಕಬೇಕಾಗಿರುವ ಹೊಲದಲ್ಲಿರುವ ಮುಳ್ಳುಗಿಡಗಳು ಹಾಗೂ ಕಳೆಗಳ ರೀತಿಯಲ್ಲಿರುತ್ತವೆ. ಅವುಗಳು ಶುದ್ಧ ನೀರಿನ ಬುಗ್ಗೆಗಳಲ್ಲಿ ಪ್ರವೇಶಿಸಿರುವ ಕಲ್ಮಶವಿದ್ದಂತೆ ಅಥವಾ ಒಂದು ಗುಣಪಡಿಸುವ ಔಷಧದಲ್ಲಿ ಮಿಶ್ರಣಗೊಳಿಸಿರುವ ವಿಷದ ರೀತಿಯಲ್ಲಿರುತ್ತವೆ. ಯೇಸುವಿನ ಶುದ್ಧ ಬೋಧನೆಯನ್ನು ಮಾತ್ರವೇ ಕ್ರೈಸ್ತರು ಅಂಗೀಕರಿಸಿಕೊಳ್ಳತಕ್ಕದ್ದು. ಅದು ಮಾತ್ರವೇ ರಕ್ಷಿಸಬಲ್ಲದ್ದಾಗಿದೆ.

## ಯೇಸು ದೇವರ ಸರ್ವಸಂಪೂರ್ಣತೆ ಹೊಂದಿದ್ದಾನೆ (2:9)

ಯೇಸು ಸ್ವಭಾವದಲ್ಲಿ ತಂದೆಗಿಂತ ಕಡಿಮೆಯಾದವನಾಗಿರುವದಿಲ್ಲ. ಆತನು ಎಲ್ಲಾ ಮಾನವರಿಗೆ ಅತ್ಯಂಥ ಸರ್ವೋಚ್ಚನಾಗಿರುತ್ತಾನೆ. ಈ ಕಾರಣಕ್ಕಾಗಿ, ಆತನಿಗೆ ಅತ್ಯಂಥ ಹೆಚ್ಚಿನ ಗೌರವ ಹಾಗೂ ಘನವನ್ನು ಸಲ್ಲಿಸತಕ್ಕದ್ದು. ಆತನು ಆರಾಧನೆಗೆ ಯೋಗ್ಯನು. ಕುರಿಯಾದಾತನಾದ ಯೇಸುವಿನ ಮುಂದೆ ಇಪ್ಪತ್ನಾಲ್ಕು ಹಿರಿಯರು ಅಡ್ಡ ಬಿದ್ದರು (ಪ್ರಕಟನೆ

5:8) ಮತ್ತು ಪರಲೋಕದ ಸಕಲ ಸಮೂಹದ ಜೊತೆಯಾಗಿ ಆತನಿಗೆ ಮತ್ತು ತಂದೆಗೆ ಭಯಭಕ್ತಿಯಿಂದ ಕೂಡಿದ ಗೌರವವನ್ನು ಸಲ್ಲಿಸಿದರು (ಪ್ರಕಟನೆ 5:11-14). ಆತನನ್ನು ಆರಾಧಿಸುವಂತೆ ದೇವದೂತರಿಗೆ ಹೇಳಲ್ಪಟ್ಟಿದೆ (ಇಬ್ರಿಯ 1:6).

ದೇವರಾಗಿ, ಆತನಿಗೆ ಮನುಷ್ಯರಿಗಿರುವಂತೆ ಮಿತಿಗಳಿರುವದಿಲ್ಲ. ಆತನಿಗೆ ಎಲ್ಲಾ ಶಕ್ತಿ ಮತ್ತು ಅಧಿಕಾರ ಇರುತ್ತದೆ (ಮತ್ತಾಯ 28:18), ಮತ್ತು ಆತನು ತನ್ನ ಹಿಂಬಾಲಕರು ಎಲ್ಲೆಲ್ಲಿರುತ್ತಾರೋ ಅವರೊಂದಿಗೆ ತಾನು ಸಹ ಇರುವಂತಾಗಲು ಆತನ ಪ್ರಸನ್ನತೆಯು ವಿಶ್ವವನ್ನು ಅಂತರ್ವ್ಯಾಪಿಸಿರುತ್ತದೆ (ಮತ್ತಾಯ 28:20; ನೋಡಿರಿ ಕೀರ್ತನೆ 139:7-12).

## ನಮ್ಮ ಅಗತ್ಯತೆಗಳಿಗೆ ಯೇಸು ಸಂಪೂರ್ಣನಾಗಿದ್ದಾನೆ (2:10)

ಸಂಪೂರ್ಣವಾಗಿರುವಾತನಾಗಿ, ಯೇಸುವು ನಮಗೆ ಅಗತ್ಯವಿರುವದನ್ನೆಲ್ಲಾ ಒದಗಿಸಬಲ್ಲನು. ಇದನ್ನು ಸಾಧ್ಯವಾಗಿಸಿದ ಅಂತಿಮ ಕಾರ್ಯವೆಂದರೆ ಶಿಲುಬೆಯ ಮೇಲಿನ ಆತನ ಮರಣವಾಗಿತ್ತು (ಇಬ್ರಿಯ 5:8, 9). ಆತನು ತನ್ನ ಜೀವನ, ಮರಣ, ಮತ್ತು ಪುನರುತ್ಥಾನಗಳ ಮೂಲಕ, ಎಲ್ಲಾ ಜನರಿಗಾಗಿ ಆಶೀರ್ವಾದಗಳನ್ನು ಸಾಧ್ಯವಾಗಿಸಿದ್ದಾನೆ. ಅವುಗಳಲ್ಲಿ ದೇವರ ಸಂಗಡ ಸಂಧಾನಪಡಿಸಲ್ಪಡುವಿಕೆ (2 ಕೊರಿಂಥ 5:18-20; ಕೊಲೊಸ್ಸೆ 1:20-22), ಪಾಪಗಳ ಕ್ಷಮಾಪಣೆ (ಮತ್ತಾಯ 26:28), ಮತ್ತು ನೀತಿ (2 ಕೊರಿಂಥ 5:21), ಅಷ್ಟೇ ಅಲ್ಲದೆ ಶಾರೀರಿಕ ಹಾಗೂ ಆತ್ಮೀಕ ಅಗತ್ಯತೆಗಳು ಸಹ ಸೇರಿರುತ್ತವೆ (ಫಿಲಿಪ್ಪಿ 4:19). ಕ್ರೈಸ್ತರು ಭರವಸೆಯಿಂದ "ಕರ್ತನು ನಮ್ಮ ಸಹಾಯಕನು" ಎಂದು ಹೇಳಬಹುದಾಗಿದೆ (ಇಬ್ರಿಯ 13:6). ಆತನು "ನಾನು ನಿನ್ನನ್ನು ಎಂದಗೂ ಕೈಬಿಡುವದಿಲ್ಲ, ಎಂದಿಗೂ ತೊರೆಯುವದಿಲ್ಲ" ಎಂದು ವಾಗ್ದಾನ ಮಾಡಿದ್ದಾನೆ (ಇಬ್ರಿಯ 13:5).

ತನ್ನ ಹಿಂಬಾಲಕರನ್ನ ಪೋಷಣೆ ಮಾಡುವದಕ್ಕೆ ಆತನಿಗಿರುವ ಸಾಮರ್ಥ್ಯದ ಕಾರಣದಿಂದ, ಕ್ರೈಸ್ತರು ಆತನಲ್ಲಿ ಪರಿಪೂರ್ಣಗೊಳಿಸಲ್ಪಟ್ಟಿದ್ದಾರೆ. ಜನರಿಗಾಗಿ ಆತನ ಪೋಷಣೆಯು ಶರತ್ತಿನಿಂದ ಕೂಡಿದ್ದಾಗಿದೆ. ಯಾರು ಮೊದಲು ದೇವರ ರಾಜ್ಯವನ್ನೂ ನೀತಿಯನ್ನೂ ಹುಡುಕುತ್ತಾರೋ ಅವರ ಅಗತ್ಯತೆಗಳು ಸಂಧಿಸಲ್ಪಡುವವು ಎಂದು ಯೇಸು ಹೇಳಿದನು (ಮತ್ತಾಯ 6:33). ನೀತಿಯಿಂದ ಜೀವಿಸುವವರಿಗೆ ದೇವರು ಯಾವ ಮೇಲನ್ನು ಮಾಡದೆ ಹಿಡಿದಿಟ್ಟುಕೊಳ್ಳುವದಿಲ್ಲ (ಕೀರ್ತನೆ 84:11).

## ಯೇಸು ನಮಗೆ ಒದಗಿಸಿರುತ್ತಾನೆ (2:11-13)

ನಮಗೆ ಬೇಕಾದದ್ದೆಲ್ಲವನ್ನೂ ಯೇಸು ಒದಗಿಸಿರುವದರಿಂದ ಕ್ರೈಸ್ತರು ಆತನಲ್ಲಿ ಪರಿಪೂರ್ಣರಾಗಿದ್ದಾರೆ. ನಾವು ಆತ್ಮೀಕ ಸುನ್ನತಿಯನ್ನು, ಹೊಸ ಜೀವನವನ್ನು, ಮತ್ತು ಕ್ಷಮಾಪಣೆಯನ್ನು ಹೊಂದುವಂತೆ ಸಾಧ್ಯಗೊಳಿಸುತ್ತಾನೆ.

1. *ಆತ್ಮೀಕ ಸುನ್ನತಿ.* ಎಲ್ಲರೂ ಪಾಪ ಮಾಡಿದ್ದಾರೆ (ರೋಮಾ 3:23), ಆದ್ದರಿಂದ ಕ್ರೈಸ್ತನಾಗುವದಕ್ಕೆ ಮುಂದೆ ಪ್ರತಿಯೊಬ್ಬರೂ ಪಾಪದಿಂದ ಕಲುಷಿತಗೊಂಡವರಾಗಿದ್ದರು. ಒಬ್ಬ ವ್ಯಕ್ತಿಯು ವಿಧೇಯತೆಯಿಂದ ಪ್ರತಿಕ್ರಿಯೆ ನೀಡುವಾಗ, ಯೇಸುವ ಆತನನ್ನು ಎಲ್ಲಾ ಆತ್ಮೀಕ ಕಲ್ಮಷದಿಂದ ಶುದ್ಧಗೊಳಿಸುವನು. ಸುನ್ನತಿಯ ವೇಳೆ ಶರೀರದಿಂದ ಮಾಂಸವು ತೆಗೆದು ಹಾಕಲ್ಪಡುವ ರೀತಿಯಲ್ಲಿಯೇ, ಪಾಪಕೃತ್ಯಗಳು ಇನ್ನು ಮೇಲೆ ಕ್ರೈಸ್ತನೊಬ್ಬನ ಜೀವಿತದಲ್ಲಿ ಭಾಗವಾಗಿರುವದಿಲ್ಲ. ಆತನು ಒಬ್ಬ ಕ್ರೈಸ್ತನಾಗುವಾಗ, ಒಂದು ಸಂಪೂರ್ಣ

ಬದಲಾವಣೆ ಸಂಭವಿಸುತ್ತದೆ; ಆತನು ಪಾಪಕ್ಕೆ ಸೇವೆ ಮಾಡುವಂಥ ತನ್ನ ಜೀವಿತವನ್ನು ತೊರೆದು ಬಿಟ್ಟು ಯೇಸುವಿಗೆ ಸೇವೆ ಮಾಡುವ ಜೀವನವನ್ನು ಆರಂಭಗೊಳಿಸುತ್ತಾನೆ.

2. *ಹೊಸ ಜೀವನ.* ಒಬ್ಬ ಕ್ರೈಸ್ತನಾಗುವದಕ್ಕೆ ಮುಂಚೆ, ವ್ಯಕ್ತಿಯೊಬ್ಬನು ಪಾಪದಲ್ಲಿ ಆತ್ಮೀಕವಾಗಿ ಸತ್ತವನಾಗಿರುತ್ತಾನೆ. ದೇವರ ಸಾಮರ್ಥ್ಯದಲ್ಲಿ ನಂಬಿಕೆಯಿಡುವ ಮೂಲಕ, ದೀಕ್ಷಾಸ್ನಾನದ ವೇಳೆಯಲ್ಲಿ ಆತನು ಆತ್ಮೀಕವಾಗಿ ಬದುಕಿಸಲ್ಪಡುತ್ತಾನೆ. ಆತನ ಪೂರ್ವಜೀವಿತದ ಕೆಟ್ಟ ಚಟಗಳು ಮತ್ತು ಕೃತ್ಯಗಳು ಅಂತ್ಯಗೊಳ್ಳುತ್ತವೆ, ಮತ್ತು ಒಂದು ಹೊಸ ಜೀವನವು ಆರಂಭಗೊಳ್ಳಲಿರುತ್ತದೆ (ರೋಮಾ 6:4). ಯೇಸುವಿಗೆ ಸಮರ್ಪಿತಗೊಂಡಿರುವಂಥ ಒಂದು ಹೊಸ ಜೀವಿತವು ಫಲಿತಗೊಳ್ಳುವದಾದರೆ ಮಾತ್ರವೇ, ಯೇಸುವಿನ ಮರಣ ಹಾಗೂ ಪುನರುತ್ಥಾನಗಳಲ್ಲಿ ಪಾಲ್ಗೊಳ್ಳುವಿಕೆಯು ಸಂಭವಿಸುತ್ತದೆ. ಒಂದು ಕುರೂಪಿ ಕಂಬಳಿ ಹುಳುವು ಹೇಗೆ ಸುಂದರವಾದ ಚಿಟ್ಟೆಯಾಗಿ ರೂಪಾಂತರಗೊಳ್ಳುತ್ತದೋ ಹಾಗೆಯೇ ಒಬ್ಬ ಕ್ರೈಸ್ತನಾಗುವವನು ರೂಪಾಂತರಗೊಂಡವನಾಗಬೇಕು (ರೋಮಾ 12:2).

3. *ಕ್ಷಮಾಪಣೆ.* ಒಬ್ಬನು ಹೊಸ ಜೀವನವನ್ನು ಪಡೆದುಕೊಳ್ಳುವಾಗ, ದೇವರು ಆತನ ಎಲ್ಲಾ ಅಪರಾಧಗಳನ್ನು ಕ್ಷಮಿಸುವನು, ಅವುಗಳನ್ನು ಇನ್ನೆಂದಿಗೂ ನೆನಪಿಗೆ ತಂದುಕೊಳ್ಳುವದಿಲ್ಲ (ಇಬ್ರಿಯ 8:12). ಕ್ಷಮಿಸಲ್ಪಟ್ಟಿರುವವನ ಹೃದಯದಲ್ಲಿ ಹಿಂದಿನ ಪಾಪದ ಕಾರಣದಿಂದಾಗಿ ತನ್ನನ್ನು ತಾನೇ ದೋಷಿಯೆಂದು ಖಂಡನೆ ಮಾಡಿಕೊಳ್ಳುವ ಯೋಚನೆ ಬರಲೇ ಕೂಡದು, ಅದರಿಂದ ಪರಿತಾಪ ಹಾಗೂ ನಿಷ್ಕ್ರಿಯತೆ ಉಂಟಾಗುತ್ತದೆ. ಪೌಲನು ಅದನ್ನು ಈ ವಿಧದಲ್ಲಿ ಹೇಳುತ್ತಾನೆ: "ನಾನು ಹಿಂದಿನ ಸಂಗತಿಗಳನ್ನು ಮರೆತುಬಿಟ್ಟು ಮುಂದಿನವುಗಳನ್ನು ಹಿಡಿಯುವದಕ್ಕೆ ಎದೆ ಬೊಗ್ಗಿದವನಾಗಿ ದೇವರು ಕ್ರಿಸ್ತ ಯೇಸುವಿನ ಮೂಲಕವಾಗಿ ನಮ್ಮನ್ನು ಮೇಲಕ್ಕೆ ಕರೆದು ನಮ್ಮ ಮುಂದೆ ಇಟ್ಟಿರುವ ಬಿರುದನ್ನು ಗುರಿಮಾಡಿಕೊಂಡು ಓಡುತ್ತಾ ಇದ್ದೇನೆ" (ಫಿಲಿಪ್ಪಿ 3:13, 14). ಕ್ಷಮಾಪಣೆಯನ್ನು ಹೊಂದಿದ್ದೇನೆಂಬುದನ್ನು ಗ್ರಹಿಸಿಕೊಳ್ಳುವದರಿಂದ ಒಬ್ಬ ವ್ಯಕ್ತಿಯಲ್ಲಿ ಇನ್ನಷ್ಟು ಅಧಿಕ ಸಮರ್ಪಣೆಯನ್ನು ಉತ್ತೇಜಿಸುತ್ತದೆ. ನಿರಂತರವಾದ ಕ್ಷಮಾಪಣೆಯನ್ನು ಪಡೆದುಕೊಳ್ಳಬೇಕೆಂದರೆ, ಒಬ್ಬ ಕ್ರೈಸ್ತನು ಬೆಳಕಿನಲ್ಲಿ ನಡೆಯಬೇಕು (1 ಯೋಹಾನ 1:7). ಆತನು ಪಾಪಮಾಡುವಾಗ ಪಶ್ಚಾತ್ತಾಪ ಪಟ್ಟು ತನ್ನ ಪಾಪಗಳನ್ನು ದೇವರ ಮುಂದೆ ಅರಿಕೆ ಮಾಡತಕ್ಕದ್ದು (ಅಪೊಸ್ತಲರ ಕೃತ್ಯಗಳು 8:22; 1 ಯೋಹಾನ 1:9).

ಯೇಸು ನಮಗೆ ಸಮಸ್ತದಲ್ಲಿಯೂ ಸಮಸ್ತನಾಗಿದ್ದಾನೆ. ಆತನು ದೇವತ್ವ. ನಾವು ಆತನಲ್ಲಿ ಪರಿಪೂರ್ಣಗೊಳಿಸಲ್ಪಡುತ್ತೇವೆ, ಯಾಕೆಂದರೆ ಆತನು ನಮ್ಮ ಎಲ್ಲಾ ಆತ್ಮೀಕ ಅಗತ್ಯತೆಗಳನ್ನು ಒದಗಿಸುತ್ತಾನೆ.

## ಯೇಸು ಧರ್ಮಶಾಸ್ತ್ರವನ್ನು ಇಲ್ಲದಂತಾಗ ಮಾಡಿದನು (2:14, 15)

ಯೇಸು ಧರ್ಮಶಾಸ್ತ್ರವನ್ನು ಇಲ್ಲದಂತಾಗ ಮಾಡಿದನು (2:14) ಯಾಕೆಂದರೆ ಅದು ಬಲಹೀನವಾಗಿತ್ತು ಮತ್ಉು ನಮ್ಮ ಪಾಪಗಳನ್ನು ನಿವಾರಿಸುವದಕ್ಕೆ ನಿಷ್ಪ್ರಯೋಜಕವಾಗಿತ್ತು (ರೋಮಾ 8:3; ಇಬ್ರಿಯ 7:18, 19). ಧರ್ಮಶಾಸ್ತ್ರವು ತನ್ನ ಆಜ್ಞೆಗಳನ್ನು ಮೀರಿದವರ ಮೇಲೆ ಶಾಪವನ್ನುಂಟು ಮಾಡಿತು (ಗಲಾತ್ಯ 3:10). ಎಲ್ಲರೂ ಪಾಪ ಮಾಡಿದ್ದಾರಾದ್ದರಿಂದ, ಎಲ್ಲರೂ ಶಾಪಕ್ಕೊಳಗಾದರು (ರೋಮಾ 3:23). ಕ್ರಿಸ್ತನು

ನಮ್ಮನ್ನು ಧರ್ಮಶಾಸ್ತ್ರದ ಶಾಪದಿಂದ ವಿಮೋಚಿಸಿದನು (ಗಲಾತ್ಯ 3:13).

ಧರ್ಮಶಾಸ್ತ್ರವು ಕರುಣೆಯಿಲ್ಲದ್ದಾಗಿದ್ದರೆ (ಇಬ್ರಿಯ 10:28), ಹೊಸ ಒಡಂಬಡಿಕೆಯ ಅಡಿಯಲ್ಲಿ ಕರುಣೆಯು ಒದಗಿಸಲ್ಪಟ್ಟಿತು (ಇಬ್ರಿಯ 8:12). ಕೃಪೆಯು ಧರ್ಮಶಾಸ್ತ್ರದ ಮೂಲಕ ಬರಲಿಲ್ಲ (ಗಲಾತ್ಯ 5:4), ಆದರೆ ಯೇಸು ಕೃಪೆಯನ್ನೂ ಸತ್ಯವನ್ನು ತಂದನು (ಯೋಹಾನ 1:14, 16, 17). ಧರ್ಮಶಾಸ್ತ್ರವು ತನ್ನ ಅಧೀನದಲ್ಲಿರುವವರಿಗೆ ಮರಣವನ್ನುಂಟು ಮಾಡಿತು (2 ಕೊರಿಂಥ 3:7). ಆತ್ಮೀಕ ಜೀವವು ಯೇಸುವಿನ ಮುಖಾಂತರ ಮಾತ್ರವೇ ಬರಬಲ್ಲದ್ದಾಗಿದೆ (ಯೋಹಾಣ 14:6; 1 ಯೋಹಾನ 5:11, 12).

ಧರ್ಮಶಾಸ್ತ್ರದ ಅಡಿಯಲ್ಲಿ ಜೀವಿಸಲು ಪ್ರಯತ್ನಿಸುವವರು ದಂಡನೆಯ ತೀರ್ಪನ್ನು ಹೊಂದಿದವರು (ನೋಡಿರಿ 2 ಕೊರಿಂಥ 3:9) ಮತ್ತು ನೀತಿಯಿಲ್ಲದವರಾಗಿದ್ದಾರೆ (ಗಲಾತ್ಯ 2:21; 3:21). ಯೇಸುವಿನಲ್ಲಿರುವವರು ಆತನ ಮುಖಾಂತರ ನೀತಿವಂತರಾಗಿಸ್ಪಡುತ್ತಾರೆ (ರೋಮಾ 5:21; 2 ಕೊರಿಂಥ 5:21).

ಪಾಪಿಗಳ ಪಾಪದ ಕಾರಣದಿಂದಾಗಿ ಸೈತಾನನಿಗೆ ಅವರ ಮೇಲೆ ಅಧಿಕಾರವಿರುತ್ತದೆ (ಇಬ್ರಿಯ 2:14). ಕ್ಷಮಾಪಣೆಯನ್ನು ನೀಡಿ ಧರ್ಮಶಾಸ್ತ್ರವನ್ನು ತೆಗೆದು ಹಾಕುವ ಮೂಲಕ, ಯೇಸು ಸೈತಾನನನ್ನು ಮತ್ತು ಆತನ ದುಷ್ಟ ಶಕ್ತಿಗಳನ್ನು ಸೋಲಿಸಿದ್ದಾನೆ. ಕ್ರೈಸ್ತರು ಯೇಸುವಿನ ಮೂಲಕ ಜಯವನ್ನು ಗಳಿಸಬಲ್ಲರು (1 ಕೊರಿಂಥ 15:56, 57).

---

## ಅಡಿಟಿಪ್ಪಣಿಗಳು

[1]*Blepete ಯನ್ನು ಒಂದು ಎಚ್ಚರಿಕೆಯ ಮಾತಾಗಿ ಸಹ ಬಳಸಬಹುದಾಗಿದೆ* (ನೋಡಿರಿ ಮತ್ತಾಯ 24:4; ಮಾರ್ಕ 4:24; 8:15; 12:38; 13:5, 9, 23, 33; ಅಪೊಸ್ತಲರ ಕೃತ್ಯಗಳು 13:40; ಗಲಾತ್ಯ 5:15; ಫಿಲಿಪ್ಪಿ 3:2; ಇಬ್ರಿಯ 3:12). [2]Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick William Danker (Chicago: University of Chicago Press, 2000), 955. [3]A. T. Robertson, *Paul and the Intellectuals: The Epistle to the Colossians*, rev. and ed. W. C. Strickland (Nashville: Broadman Press, 1959), 77. [4]Clement of Alexandria *Stromata* 1.11; 6.8. [5]Philo *The Posterity and Exile of Cain* 101. [6]"ಮೋಸ" ಎಂಬುದರ ಅನುವಾದಿತ ಗ್ರೀಕ್ ಪದವು ಮತ್ತಾಯ 13:22; ಮಾರ್ಕ 4:19; ಎಫೆಸ 4:22; 2 ಥೆಸಲೋನಿಕ 2:10; ಇಬ್ರಿಯ 3:13; 2 Peter 2:13ರಲ್ಲಿ ಸಹ ಕಾಣಿಸಿಕೊಳ್ಳುತ್ತದೆ. [7]David M. Hay, *Colossians,* Abingdon New Testament Commentaries (Nashville: Abingdon Press, 2000), 87-88. [8]Herbert M. Carson, *The Epistles of Paul to the Colossians and Philemon: An Introduction and Commentary*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1960), 63-64. [9]ಈ ಆಶೀರ್ವಾದಗಳು ರೋಮಾ 3:24; 8:1, 39; 1 ಕೊರಿಂಥ 1:2, 4 (ನೋಡಿರಿ 2 ತಿಮೊಥೆ 1:9); 2 ಕೊರಿಂಥ 5:17, 19, 21; ಎಫೆಸ 1:7; 2:13; ಕೊಲೊಸ್ಸೆ 1:14; 2 ತಿಮೊಥೆ 2:10; 1 ಯೋಹಾನ 5:11ರಲ್ಲಿ ಅನುಕ್ರಮವಾಗಿ ತಿಳಿಸಲ್ಪಟ್ಟಿರುತ್ತವೆ. [10]1 ಕೊರಿಂಥ 11:3; ಎಫೆಸ 1:22; 4:15; 5:23; ಕೊಲೊಸ್ಸೆ 1:18.

[11]Ralph P. Martin, *Colossians and Philemon*, New Century Bible Commentary (Grand Rapids, Mich.: Wm. B. Eerdmans Publishing Co., 1973), 82. [12]Ibid., 81. [13]KJVಯು *sarx* ನ್ನು 147 ಸಾರಿ "ಶರೀರ," ಎರಡು ಸಾರಿ "ಪ್ರಾಕೃತ," ಒಂದು ಸಾರಿ "ಪ್ರಾಕೃತವಾಗಿ," ಮತ್ತು ಒಂದು ಸಾರಿ "ಶಾರೀರಿಕವಾಗಿ" ಎಂದು ಅನುವಾದಿಸುತ್ತದೆ. [14]H. C. G. Moule, *The Epistles to the Colossians and to Philemon*, The Cambridge Bible for Schools and Colleges (Cambridge: University Press, 1893; reprint, 1902), 103. [15]Ibid. [16]R. C. Lucas, *The Message of Colossians and Philemon: Fullness and Freedom*, The Bible Speaks Today (Downers Grove, Ill.: InterVarsity Press,

1980), 102. [17]Hay, 94–95. [18]Carson, 67. [19]ಈ ಪದಗಳಾವವೆಂದರೆ συνθάπτω (*sunthaptō,* "ಯೊಂದಿಗೆ ಹೂಣಲ್ಪಟ್ಟು"; ವ. 12); συνεγείρω (*sunegeirō*, "ಯೊಂದಿಗೆ ಎಬ್ಬಿಸಲ್ಪಟ್ಟು"; ವ. 12b); ಮತ್ತು συζωοποιέω (*suzōopoieo*, "ಯೊಂದಿಗೆ ಬದುಕಿಸಲ್ಪಟ್ಟಿರು"; ವ. 13). ರೋಮಾ 6:5, 8; ಫಿಲಿಪ್ಪಿ 3:10; ಕೊಲೊಸ್ಸೆ 3:1; 2 ತಿಮೊಥೆ 2:11 ಯೊಂದಿಗೆ ಹೋಲಿಸಿರಿ. [20]John E. Burkhart, *Worship* (Philadelphia: Westminster Press, 1982), 131.

[21]William Hendriksen, *Exposition of Colossians and Philemon*, New Testament Commentary (Grand Rapids, Mich.: Baker Book House, 1964), 117, n. 87. [22]*American Heritage Dictionary*, 3d ed. (2001), s.v. "baptize." [23]Ernest Klein, *A Comprehensive Etymological Dictionary of the English Language* (Amsterdam: Elsevier Publishing Co., 1966), 1:147. [24]Lars Hartman, "Baptism," in *The Anchor Bible Dictionary*, ed. David Noel Freeman (New York: Doubleday, 1992), 1:583. [25]Massey H. Shepherd, Jr., *Encyclopedia International* (Danbury, Conn.: Lexicon Publications, 1981), 378. [26]J. B. Lightfoot, *Notes on the Epistles of St. Paul: 1 and 2 Thessalonians, 1 Corinthians 1—7, Romans 1—7, Ephesians 1:1–14*, Thornapple Commentaries (London: MacMillan & Co., 1895; reprint, Grand Rapids, Mich.: Baker Book House, 1980), 296. [27]Robert G. Bratcher and Eugene A. Nida, *A Translators Handbook on Paul's Letters to the Colossians and to Philemon*, Helps for Translators (New York: United Bible Societies, 1977), 57. [28]Warren W. Wiersbe, *The Bible Exposition Commentary* (Colorado Springs, Colo.: Chariot Victor Publishing, Cook Communications, 1989), 2:127. [29]James D. G. Dunn, *The Epistles to the Colossians and to Philemon*, The New International Greek Commentary (Grand Rapids, Mich.: Wm. B. Eerdmans Publishing Co., 1996), 156. [30]Albrecht Oepke, "βάπτω," in *Theological Dictionary of the New Testament*, ed. Gerhard Kittel, trans. and ed. Geoffrey W. Bromiley (Grand Rapids, Mich.: Wm. B. Eerdmans Publishing Co., 1964), 1:539.

[31]Barclay M. Newman and Eugene A. Nida, *A Translators Handbook on Paul's Letter to the Romans* (New York: United Bible Societies, 1973), 53. [32]A. S. Peake, *Epistle to the Colossians*, The Expositor's Greek Testament, ed. W. Robertson Nicoll (New York: George H. Doran Co., 1897), 526. [33]C. G. Wilke and Wilibald Grimm, *A Greek-English Lexicon of the New Testament*, trans. and rev. Joseph H. Thayer (Edinburgh: T. & T. Clark, 1901; reprint, Grand Rapids, Mich.: Baker Book House, 1977), 513. [34]Walter Bauer, *A Greek-English Lexicon of the New Testament and Other Early Christian Literature*, 2d ed., trans. William F. Arndt and F. Wilbur Gingrich, rev. and aug. F. Wilbur Gingrich and Frederick W. Danker (Chicago: University of Chicago Press, 1979), 663. [35]Bauer (2000), 819. [36]See J. B. Lightfoot, *St. Paul's Epistles to the Colossians and to Philemon*, rev. (London: Macmillan & Co., 1916), 185; and Carson, Colossians, 67. ದ್ವಿತೀಯಾರ್ಥಕ ಷಷ್ಠಿ ಕಾಣಿಸಿಕೊಳ್ಳುವ ಇತರೆ ವಾಕ್ಯಭಾಗಗಳನ್ನು ನೋಡಿರಿ: ಮಾರ್ಕ 11:22; ರೋಮಾ 3:22, 26; ಗಲಾತ್ಯ 2:16, 20; 3:22; ಎಫೆಸ 3:12; ಫಿಲಿಪ್ಪಿ 1:27; 3:9; 2 ಥೆಸಲೋನಿಕ 2:13. [37]Marvin R. Vincent, *Word Studies in the New Testament* (Grand Rapids, Mich.: Wm. B. Eerdmans Publishing Co., 1946), 3:168. [38]ಇದೇ ಪದವು ಎಫೆಸ 1:19; 3:7; 4:16; ಫಿಲಿಪ್ಪಿ 3:21; ಕೊಲೊಸ್ಸೆ 1:29; 2 ಥೆಸಲೋನಿಕ 2:9, 11 ರಲ್ಲಿ ಕಾಣಿಸಿಕೊಳ್ಳುತ್ತದೆ. [39]J. Ithel Jones, *The New Bible Commentary* (Grand Rapids, Mich.: Wm. B. Eerdmans Publishing Co., 1964), 1048. [40]William Barclay, *The Letters to the Philippians, Colossians, and Thessalonians*, rev. ed., The Daily Study Bible Series (Philadelphia: Westminister Press, 1975), 140.

[41]Herbert M. Carson, *Stand Perfect in Wisdom* (Grand Rapids, Mich.: Baker Book House, 1981), 110. [42]Lewis B. Radford, *The Epistle to the Colossians and the Epistle to Philemon*, Westminster Commentaries (London: Methuen and Co., 1931), 232. [43]Ralph P.

Martin, *Colossians: The Church's Lord and the Christian's Liberty* (Exeter, England: Paternoster Press, 1972), 87. [44]Bratcher and Nida, 58. [45]G. R. Beasley-Murray, *Baptism in the New Testament* (Grand Rapids, Mich.: Wm. B. Eerdmans Publishing Co., 1962), 154. [46]Karl Braune, "The Epistle of Paul to the Colossians," in *A Commentary on the Holy Scriptures: Critical, Doctrinal, and Homiletical, with Special Reference to Ministers and Students*, trans. M. B. Riddle, ed. John Peter Lange (Edinburgh: T. & T. Clark, 1870), 7:46. [47]Eduard Schweizer, *The Letter to the Colossians: A Commentary*, trans. Andrew Chester (Zürich: Benziger Verlag, 1976; reprint, Minneapolis: Augsburg Publishing House, 1982), 146. [48]J. Gresham Machen, *New Testament Greek for Beginners* (Toronto: Collier-Macmillan, 1951), 12. [49]ನೋಡಿರಿ ರೋಮಾ 5:15-18, 20; 11:11, 12; 2 ಕೊರಿಂಥ 5:19; ಗಲಾತ್ಯ 6:1; ಎಫೆಸ 1:7; 2:1, 5. [50]Bauer (2000), 770.

[51]Ibid., 954. [52]Peter T. O'Brien, *Colossians, Philemon*, Word Biblical Commentary, vol. 44 (Waco, Tex.: Word Books, 1982), 119. [53]Bratcher and Nida, 60. [54]Bauer (2000), 290. [55]Ibid., 1083. [56]Ibid., 254. [57]E. K. Simpson and F. F. Bruce, *Commentary on the Epistles to the Ephesians and the Colossians*, The New International Commentary on the New Testament (Grand Rapids, Mich.: Wm. B. Eerdmans Publishing Co., 1957), 238. [58]Hendriksen, 120–21. [59]Ibid., 121, n. 90. [60]Carson, *Colossians*, 69.

[61]ನೋಡಿರಿ ವಿಮೋಚನಕಾಂಡ 34:22-25; ಯಾಜಕಕಾಂಡ 10:9; 11:1-40; ಅರಣ್ಯಕಾಂಡ 10:10; 29:6; ಧರ್ಮೋಪದೇಶಕಾಂಡ 5:12-15; 2 ಪೂರ್ವಕಾಲವೃತ್ತಾಂತ 8:13. [62]Lightfoot, *Colossians*, 189. [63]Carson, *Colossians*, 69. [64]Bauer (2000), 344. [65]Ibid., 28–29. [66]H. Dermot McDonald, *Commentary on Colossians & Philemon* (Waco, Tex.: Word Books, 1980), 86. [67]Ibid. [68]Clinton E. Arnold, *The Colossian Syncretism* (Grand Rapids, Mich.: Baker Books, 1996), 279. [69]Ibid., 302. [70]Ibid., 281.

[71]Bratcher and Nida, 63. [72]Bauer (2000), 915. [73]Eduard Schweizer, "σάρξ," in *Theological Dictionary of the New Testament*, ed. Gerhard Friedrich, trans. and ed. Geoffrey W. Bromiley (Grand Rapids, Mich.: Wm. B. Eerdmans Publishing Co., 1971), 7:135. [74]McDonald, 102. [75]Hendriksen, 116, n. 86.